CC-O. In Public Domain. Digitized by eGangotri

ಜಾಗೃತ ಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವಗೃಹ ಭೂಕಂಪ

ರಂಗನಾಟಕ

ಲೇಖಕರು:
ಡಾ|| ಎಚ್. ಕೆ. ರಂಗನಾಥ್

ಶಾರದಾ ಪ್ರಕಟನಾಲಯ
ಅರಳೇಪೇಟೆ : : ಬೆಂಗಳೂರು-೨

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಥಮ ಮುದ್ರಣ :
ಸೆಪ್ಟೆಂಬರ್ ೧೯೬೩
ದ್ವಿತೀಯ ಮುದ್ರಣ :
ಜೂನ್ ೧೯೬೮

[ಲೇಖಕರ ಲಿಖಿತ ಅನುಮತಿ ಪಡೆಯದೆ
ನಾಟಕವನ್ನಾಗಲೀ ನಾಟಕದ ಭಾಗಗಳನ್ನಾಗಲೀ
ಅಭಿನಯಿಸಕೂಡದು.]

ಬೆಲೆ : ಒಂದು ರೂಪಾಯಿ ಎಪ್ಪತ್ತೈದು ಪೈಸೆ.

ಮುದ್ರಣ :
ರೋಹಿಣಿ ಪ್ರಿಂಟರ್ಸ್
ಅರಳೇಪೇಟೆ ಬೆಂಗಳೂರು-೨

CC-O. In Public Domain. Digitized by Sri Vidyabharathi Book Trust, Sringeri

CC-O. In Public Domain. Digitized by eGangotri

ಭಾರತ ಸರ್ಕಾರದ ಕೇಂದ್ರ ಸಂಗೀತ ನಾಟಕಭಾಗದವರು ಕೇಳಿದ ಮೇರೆಗೆ ಈ ನಾಟಕವನ್ನು ಹಲವಾರು ತಿಂಗಳುಗಳ ಹಿಂದೆಯೇ ಬರೆಯ ತೊಡಗಿದ್ದೆ. ಒಂದು ದೇಶದ ಜನ, 'ನಾನು–ನೀನು–ಅವನು' ಎನ್ನದೇ ಭುಜಕ್ಕೆ ಭುಜ ಕೊಟ್ಟು 'ನಾವು' ಎಂದು ನಿಂತಾಗಲೇ ಆ ದೇಶದ ಉದ್ಧಾರ ಎನ್ನುವುದು ನಾಟಕದ ವಸ್ತುವಾಗಿತ್ತು.

ಒಮ್ಮೆಲೇ ಚೀನಿಯರು ನಮ್ಮ ನೆಲದ ಮೇಲೇರಿ ಬಂದರು. ಕೂಡಲೇ ದೇಶದ ಜನತೆ, ತನ್ನಲ್ಲಿನ ಎಲ್ಲ ವ್ಯತ್ಯಾಸಗಳನ್ನೂ ತುಳಿದು ಮೆಟ್ಟಿ ಮೈಕೊಡವಿ ಮೇಲೆದ್ದು ನಿಂತು ಹೂಂಕರಿಸಿತು. ಇದನ್ನು ಕಂಡವನ, ಭಾವಿಸಿಕೊಂಡವನ ಮೈ ಜುಮ್ಮುಗುಟ್ಟಿತು. ಸಾವಿರ ಮಾತು ನೂರು ಬರಹಗಳು ಸಾಧಿಸಲಾಗ ದುದನ್ನೂ, 'ಚೀನಿಯರು ಕೊಟ್ಟಂತಹ ಒಂದು ಅನುಭವ, ರಾಷ್ಟ್ರವನ್ನು ಒಂದಾಗಿ ಬೆಸೆದು ನಿಲ್ಲಿಸಿ, ಸಾಧಿಸುವುದೆಂಬುದು ಸರ್ವವಿದಿತವಾಯಿತು. ಬರೆ ಯುತ್ತಿದ್ದ ನಾಟಕ, ಅಲ್ಲಿಗೆ, ಅರ್ಧಕ್ಕೆ ನಿಂತುಹೋಯಿತು.

ಕೇಂದ್ರ ಸಂಗೀತ ನಾಟಕ ವಿಭಾಗದ ಬೆಂಗಳೂರು ಕಾರ್ಯದರ್ಶಿ ಯವರಾದ ಶ್ರೀ ಎನ್.ಎಸ್.ವೆಂಕೋಬರಾಯರು, ಮತ್ತೆಮತ್ತೆ ಕೇಳಿದಾಗ, ಈ ನಾಟಕ ಉದ್ದೇಶಿಸಿದ ಗುರಿಯನ್ನು ನಾವು ಎಂದೋ ಮುಟ್ಟಿದುದರಿಂದ ಅದನ್ನು ಮುಂದುವರಿಸುವುದಿಲ್ಲವೆಂದು ಹೇಳಿದೆ. ಆದರೆ ಅವರು ಬಿಡದೆ ಹಿಡಿದ ಜಿಗುಟು ಪಟ್ಟನಿಂದಾಗಿ ನಾಲ್ಕಾರು ತಿಂಗಳ ನಂತರ ಮುಂದುವರಿಸಿ ನಾಟಕ ವನ್ನು ಪೂರ್ತಿ ಮಾಡಿದೆ. ಅದು ಇಂದು ಬೆಳಕು ಕಾಣುತ್ತಿದೆ. ಚೀನಿಯರು ಕೊಟ್ಟಂತಹ ಕಹಿ ಅನುಭವಕ್ಕಾಗಿ ಕಾಯದೆ, ಅಂತಹ ಒಂದು ಸಂಕಷ್ಟ ಕಾಲ ದಲ್ಲಿ ಮಾತ್ರ 'ನಾವು ಒಂದು' ಎನ್ನದೆ, 'ನಾವೆಂದೆಂದೂ ಒಂದೇ' ಎಂಬ ಏಕತೆಯ ಭಾವ ತಳೆದು, ಹಾಗೆ ನುಡಿದು, ಹಾಗೆಯೇ ನಡೆದು ತೋರಿ ದಾಗಲೇ ಚೀನಿಯರಂತಹ ಮೂರನೆಯವನು ಮತ್ತೊಮ್ಮೆ ನಮಗೆ ಆ ಅನುಭವ ಕೊಡಲು ಅಂಜುತ್ತಾನೆ ಎಂಬ ಮಾತನ್ನು ಈ ನಾಟಕ ಒಳ ಗೊಂಡಿದೆ. ಈ ಪುಸ್ತಕದ ೯೨ ಮತ್ತು ೯೩ನೆಯ ಪುಟಗಳಲ್ಲಿ ಬರುವ ಕೆಲವು ಮಾತುಗಳನ್ನು ದಿವಂಗತ ಶ್ರೀ ನವರತ್ನ ರಾಮರಾಯರ ಲೇಖನ ವೊಂದರಿಂದ ತೆಗೆದುಕೊಂಡಿದ್ದೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತೂ ಈ ನಾಟಕವನ್ನು ನನ್ನಿಂದ ಬರೆಯಿಸಿದ ಶ್ರೀ ವೆಂಕೋಬ ರಾಯರಿಗೆ, ನಾಟಕವಸ್ತು ಹಾಗೂ ರಂಗತಂತ್ರದ ರೀತಿಯನ್ನು ಮೆಚ್ಚಿ ತುಂಬ ಉತ್ತೇಜನವಿತ್ತ ಕೇಂದ್ರ ನಾಟಕ ಸಂಗೀತ ವಿಭಾಗದ ಡೈರೆಕ್ಟರ್‌ರವರಾದ ಕರ್ನಲ್ ಎಚ್. ವಿ. ಗುಪ್ತೆ ಅವರಿಗೆ ವಂದನೆ ಸಲ್ಲಿಸುತ್ತಿದ್ದೇನೆ.

ಈ ನಾಟಕದ ಮೊದಲ ಪ್ರಯೋಗದ ಈದಿನ, ಸಮಾರಂಭದ ಅಧ್ಯಕ್ಷತೆ ವಹಿಸಿ, ಈ ಪುಸ್ತಕವನ್ನು ಸ್ವಹಸ್ತದಿಂದ ಹೊರತಂದ ಮೈಸೂರು ರಾಜ್ಯದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಆಭಾರ ಮನ್ನಿಸುತ್ತಿದ್ದೇನೆ.

ವಿಶೇಷ ಪರಿಶ್ರಮವಹಿಸಿ ನಾಟಕವನ್ನು ಮೊದಲಬಾರಿಗೆ ರಂಗದ ಮೇಲೆ ತಂದ ಬೆಂಗಳೂರಿನ ರವಿ ಕಲಾವಿದರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಪುಸ್ತಕವನ್ನು ಚೆಲುವು ಮಾಡಿದ ಗೆಳೆಯರು–ಶಾರದಾ ಪ್ರಕಟನಾಲಯದ ಶ್ರೀ ಜಿ. ಬಸವರಾಜ್ ಅವರಿಗೆ ನಾನು ಋಣಿ.

ಆಕಾಶವಾಣಿ
ಬೆಂಗಳೂರು — ಎಚ್. ಕೆ. ರಂಗನಾಥರ
೭ನೇ ಸೆಪ್ಟೆಂಬರ್ ೧೯೬೩

ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಬಿ.ಕಾಂ. ವಿದ್ಯಾರ್ಥಿಗಳ ಪಠ್ಯಪುಸ್ತಕವನ್ನಾಗಿ ಈ ನಾಟಕವನ್ನು ನಿಯೋಜಿಸಿ, ಇದರ ಮತ್ತೊಂದು ಆವೃತ್ತಿ ಹೊರಬರಲು ಆಸ್ಪದವಿತ್ತ ಪಠ್ಯಪುಸ್ತಕ ಸಮಿತಿಯವರಿಗೆ ಕೃತಜ್ಞನಾಗಿದ್ದೇನೆ. ನಾಟಕದ ಪುನರಾವೃತ್ತಿ ಹೊರಬರುವಲ್ಲಿ ಹಿರಿಯ ಸಾಹಿತಿಗಳೂ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರೊಫೆಸ್ಸರಾದ ಡಾ|| ಆರ್. ಎಸ್. ಮುಗಳಿ ಅವರಿಗೆ ವಂದನೆ ಸಲ್ಲಿಸುತ್ತಿದ್ದೇನೆ.

ಎಂದಿನಂತೆ ಇಂದೂ ಅದೇ ಆತ್ಮೀಯತೆಯಿಂದ ಪುನರಾವೃತ್ತಿಯ ಹೊಣೆಯನ್ನೆಲ್ಲ ಹೊತ್ತು ನೆರವು ನೀಡಿದ ಗೆಳೆಯ ಬಸವರಾಜ್ ಅವರಿಗೆ ನಾನು ಋಣಿ.

—ಎಚ್. ಕೆ. ರಂಗನಾಥ್

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾಗೃತ ಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು ರಂಗದ ಮೇಲೆ :

ರಾಯರು - ಸುಮಾರು 60 ವರ್ಷ - ನಿವೃತ್ತ ಅಧಿಕಾರಿ
ಪಾತಮ್ಮ - ,, 50 ,, - ಹೆಂಡತಿ
ಭಟ್ಟರು - ,, 55 ,, - ದೊಡ್ಡ ಹೊಟ್ಟೆಯ ಸಣ್ಣ ತಲೆಯ ಆಸಾಮಿ
ಕಿಟ್ಟಣ್ಣ ,, - ತೆಳುವಿನ, ನೀಟಾದ
ಮಾಸ್ತರು ,, 60 ಗಂಭೀರ ವ್ಯಕ್ತಿ
ಚಿಕ್ಕತ್ತೆ - ,, 65 ,, - ಮಡಿಯಾಕೆ
ಪುಟ್ಟರಾಮು - ,, 28 ,, - ರಾಯರ ಮಗ
ಆನಂದು – ,, ,, ,, - ಮಾಸ್ತರ ಮಗ
ಶೋಭಾ - ,, 23 ,, - ಸುಂದರಿಯಾದ ವಧು
ಬೀಗರು - ,, 65 ,, - ಮಹಾರಾಷ್ಟ್ರದ ಸಾತ್ವಿಕ ವೃದ್ಧರು

ಪಾತ್ರಗಳು ಒಳರಂಗದಲ್ಲಿ :

ಒಟ್ಟು ಐದು, ಆರು ಮಂದಿ. ಒಳ ದೃಶ್ಯಗಳಲ್ಲಿ, ಅವರೇ ವಟುಗಳಾಗಿ, ಅಶೋಕ, ಉಪಗುಪ್ತ, ಸಿಕಂದರ್, ಪೋರಸ್ ಹಾಗೂ ಅಂಭಿಯ ಪಾತ್ರಗಳಲ್ಲಿ ಬರುತ್ತಾರೆ. "ಮ್ಲಾನ ಮುಖಿ" ಯೊಬ್ಬಳಿದ್ದಾಳೆ. ಆಕೆಯೇ ಕಡೆಯ ಒಳದೃಶ್ಯದಲ್ಲಿ 'ಭಾರತ ಮಾತೆ'ಯಾಗಿ ಕಾಣಿಸಿ ಕೊಳ್ಳುತ್ತಾಳೆ.

ರಂಗಸಜ್ಜಿಕೆ

ಹಿನ್ನೆಲೆಯಲ್ಲಿ, ಮಧ್ಯೆ ಸೀಳಿ ಅತ್ತಿತ್ತ ಸರಿಯಬಹುದಾದ ತೆಳು ನೀಲಿಯ ಪರದೆ ಇದೆ. ಅದರ ಮುಂದೆ ಮುನ್ನೆಲೆಯಲ್ಲಿ ಬಡತನವಿಲ್ಲದ ಸಂಪ್ರದಾಯಸ್ಥ ಮನೆಯ ಡ್ರಾಯಿಂಗ್ ರೂಂ ಎಂದು ಸೂಚಿಸುವಂತೆ ರಂಗಸಜ್ಜಿಕೆಯಾಗಿದೆ. ಒಳ ದೃಶ್ಯಗಳೆಲ್ಲ ಮೇಲೆ ಹೇಳಿದ ತಿಳಿ ನೀಲಿಯ ಪರದೆಯ ಹಿಂದೆ ನಡೆಯುವುದರಿಂದ ಮುನ್ನೆಲೆಯ ರಂಗಸಜ್ಜಿಕೆ ಆ ದೃಶ್ಯಗಳಿಗೆ ಅಡ್ಡಿಯಾಗಲಾರದು.

CC-O. Vidyaratna Kannada Bhavan Archive, Sringeri

CC-O. In Public Domain. Digitized by eGangotri

[ಪರದೆ ಏಳುತ್ತಿದ್ದಂತೆ, ರಂಗದ ಒಂದು ಪಾರ್ಶ್ವದ ಮುಂದಿನ ಕುರ್ಚಿಯಲ್ಲಿ ತಲೆಯಮೇಲೆ ಕೈಹೊತ್ತು ರಾಯರು ಕುಳಿತಿದ್ದಾರೆ. ಮತ್ತೊಂದು ಕೈಯಲ್ಲಿ ಪತ್ರ]

ರಾಯರು :

(ಪರದೆ ಎದ್ದಮೇಲೆ ಪ್ರೇಕ್ಷಕರನ್ನು ಉದ್ದೇಶಿಸಿ) ಹೂಂ ! ಅಂತೂ ಪರದೆ ಎತ್ತಿದ ಹಾಗಾಯಿತು ! ಇನ್ನು ಇವಳ ಅವತಾರ ಪೂರ್ತಿಯಾಗಿದ್ದರೆ ಬರ್ತಾಳೇನೋ ನೋಡೋಣ ! ಪಾತೂ—ಏ—ಏನೇೇ-

ಪಾತಮ್ಮ :

(ಒಳಗಿನಿಂದಲೇ) ಬಂದೇೇ—ಬಂದೇೇಂ—ದೆ.

ರಾಯರು :

ಒಂದೇ ಹಣೇಬರಹ ! ಬಂದೇ-ಬಂದೇ ಅಂತಾನೇ ಕಾಯಿಸೀ ಕಾಯಿಸೀ ಕೊಂದೆ ನೀನು ನನ್ನ. ಎಷ್ಟು ಹೊತ್ತಿನಿಂದ ಕೂಗ್ತಿದೀನಿ-

ಪಾತಮ್ಮ :

(ಬರುತ್ತಾ) ಏನದು ಒಂದೇ ಸಮ ಹಾಗೆ ಕೂಗಿಕೊಂಡ್ರಿ-ಹೆಸರು ಹಿಡಿದು-ಈಗ್ತಾನೆ ಮದುವೆಯಾದ ಹರಯದ ಹುಡುಗನ ಹಾಗೆ-?

ರಾಯರು :

ಹಂ ! ಬಂದ್ಯಾ ! ಏನಿಲ್ಲ ! ಪರದೇನ ಎತ್ತಿದ ಹಾಗಾಯ್ತು ಅಂತ ಹೇಳೋದಕ್ಕೆ—ಕೂಗಿದ್ದು !

ಪಾತಮ್ಮ :

ಆ್ಹಂ ?

ರಾಯರು :

ಆ್ಹಂ—ಅಂದರೆ ?

ಪಾತಮ್ಮ :

ಏನದು ಒಗಟು ಮಾತು—ನಿಮ್ಮದು ?

ರಾಯರು :

ಪರದೆ ! ಕರೀ ಪರದೆ !! ನನ್ನ ಮನಸ್ಸನ್ನ ಇದುವರೆಗೂ ಮುಸುಕಿದ್ದ ಕರೀ ಪರದೇನ ನಿನ್ನ ಸುಕುಮಾರಾ—ಮೇಲಕ್ಕೆ ಎತ್ತಿದಾ—ಅಂದೆ.

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಪಾತಮ್ಮ :

ಯಾಕೆ ಹೀಗೆ ಹಂಗಿಸಿ ಮಾತಾಡ್ತೀರಿ ? ಪರದೆ ಒಳಗೆ ಪಾಪ, ಪ್ರಾಕ್ಟೀಸ್ ಮಾಡಿಕೊತಿದಾರೆ ಅವರೆಲ್ಲ ! ನಾನೂ ಆಲ್ಲೇ ಕೂತಿದ್ದೆ ! ಚೆನ್ನಾಗಿದೆ ಅಂದ್ರೆ ಮೋಹನ ಮಾಡ್ತೀರೋ ನಾಟಕ !

ರಾಯರು :

ಚೆನ್ನಾಗಿದೆಯೆ ? ಅಹ ! ನಿನ್ನ ಕವಿದಿರೋ ಕತ್ತಲೇ ಪರದೇನ ಎತ್ತೋದಕ್ಕೆ ಪರಮಾತ್ಮನೇ ಇನ್ನೊಂದು ಅವತಾರ—

ಪಾತಮ್ಮ :

ಏನಿದು ? ಏನೇನೋ ಮಾತಾಡ್ತಿದೀರಿ ಇವತ್ತು ! ಹುಷಾರಿಲ್ವೆ ?

ರಾಯರು :

ಹುಷಾರು ತಪ್ಪೋ ಹಾಗೆ ಮಾಡಿದಾನೆ— ನಿನ್ನ ಸುಕುಮಾರ.

ಪಾತಮ್ಮ :

ಏನ್ಮಾಡಿದ ಅಂಥದು ಅವನು ? ಪಾಪ ! ಏನೋ ಹುಡುಗರು ನಾಟಕ ಆಡ್ತೇವೆ ಅಂದರೆ, ಅಯ್ಯಯ್ಯ, ನಿಮಗೆ ಸ್ವಲ್ಪವೂ ಸಹನೆ ಇಲ್ಲ !

ರಾಯರು :

ಇವನಲ್ಲ ಕಣೇ–ಇವನದಂತೂ ಆಯ್ತಲ್ಲ—ನಾಟಕ, ನಾಟಕಾ ಅಂತ ನಾಟಕವೇ ಜೀವನ ! ನಾನು ಹೇಳ್ತಿರೋ ಕತೆ ನಿನ್ನ ದೊಡ್ಡ ಮಗಂದು ! ಅವನ ಜೀವನವೇ ನಾಟಕವಾಗಿ ಹೋಗ್ತಾ ಇದೆ— ಆದರ ಅಂಕದ ಪರದೆ ಆಗಲೆ ಎತ್ತಿತೂ—ಅಂತ !

ಪಾತಮ್ಮ :

ಯಾಕೆ—ಏನ್ಮಾಡಿದ ನಂ ರಾಮು ? ಪುಟ್ಟರಾಮು ?

ರಾಯರು :

ಪತ್ರ ಬರೆದಿದಾನೆ ನಿನ್ನ ಪುಟ್ಟರಾಮು— ಪೂನಾದಿಂದ !

ಪಾತಮ್ಮ :

ಓಹೋ—ಅಂತೂ ಕಡೇಗೆ ರಾಮೂ ಕಾಗದ ಬಂತೇನು ? ತಿಂಗಳ ಮೇಲಾಗಿತ್ತು ಹುಡುಗ—ಬರೆದು ! ಹೇಳಲೇ ಇಲ್ವಲ್ಲಾಂದ್ರೆ—ಏನು ಬರೆದಿದಾನೆ ? ಯಾವಾಗ ಬರ್ತಾನಂತೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

(ಸಾವಧಾನವಾಗಿ) ಇವತ್ತೇ ಬರ್ತಾನಂತೆ !

ಪಾತಮ್ಮ :

ಈವತ್ತೇ ಬರ್ತಾನೆ !! ಅಯ್ಯೋ ಇವತ್ತೇ ಬರ್ತಾನೆಯೇ ? ಇದ್ದಕ್ಕಿದ್ದ ಹಾಗೆ ಹೀಗೆ ಬರ್ತಾನೆ ಅಂದೆ !? ಹುಷಾರಾಗಿ ಇದ್ದಾನೆ ತಾನೆ ? ಅವನಾಗಲೇ ಬಂದು ಹೋಗಿ ಮೂರು ತಿಂಗಳಾಯ್ತು, ಒಂದೂವರೆ ತಿಂಗಳಿಂದ ಕಾಗದ ಕೂಡ ಬರೆಯಲಿಲ್ಲ. ಹೋಗಿಯಾದರೂ ನೋಡಿ ಕೊಂಡು ಬನ್ನೀ ಅಂದ್ರೆ....ನಿಮ್ಮದೇ ಹಟ ! 'ಎಲ್ಲೋ ಟೂರ ಹೋಗಿರಬೇಕು—ಎಲ್ಲಿ ಹೋಗ್ತಾನೆ ನಿನ್ನ ಮಗ ! ಯಾರೂ ಕದ್ಕೊಂಡು ಹೋಗೊಲ್ಲ ಅವನ್ನ'—ಅಂತ ಹುಡುಗಾಟದ ಮಾತು ! ಅಂತೂ ಬರ್ತಾನಲ್ಲ ಸಧ್ಯ ! ಹೋದಸಲ ಬಂದಾಗ ಆದೆಷ್ಟು ತೆಗೆದು ಹೋಗಿದ್ದ ಪುಟ್ಟರಾಮು ! ಯಾರು ಕಣ್ಣು ಹಾಕಿದ್ದರೋ ಬೆಳಿಯೋ ಹುಡುಗನ ಮೇಲೆ ಅನ್ನಿಸ್ತು !

ರಾಯರು :

(ಸಾವಧಾನ) ಹೌದು ! ಆಗ ಕಣ್ಣು ಹಾಕಿದ್ದವರೇ ಈಗ ಅವನ ಬಾಯಲ್ಲಿ ಮಣ್ಣು ಹಾಕಿದ್ದಾರೆ !

ಪಾತಮ್ಮ :

ಹಯ್ಯೋ ಯಾಕಂದ್ರೆ—ಹೀಗೆ ಅಪಶಕುನ ಆಡ್ತೀರಿ ? ನೀವೋ ನಿಮ್ಮ ಮಾತೋ ! ಯಾವಾಗಿನಿಂದಲೂ ಹೀಗೇ ! ಒಳ್ಳೇ ಮಾತು—ಒಳ್ಳೇ ಕತೆ ಆನ್ನೋದೇ ಇಲ್ಲ !—ಯಾವಾಗ ಬರ್ತಾನಂತೆ ನಂ ಪುಟ್ಟರಾಮು?

ರಾಯರು :

"ಪುಟ್ಟರಾಮು" ಅಂತೀಯಾ ನೀನು ! ಬೆಟ್ಟದಂಥ ಬುದ್ಧಿ ಆವನಿಗೆ !

ಪಾತಮ್ಮ :

ಯಾಕೆ ಹೀಗೆ ಏನೇನೋ ಆಡ್ತಿದೀರಿ ಇವತ್ತು ? ಮಾತ್ರೆ ತೊಗೊಂಡ್ರಿ ಆಗಲೇ ! ಆದ್ರೂ ಕೇಳಿದ ಪ್ರಶ್ನೆಗೆ ಉತ್ತರ ಒಂದು ಬಿಟ್ಟು ಇನ್ನುಳಿದದ್ದನ್ನೆಲ್ಲಾ ಆಡ್ತಿದೀರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಆಗಲೇ ಹೇಳಿದೆನಲ್ಲ ! ಈವತ್ತು ಸಂಜೇನೆ ಬರ್ತಾನೆ ಅಂತ ಅಂದೆನಲ್ಲ! ಯಾಕೆ ಇನ್ನೊಂದೆರಡು ಗಂಟೆಯೊಳಗಾಗೇ ಬರಬೇಕು !

ಪಾತಮ್ಮ :

ಈಹೊತ್ತೇ ? (ಸಂಭ್ರಮದಿಂದ) ಸಂಜೇಗೆ ? ಈಗಲೆ ?

ರಾಯರು :

ಹೌದು ! ಹೆಂಡ್ತೀನ ಕರ್ಕೊಂಡು !

ಪಾತಮ್ಮ :

ಹೆಂಡ್ತಿ—? ಯಾರ ಹೆಂಡ್ತಿ ?

ರಾಯರು :

(ಸೋವಿನಲ್ಲಿಯೂ ನಗುತ್ತ) ಹಾಗೊಂದು ಮಾಡಲಿಲ್ಲ ನಮ್ಮ ಪುಣ್ಯಕ್ಕೆ ! ತನ್ನ ಹೆಂಡ್ತೀನೇ ಕರ್ಕೊಂಡು ಬರ್ತಾನಂತೆ! ಬರೆದಿದಾನೆ.

ಪಾತಮ್ಮ :

(ನಂಬದೆ) ಛೆ! ಏನು ಹಾಸ್ಯಾ ಮಾಡ್ತೀರೀಂದ್ರೆ--ಪಾಪ ನಂ ರಾಮು–

ರಾಯರು :

ಆದನ್ನೇ ನಿನಗೆ ಹೇಳೋಕೆ ಅರಚಿಕೊಂಡಿದ್ದು ನಾನು ! "ನಮ್ಮ ರಾಮು" "ಪುಟ್ಟರಾಮು" ಅಂತ ತಲೇಮೇಲೆ ಕೂರಿಸಿಕೊಂಡಿದೀಯೇ ! ಆ ನಿನ್ನ ರಾಮೂಗೆ ಈ ತಿಂಗಳ ಆರನೆಯ ತಾರೀಖು ಮದುವೆ ಆಯ್ತಂತೆ—ಪೂನಾದಲ್ಲಿ !

ಪಾತಮ್ಮ :

ಸಾಕು ಯಾರಾದರೂ ನಕ್ಕಾರು ಅಂದರೆ ! ನೀವು ಆಡೋ ಮಾತೋ —ನೀವೋ !

ರಾಯರು :

ನರ್ಸ್ ಕೆಲಸದವ್ಳೆದ್ದಾಳಂತೆ—ನಿನ್ನ ಸೊಸೆ !

ಪಾತಮ್ಮ :

ಅ್ಞಂ ?

CC-O. In Public Domain. Digitized by eGangotri

ರಾಯರು :

ಮರಾಠೀ ಹುಡುಗೀ.

ಪಾತಮ್ಮ :

ಇದೇನು ಬಂತು—ನಿಮಗೇ ಅಂತೀನಿ ! ಸುಮ್ಮ ಸುಮ್ಮನೆ ಇಲ್ಲದ್ದನ್ನೆಲ್ಲಾ ಆಡಬೇಡಿ.

ರಾಯರು :

ತನಗಿಂತ, ಆ ಹುಡುಗಿ—ನಾಲ್ಕಾರು ವರ್ಷ ಚಿಕ್ಕವಳು ಅಂತ ತಿಳ್ಕೊಂಡಿದಾನೆ.

ಪಾತಮ್ಮ :

(ಪೆಚ್ಚಾಗಿ) ನಿಜವೇ ಇದು ? ಆ್ಹಂ ? ಹೀಗೆ ಎಂದಾದರೂ ಮಾಡ್ತಾನೆಯೆ ನಂ ರಾಮೂ ?

ರಾಯರು :

ನಂ ರಾಮೂ ಅಂತ ಅನ್ಬೇಡಾ ನೀನು ? ನನ್ನ ಮನೆತನದ ಮಾನನೆಲ್ಲ ಹಾಳು ಮಾಡಿದ ಅವನು. (ಕೋಪ) ಇನ್ನು ಅವನು ನಂ ರಾಮು ಆಲ್ಲ !

ಪಾತಮ್ಮ :

ಎಲ್ಲಾದರೂ ಉಂಟೇ ಅಂದ್ರೆ ?—ಹಾಗೆ ಮಾಡ್ತಾನೆಯೆ ಅವನು ? ಇರಲಾರದು !

ರಾಯರು :

ಇರಲಾರದು ! ಈ ಕಾಗದ ನೋಡು ಅಂದೆ—ಅವನೇ ಬರೆದಿದಾನೆ ಮುದ್ದು ಮುದ್ದಾಗಿ.

ಪಾತಮ್ಮ :

ಪುಟ್ಟರಾಮೂನೇ ಬರೆದಿದಾನೆಯೆ ?

ರಾಯರು :

ಮತ್ತೆ ? ಅವನನ್ನ ಭಾವಿಗೆ ತಳ್ಳಿದವಳೂ ಪತ್ರದ ಕೊನೇಲಿ ಎರಡು ಪಂಕ್ತಿ ಬರೆದಿದಾಳೆ—ಅತ್ತೆ ಮಾವಂದಿರಿಗೆ ಇಂಗ್ಲೀಷಿನಲ್ಲೇ ನಮಸ್ಕಾರ ಮಾಡಿ. ಕನ್ನಡ ಬರೋದಿಲ್ವಲ್ಲ !

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಮ್ಮ :

ನೀವೇನೇ ಅಂದರೂ—ಹೆತ್ತೋರಿಗೆ ಗೊತ್ತಿಲ್ಲದ ಹಾಗೆ ಮದುವೆ ಮಾಡಿಕೊಳ್ಳುತ್ತಾನೆಯೆ ಬಿಡಿ ! ಸುಮ್ಮನೆ ಇಲ್ಲದ್ದನ್ನೆಲ್ಲ ಆಡಬೇಡಿ.

ರಾಯರು :

ಇನ್ನೂ ನಂಬೋದಿಲ್ವಲ್ಲ ನೀನು ! ಏನ್ಮಾಡಲೀ ಹೇಳು ! ಆ ಹಾಳಾದೋನು ಕನ್ನಡದಲ್ಲಾದರೂ ಬರೆದಿದ್ರೆ—ನೀನೇ ಓದಿಕೋ ಅಂತ ಕಾಗದ ಒಗೆದು ಹೋಗಬಹುದಾಗಿತ್ತು !

ಪಾತಮ್ಮ :

ನಿಜವೇ ಅಂದ್ರೆ ಹಾಗಾದರೆ ?

ರಾಯರು :

ನಾವು ಹೇಳಿದ್ದನ್ನೆಲ್ಲ ಬ್ಯಾಡಾ ಬ್ಯಾಡಾ ಅಂತ ಬಿಟ್ಟು, ಹೀಗೆ ನಮ್ಮ ತಲೇ ಮೇಲೆ ಗೊಬ್ಬರ ಸುರಿದು, ತಾನೇ ಆರಿಸಿ ಮಾಡಿಕೊಂಡೋನು ಮುಖ ತೋರಿಸದೆ ಹಾಗೇ ಹಾಳಾಗಿಹೋಗಿದ್ದರೆ ಒಂದು ಮಾತನ್ನೂ ಆಡ್ತಿರಲಿಲ್ಲ ನಾನು ! ಆದರೆ ಬರ್ತಾನಂತಲ್ಲ ಇಲ್ಲೀಗೆ ! ಅದೂ ತನ್ನ ರಂಭೇನೂ ಕರ್ಕೊಂಡು—ನಮ್ಮ ಮೂತೀಗೆ ಮಂಗಳಾರತಿ ಎತ್ತೋಕೆ !

ಪಾತಮ್ಮ :

ಹಾಂ ?! ಏನ್ಮಾಡೋದೀಗ ?

ರಾಯರು :

ಇನ್ನೇನ್ಮಾಡ್ತೀಯಾ ? ಮನೇ ಅಂದರೆ ಇನ್ನುಮೇಲೆ ನಾಟಕ ರಂಗ! ಅದೇ ಹೇಳಿದೆನಲ್ಲ—ನಿನ್ನ ಎರಡನೇ ಮಗಂದು—ನಾಟಕ ಜೀವನ ! ಮೊದಲನೆಯನಂದು—ಜೀವನವೇ ನಾಟಕ !

ಪಾತಮ್ಮ :

(ಇನ್ನೂ ನಂಬಲಾರದೆ) ಹೀಗ್ಯಾಕೆ ಆಡ್ತೀರಿ ? ಪುಟ್ಟರಾಮು ಮನೆಗೆ ಬರಲಿ—ನೋಡೋಣ, ಸುಮ್ಮನೆ ತಮಾಷೆಗೆ ಬರೆದಿದ್ದಿರಬಹುದು ಹಾಗೆಲ್ಲಾ ! ಅವನ ಹುಡುಗಾಟ ನಿಮಗೆ ತಿಳಿಯದೆ ಹೇಳಿ ?

CC-O. In Public Domain. Digitized by eGangotri

ರಾಯರು :

ಇನ್ನೂ ಎಂತಹ ಹುಡುಗಾಟ ಅಂತೀಯೇ ನೀನು ? ನಮಗೆ ಗೊತ್ತಿಲ್ಲದ ಹಾಗೆ ತಾನು ಮುದುವೆ ಮಾಡಿಕೊಂಡು "ಹೆಂಡ್ತೀನ ಕರ್ಕೊಂಡು ಬರ್ತೀನಿ" ಅಂತ ಬರೆದಿದ್ದಾನೆ ಅವನೂ—ಕೆಳಗೆ ಹೆಂಡ್ತೀನೂ ಸಹಿ ಮಾಡಿದಾಳೆ ಅಂತ ಬಡ್ಕೋತಿದೀನಿ ! ತಮಾಷೆ ಮಾಡ್ತಾನಂತೆ ಮಗ ! ತಾಯಿ, ತಂದೇ ತಲೆಮೇಲೆ ಕಲ್ಲು ಹೊತ್ತಾಕಿ !

ಪಾತಮ್ಮ :

ಸರಿ, ಇನ್ನೇನು ಹೇಳಲಿ ನಾನು ! ಅವನು ಬಂದಾದರೂ ಬರಲಿ ಮೊದಲು.

ರಾಯರು :

ಅವನು ಈ ಮನೆ ಹೊಸಲಿನ ಒಳಗೆ ಕಾಲಿಟ್ಟರೆ, ನಾನು ಹೊರಗೆ ಕಾಲಿಡ್ತೀನಿ ! ಹುಡುಗಾಟವಂತೆ—ಹುಡುಗಾಟ ! ಚಿಕ್ಕಂದಿನಿಂದ ಅವನನ್ನು ಮುದ್ದು ಮಾಡೀ ಮಾಡೀ.....ಆಕಾಶಕ್ಕೆ ಏರಿಸಿ ಕೂರಿಸಿದೆ ನೀನು ! ಒಳ್ಳೆ ಉಡುಗೊರೆ ಕೊಟ್ಟ—ಮಗ ! ನಿನಗೆ ಗೊತ್ತಿಲ್ಲದೆ ಆ ನಿನ್ನ ಸೊಸೆ ಇಲ್ಲೀಗೆ ಬಂದು ಈ ನಿನ್ನ ಮನೇನ್ನ ಆಕ್ರಮಿಸಿಕೊಂಡ ಮೇಲೆ.....

(ಹೊರಗಿನಿಂದ ರಾಯರೇ...ರಾಯರೇ ಎಂಬ ಕೂಗು) ಯಾರೋ ನೋಡು. ಓ, ಶಿವಶಂಕರ ಭಟ್ಟರು ಅಂತ ಕಾಣುತ್ತೆ, ಬಾಗಿಲು ತೆಗಿ....ಹೋಗು, ಅವರೊಬ್ಬರಿಂಗೆ ತಿಳಿದುಬಿಟ್ಟರೆ—ಊರಿಗೆಲ್ಲ ಡಂಗೂರ ಹೊಡೆಸಿದ ಹಾಗೇ ಸರಿ ! ಆದರೆ, ಇನ್ನು ಮುಚ್ಚಿಟ್ಟು ಏನು ಪ್ರಯೋಜನ ?

ಪಾತಮ್ಮ :

ಅಯ್ಯೋ ! ನಿಜವಾಗಿ ಪುಟ್ಟರಾಮು ಹಾಗೆ ಮಾಡಿಕೊಂಡುಬಿಟ್ಟಿದ್ರೆ—ಏನು ಗತೀ ಅಂದ್ರೆ ! ?

ರಾಯರು :

(ಆಕೆ ಹೋಗುತ್ತಿರುವಂತೆ) ಹೂಂ....ಹೆಂಗಸರು—ಇನ್ನು ಆದ್ಯಾವ ಜನ್ಮದಲ್ಲಿ—ಗಂಡಸರನ್ನ ನಂಬುತ್ತಾರೆಯೋ—ಏನೋ !

CC-O. In Public Domain. Digitized by eGangotri

ಭಟ್ಟರು :

(ಬರುತ್ತಾ) ನಮಸ್ಕಾರ....ರಾಯರಿಗೆ ನಮಸ್ಕಾರ....ಶಿವಶಂಕರ ಶಿವಶಂಕರ.

ರಾಯರು :

ಹೂಂ—ಬನ್ನಿ ಭಟ್ಟರೆ—

ಪಾತಮ್ಮ :

(ಅಳು ಮುಖ) ನೋಡಿದಿರಾ ಭಟ್ಟರೆ....ನಮ್ಮ ಹಣೇ ಬರಹ !

ಭಟ್ಟರು :

ಹಣೇ ಬರಹ !!! ಯಾಕೆ ? ಏನಮ್ಮಾ ?....ಏನಾಯ್ತು ?

ರಾಯರು :

ಹುಷ್—(ಹೆಂಡತಿಗೆ) ನೀನು ಸ್ವಲ್ಪ ಒಳಗೆ ಹೋಗು—ನೋಡೋಣ !

ಪಾತಮ್ಮ :

ಅಲ್ಲಽ....ಇವರು ಹೇಳೋದನ್ನ ನೋಡಿದರೆ....(ಅಳಲು ಪ್ರಾರಂಭ)

ರಾಯರು :

ಒಳಗೆ ಹೋಗೂ—ಂದೆ (ಆಕೆ ಹೊರಡುತ್ತಾರೆ)

ಭಟ್ಟರು :

ಯಾಕೆ ರಾಯರೆ ? ಏನಾಯ್ತು ?

ರಾಯರು :

ಏನೂ ಇಲ್ಲ ! ಕೂತ್ಕೊಳ್ಳಿ ನೀವು !

ಭಟ್ಟರು :

(ಕುಳಿತುಕೊಳ್ಳುತ್ತಾ) ಯಾಕೆ ? ಮನೇಲೆಲ್ಲಾ ಆರೋಗ್ಯತಾನೆ ?

ರಾಯರು :

ಓಹೋ ! ನಮ್ಮ ಆರೋಗ್ಯಕ್ಕೇನು ಬಂದಿದೆ ಥಾಡಿ—ಆದೂ ರಿಟೈರ್ ಆದ ಮೇಲೆ ?—ಈ—ಹಾಳು ಬ್ಲಡ್ ಪ್ರಶರ್ ಒಂದನ್ನ ಬಿಟ್ಟರೆ !

ಭಟ್ಟರು :

ಮತ್ತೆ ! ಅಮ್ಮಾವರು ಹೇಳೋದನ್ನ ಕೇಳಿದರೇೇೇ—

CC-O. In Public Domain. Digitized by eGangotri

ರಾಯರು :

ಸ್ಸರಿ ! ಅಮ್ಮಾವರದು ಇದ್ದೇ ಇದೆಯಲ್ಲ—! ಮಕ್ಕಳನ್ನು ಮೊದಲು ತಲೇಮೇಲೆ ಹತ್ತಿಸಿಕೊಂಡು....ಕಡೇಗೆ—

ಭಟ್ಟರು :

ಹಂ!....ಅಂದರೆ, ತಮ್ಮ—ಮಗ—!

ರಾಯರು :

ಚೆನ್ನಾಗಿದಾನೆ—ಯಥಾಪ್ರಕಾರ ಒಳಗೆ ಪ್ರಾಕ್ಟೀಸು ನಾಟಕದ್ದು !

ಭಟ್ಟರು :

ಮೋಹನನ್ನಲ್ಲ—ನಾನು ಕೇಳಿದ್ದು—ತಮ್ಮ ದೊಡ್ಡಮಗ—ಪೂನಾದವರು ! ಅಹಹ....ಇಂಜಿನೀಯರ್ ಸಾಹೇಬರು—

ರಾಯರು :

ಸೊಗಸಾಗಿದಾನಂತೆ ! ಈಗಂತೂ ಮಹಾ ಸಂಭ್ರಮ ಅವನಿಗೆ.

ಭಟ್ಟರು :

ಸಂತೋಷ ! ಶಿವಶಂಕರ—ಶಿವಶಂಕರ—ಅದೇ ಹಾಗೇ ಹೋಗ್ತಾ ಇದ್ದೆ—ಹ್ಹಹ್ಹ—ಅದರ ವಿಷಯವನ್ನೇ—ತಮ್ಮನ್ನ ಕೇಳಿಕೊಂಡು—

ರಾಯರು :

ಇವತ್ತು ಅವನೇ ಬರ್ತಾನೆ !—ಅವನನ್ನೇ....ತಾವು—ಸ್ವತಃ.....

ಭಟ್ಟರು :

ಯಾರು ? ಓ ! ದೊಡ್ಡಮಗ—ಬರ್ತಾರೆಯೆ ? ಪೂನಾದಿಂದ !

ರಾಯರು :

ಬರ್ತೀನಿ ಅಂತ ಬರೆದಿದಾನೆ !

ಭಟ್ಟರು :

(ಹಿಗ್ಗುತ್ತಾ) ಓಹೋ ! ಮಹಾಸಂತೋಷ ! ಶಿವಶಂಕರ ಶಿವಶಂಕರ !

ರಾಯರು :

ಅವನ ಮದುವೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

(ತಡೆದು) ಆ ! ಆ ಹೌದು—ಅದೇ—ಅವರು ಬಂದ ತಕ್ಷಣ ನಮ್ಮ ಉಗ್ರನರಸಿಂಹಯ್ಯನವರ ಮಗಳ ವಿಷಯ ಮಾತಾಡೀ—ಒಂದು ನಿಶ್ಚಯಕ್ಕೆ ಬಂದ್ಬಿಟ್ಟರೆ—

ರಾಯರು :

ಆ್ಞಂ ?.....

ಭಟ್ಟರು :

ಹೂಂ—! ಪಾಪ—ಆತ ದಿನಾ ಬೆಳಿಗ್ಯೆ ಒಂದು ಸಲ, ಸಂಜೆ ಒಂದು ಸಲ ನಮ್ಮ ಮನೇಗೆ ಅಲೀತಿದಾರೆ ! ಜಾತಕ ಬಹಳ ಜೆನ್ನಾಗಿ ಹೊಂದುತ್ತೇ ಅಂತ ತಮಗೆ ಹೇಳಿದ್ದೆನಲ್ಲಾ ಅವರೇ !....“ರಾಯರ ಅಭ್ಯಂತರವೇನೂ ಇಲ್ಲ—ಹುಡುಗ ನೋಡಿ ಒಪ್ಪಿಬಿಟ್ಟರೆ”—ಅಂತ ಉಗ್ರನರಸಿಂಹಯ್ಯನವರಿಗೆ ಹೇಳಿದ್ದೇ ತಡ, ಬೆಳಿಗ್ಯೆ ಒಂದು ಸಲ, ಸಂಜೆ ಒಂದು ಸಲ, ಪ್ರಾರಂಭ ಮಾಡಿಬಿಟ್ಟರು—ನಿತ್ಯಯಾತ್ರೆ ! “ಹ್ಯಾಗಾದರೂ ಮಾಡಿ ಭಟ್ಟರೇ—ಉಳಿದದ್ದೆಲ್ಲಾ ಹಾಳಾಗಲೀ ! ಇದೊಂದನ್ನ ನಿಷ್ಕರ್ಷೆ ಮಾಡಿಸಿಬಿಡೀ” ಅಂತ ಅಲೀತಿದಾರೆ ಮನೇಗೆ–ಪಾಪ ! ಒಳ್ಳೆ ಗುಣವಂತರು–ಸ್ಥಿತಿವಂತರು—ಮತ್ತೆ ಮರ್ಯಾದಸ್ತರು—ಶಿವಶಂಕರ ! ಪಾಪ ....ಆ ಹುಡುಗೀ ಅಂತೂ ...ಯಾಕೆ ಅಮ್ಮನವರೂ ನೋಡಿದಾರಲ್ಲಾ—ಒಳ್ಳೇ ರತೀದೇವಿ—

ರಾಯರು :

ಹೂಂ—!

ಭಟ್ಟರು :

ಅದಕ್ಕೇ ತಮ್ಮ ಪುಟ್ಟರಾಮಯ್ಯನವರು ಪೂನಾದಿಂದ ಇಲ್ಲೀಗೆ ದಯ ಮಾಡಿಸಿದ ಕೂಡಲೇ....

ರಾಯರು :

ಹಯ್ಯೋ ! ನಿಮ್ಮ ಹಣೇಬರಹ ! ಆ ಪುಟ್ಟರಾಮೂ—ತನ್ನ ಪುಟ್ಟ ಸೀತಾದೇವೀನ ಕರಕೊಂಡೇ ಬರ್ತಿದಾನೇ—ಇವತ್ತು.

CC-O. In Public Domain. Digitized by eGangotri

ಭಟ್ಟರು :

ಹದಂ.....ಆ್ಹಂ ? !

ರಾಯರು :

ಸ್ವಯಂವರ !!!

ಭಟ್ಟರು :

ಆ್ಹಂಂ—?

ರಾಯರು :

ಹೌದೂ—ಸ್ವಾಮೀ—

ಭಟ್ಟರು :

ಪುಟ್ಟ ಸೀತಾದೇ ವೀ—?

ರಾಯರು :

ಹಾಗಂತ ಬರೆದಿದಾನಪ್ಪಾ! ಹೆಂಡ್ತೀನೂ ಕರ್ಕೊಂಡೇ ಬರ್ತೀನಿ–ಅಂತ!

ಭಟ್ಟರು :

(ಆರ್ಥವಾದಂತಾಗಿ) ಹೆಂಡತಿ ? ಎನಂತಿದೀರಿ ರಾಯರೆ—?

ರಾಯರು :

ನಿಜ ಭಟ್ಟರೆ—ಇನ್ನೇನು ಹೇಳಲಿ ? ಇಗೋ ನೋಡಿ ಆವನ ಪತ್ರ !

ಭಟ್ಟರು :

ಶಿವಶಂಕರ ! ಶಿವಶಂಕರ !

ರಾಯರು :

ಇನ್ಮೇಲೆ ಹೀಗೇ ನಡೆಯೋದೇ ಭಟ್ಟರೆ—! ಕಲಿಗಾಲ !

ಭಟ್ಟರು :

ಆದರೂ ನಮ್ಮ ಪುಟ್ಟರಾಮಯ್ಯನವರು—!? ಛೆ ! ಛೆ ! ಎಲ್ಲಾದರೂ ಉಂಟೆ ರಾಯರೇ—ತಾವೂ....ಆಹಹಹ ತ—ತಮಾಷೆ ಮಾಡ್ತಿದೀರಿ ಇಷ್ಟು ಗಂಭೀರವಾಗಿ (ನಿಟ್ಟಿಸಿ ನೋಡುತ್ತಾ ನಗುತ್ತಾರೆ)

ರಾಯರು :

ಹೀಗೇ ನನ್ನ ಹೆಂಡತೀನೂ ಹೇಳಿದಳು—ತಮಾಷೆ ಅಲ್ಲ—ಅಂತ ರೇಗಿದೆ ! ಇನ್ನು ನಿಮ್ಮ ಮುಂದೆ ಇನ್ನೇನು ತಲೆ ಚಚ್ಚಿಕೊಳ್ಳಲಿ ಹೇಳ

Sri Vidyabharathi Book Centre, Sringeri

CC-O. In Public Domain. Digitized by eGangotri

—ಅ ವ ನ ಕಾಗದವೋ—ಹಾಳಾದ್ದು ಇಂಗ್ಲೀಷಿನಲ್ಲಿದೆ....ನೀವು ಓದೋಹಾಗಿಲ್ಲ—ಮೈಲಿಗೆ !

ಭಟ್ಟರು :

ಓಂ ! ಸರಿಯಾಯ್ತಪ್ಪ !.....ಎಲ್ಲಿಂದ ಕರ್ಕೊಂಡು ಬರ್ತಿದಾರಂತೆ ಸೀತಾದೇವೀನ—?

ರಾಯರು :

ಪೂನಾದಿಂದಲೇ !

ಭಟ್ಟರು :

ಮದುವೆಯಾಗದೇ....ಅದೆಂಥ ಹೆಂಡತೀ ಸ್ವಾಮೀ ? ನೀವು ಕೋಪ! ಮಾಡಿಕೊಂಡರೂ ಚಿಂತಿಲ್ಲ—ಹಹಹ-ಅ-ಹಾಸ್ಯಪ್ರವೃತ್ತಿ ತಮ್ಮದು-

ರಾಯರು :

ಇನ್ನೇನು ಹೇಳಲಿ—ಹೇಳಿ !

ಭಟ್ಟರು :

ಅಲ್ಲ.....ನೀನಿಲ್ಲದೆ, ನಿಮಗೆ ಗೊತ್ತಿಲ್ಲದೆ—ಮದುವೇ—ಅಂದ್ರೆ—

ಪಾತಮ್ಮ :

(ಅಳುಮುಖ ಮಾಡಿ ಹೊರಬರುತ್ತಾ) ಅಯ್ಯೋ—ಹೌದಂತೆ ಭಟ್ಟರೆ !

ರಾಯರು :

ಹುಷ್ ! ಸುಮ್ಮನಿರೆ—ನೀನು ! ನೀನೇ ಅವನನ್ನು ಹೀಗೆ ಉಬ್ಬಿಸಿ ಕೂರಿಸಿದ್ದು ! ಈಗ ರಾಗ ತೆಗೆದು ಅತ್ತರೆ—ಏನಾಗುತ್ತೆ !

ಪಾತಮ್ಮ :

ಅಳಬಾರದೂ—ಅಂದರೆ ! ಇನ್ನೇನು ಉಳಿದಿದೆ ಹೇಳಿ—ನೀವು ಹೇಳೋದು ನಿಜವಾದರೆ ! (ಅಳುತ್ತಾರೆ)

ಭಟ್ಟರು :

ಶಿವಶಂಕರ ! ಶಿವಶಂಕರ.

CC-O. In Public Domain. Digitized by eGangotri

ಪಾತಮ್ಮ :

(ಭಟ್ಟರಿಗೆ) ನಿಜವಾಗಿ ನಮ್ಮ ಪುಟ್ಟರಾಮು ನಮಗೊಂದು ಕಾಗದ ಬರೆಯೋದಿಲ್ವೇ ಭಟ್ಟರೆ !—ಇವರು ಹೇಳೋದು ನಿಜವಾದರೆ !

ರಾಯರು :

(ಕೆರಳಿ) ಹೆತ್ತವರು ಎಲ್ಲಿ ಕಲ್ಲು ಹಾಕ್ತಾರೋ ಅಂತ—ಬರೆಯಲಿಲ್ಲ. ಹೀಗೆ ಮದುವೆಯಾದ ಯಾವ ಮಗ ಯಾವಾಗ ಬರೆದಿದಾನೆ ತಂದೆ ತಾಯಿಗಳಿಗೆ—ಇತಿಹಾಸದಲ್ಲಿ ! ಇಷ್ಟಾದರೂ ಅವನನ್ನೇ ವಹಿಸಿ ಕೊಂಡು ಹೋಗ್ತಿದೀಯಲ್ಲಾ—"ನಂ ಪುಟ್ಟರಾಮೂ ೂ—ನಂ ಪುಟ್ಟ ರಾಮೂ ೂೂ" ಅಂತ ! ಹೆಂಡತೀ ಅಂತ ಒಬ್ಬಳು ಸಿಕ್ಕಿದಮೇಲೆ ತಂದೆ–ತಾಯಿ ಯಾವ ಲೆಕ್ಕವೆ ?

ಭಟ್ಟರು :

ಅನ್ಯಾಯ—! ಮಹಾ ಅನ್ಯಾಯ ! ಪಾಪ—ಅಂತಹ ಹುಡುಗ ಹೀಗಾಗಿಹೋದ—ಅಂದರೆ ! ಛೆ ! ! ಪಾಪ—ಇನ್ನು ಆ ಉಗ್ರ ನರಸಿಂಹಯ್ಯನವರು—

ರಾಯರು :

ಸ್ನೆಗೆದು ಬಿದ್ರು ನಿಮ್ಮ ಉಗ್ರನರಸಿಂಹಯ್ಯನವರು ; ಇಲ್ಲಿ ಹೆತ್ತ ತಂದೆ ತಾಯಿಗಳೇ ಬೆಂಕೀಲಿ ಬೇಯ್ತಿದಾರೆ ! ಉಗ್ರನರಸಿಂಹಯ್ಯನವರಂತೆ

ಭಟ್ಟರು :

ಶಿವಶಂಕರ—ಶಿವಶಂಕರ !

ರಾಯರು :

ಎಂತಹ ಜನವೋ—ಯಾವ ಊರೋ—ಎಲ್ಲೀ ಜಾತಿಯೋ—ಏನು ಭಾಷೆಯೋ—ಇನ್ನು ಆ ಸೊಸೇನ ಅನುಸರಿಸಿಕೊಂಡು ನಡಕೋ ಬೇಕು—ನಾವು !

ಪಾತಮ್ಮ :

(ಕಣ್ಣೀರು) ನೀವೇೀ–ಹೋಗೂ—ಹೋಗೂ ಅಂತ ಪೂನಾಕ್ಕೆ ಅಟ್ಟಿದಿರಿ. ಅವನಿಗೆ ಇಲ್ಲಿದ್ದ ಕೆಲಸ ಏನಾಗಿತ್ತು ?.....ಊಂ ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

(ನಿಟ್ಟಿಸಿ ನೋಡಿ—ಗುರುಗುಟ್ಟುತ್ತಾರೆ)

ಭಟ್ಟರು :

(ಪರಿಸ್ಥಿತಿಯನ್ನು ಹತೋಟಿಗೆ ತರುವ ಸಲುವಾಗಿ) ಪಾಪ—ರಾಯರೇನು ಮಾಡುತ್ತಾರಮ್ಮ! ಹುಡುಗನ ಪ್ರಾರಬ್ಧ ಹಾಗೆ ಅವನನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಎಳೆದುಕೊಂಡು ಹೋಗುತ್ತೆ !

ಪಾತಮ್ಮ :

(ಅಳುತ್ತಾ) ಬೇಡೀ—ಕಳಿಸಬೇಡೀ ಅಂತ ಬಡ್ಕೊಂಡೆ, ಹಿರೀಮಗ ಕಣ್ಣುಮುಂದೇನೇ ಇರ್ಲೀ ಅಂದೆ! ಕೇಳ್ತಾರೆಯೆ ಇವರು! ಒಂದಿನ್ನೂರು ರೂಪಾಯಿ ಜಾಸ್ತಿ ಸಿಕ್ಕುತ್ತೇ ಅಂತ ದೇಶಾಂತರ ಅಟ್ಟಿದರೂ–ಮಗೂನ್ನ !

ರಾಯರು :

ದೇಶಾಂತರ ! ! ಪೂನಾ ಅಂದರ ದೇಶಾಂತರನೆ ? ನಮ್ಮ ದೇಶದ ಭೂಪಟ ನೋಡಿದಿಯಾ ನೀನು—ಎಂದಾದರೂ ?

ಪಾತಮ್ಮ :

ಭೂಪಟ ಏನು ನೋಡೋದು ? ಬೇರೆ ಜಾತೀ, ಬೇರೆ ಜನ, ಬೇರೇ ಭಾಷೆ ಅಂತ ನೀವೇ ಹೇಳಿದಿರಿ ! ನಮಗೂ ಅಲ್ಲೀಗೂ ಎಲ್ಲಿ ಸಂಬಂಧ–

ಭಟ್ಟರು :

ಅಂತೂ—ಹಾಗಲ್ಲಮ್ಮಾ, ನೋಡೀ—ಋಣಾನುಬಂಧ ಅಂದರೆ ಹೀಗೆ—ದೈವ ನಿಯಾಮಕ ! ಶಿವಶಂಕರ!....

ರಾಯರು :

ಆ...ಛೆ....ಛೆ .. ! ಅಲ್ಲss ! ನಾನು ದೇಶಾಂತರ ಕಳಿಸಿದ ಮಗನ್ನಾ ಅಂತ ಈಗ ಹೇಳ್ತಿಳಲ್ಲss ! ಏನು ಹೇಳಬೇಕು ಇವಳಿಗೆ ! ನನ್ನ ಮಗ–ಮೊದಲನೇ ಸಾರಿ ಇಲ್ಲೀಗೆ ಬಂದಾಗ ಅದೇನೋ ಪೂನಾಬಾರ್ಡರ್ ಸೀರೇ ಅಂತ ತಾಯೀಗೆ ತಂದ್ಕೊಟ್ಟರೆ–ಹಿರಿ ಹಿರಿ ಹಿಗ್ಗಿ ಉಟ್ಕೊಂಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಊರೆಲ್ಲ ಓಡಾಡಿದಳು—"ಪೂನಾ ಬಾರ್ಡರ್ ! ಪೂನಾ ಬಾರ್ಡರ್ "
—ಅಂತ ! ಈಗಲೂ ಅದೇ ಊರಿಂದ—

ಪಾತಮ್ಮ :

ಹುಟ್ಟು ಗೊತ್ತಿಲ್ಲದ ಹೆಣ್ಣು ತಂದರೂ—ಹಿರಿ ಹಿರಿ ಹಿಗ್ಗೂ ಅಂತೀರೇನು—ಪೂನಾ ಹೆಣ್ಣು—ಪೂನಾ ಹೆಣ್ಣು ಅಂತ ! ? ಇಂತಹ ಮಾತೆಯಾವತ್ತೂ!—ಈಗ ನಿಮ್ಮ ಮಗ—(ಕೋಪದಿಂದ ಮಾತೇ ತಡೆಯುವಷ್ಟರಲ್ಲಿ ಹೊರಗಿನಿಂದ---'ಶಾಮರಾವ್ ಶಾಮರಾವ್' ಎಂದು ಕೂಗಿ ಬಾಗಿಲು ಬಡಿದ ಶಬ್ದ)

ರಾಯರು :

ತಡಕೋ ನಿನ್ನ ಕೋಪಾನ ! ನಾನೇನು ಸಂತೋಷ ಪಡ್ತಿಲ್ಲ—ನಿನ್ನ ಮಗನ ಕಾರಭಾರ ನೋಡೀ—ಲಿಲ್ಲಽಽ—ನಾನು ಅವನನ್ನ ದೇಶಾಂತರ ಕಳಿಸಿದೇ ಅಂದ್ಯಲ್ಲಾ—(ಶಾಮರಾಯರೇ'---ಹೊರಗಿನಿಂದ) ಅದಕ್ಕೇ ಹೇಳಿದೆ—ಓ !! ಕಿಟ್ಟಣ್ಣ ಮಾಸ್ತರು—!! ಬನ್ನೀನ್ನು—ನಮ್ಮ ಕತೆ ಅವರಿಗೂ ತಿಳೀಲಿ!—ಕಣ್ಣು ವರೆಸಿಕೊ—(ಅಕೆ ಹೋಗುತ್ತಾಳೆ)

ಭಟ್ಟರು :

ಶಿವಶಂಕರ ! ಶಿವಶಂಕರ ! ಛೆ! ಛೆ! ಆಂತೂ—ಅಂತಹ ಒಳ್ಳೆಯ ಹುಡುಗ—

ರಾಯರು :

ಹೀಗಾಗಿ ಹೋಗ್ತಾನೆ ಅಂತ ಕನಸು ಕಂಡಿದ್ರೆ—(ಬರುತ್ತಿರುವ ಮಾಸ್ತರನ್ನ ಕುರಿತು—) ಬನ್ನಿ ಮಾಸ್ತರೆ—ಬನ್ನಿ—

ಭಟ್ಟರು :

ನಮಸ್ಕಾರ ಸ್ವಾಮೀ—ಶಿವಶಂಕರ!

ಮಾಸ್ತರು :

ನಮಸ್ಕಾರ—ನಮಸ್ಕಾರ. ರಾಯರೇ ನಮ್ಮ ಶಕುಂತಲಾ ಬಂದಿದಾಳೆ ತಾನೇ ಇಲ್ಲೇಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತವ್ಮ :

ಹೌದು—ಬಂದಿದಾಳೆ! ನಾಟಕದ ಪ್ರಾಕ್ಟೀಸು ಅಂತ ಎಲ್ಲರೂ ಒಳಗೇ ಸೇರಿದಾರೆ !

ರಾಯರು :

ಕೂತ್ಕೊಳ್ಳಿ ! ಅದೇನೋ ಕಾಂಪಿಟಿಷನ್ ಅಂತ್ಲ್ s–ಕಾಲೇಜಿನಲ್ಲಿ–

ಮಾಸ್ತರು :

ಹೌದು—ಹೇಳಿದಳು ಶಕುಂತಲಾ—ಫೈನಲ್ ಪ್ರಾಕ್ಟೀಸಿಗೆ ಹೋಗ್ತೇನೆ—ಅಂತ—ನಿಮ್ಮ ಮೋಹನಾನೇ—ಹೀರೋ ಅಂತೆ!—

ರಾಯರು :

ಅದೇ ಹೇಳ್ತಿದ್ದೆ ಭಟ್ಟರಿಗೆ—ಈ ಎರಡನೇ ಹುಡುಗಂದು—ನಾಟಕಾ ನಾಟಕಾ ಅಂತ ನಾಟಕ ಜೀವನ—! ಮೊದಲನೆಯವನ ಜೀವನವೇ ನಾಟಕ—ಅಂತ !

ಭಟ್ಟರು :

ಶಿವಶಂಕರ !

ಮಾಸ್ತರು :

—ಅಂ ! ಅಂದರೆ—!

ರಾಯರು :

ನಮ್ಮ ಪುಟ್ಟರಾಮೂ.....ಮೊನ್ನೆ—

ಮಾಸ್ತರು :

ಓಹೋ ಹಾಗಿದ್ದರೆ ಅವರೇ ಬರೆದರೋ ತಮಗೆ—?....ನನಗೂ ಗೊತ್ತಾಯಿತು– ವಿಷಯ—ಮೊನ್ನೆ

ರಾಯರು :

ಮೊನ್ನೆ !!

ಮಾಸ್ತರು :

ಹೌದು—ನಮ್ಮ ಆನಂದೂ ಬರೆದಿದ್ದ ಬೊಂಬಾಯಿನಿಂದ! "ಆರನೆಯ ತಾರೀಖು ಪುಟ್ಟರಾಮೂ ಮದುವೆ ಆಯ್ತೂ ಪೂನಾದಲ್ಲೀ—ನಾನೂ ಹೋಗಿದ್ದೇ"—ಅಂತ! ಬರೆದಿದ್ದ !

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಓ !!

ಭಟ್ಟರು :

ಶಿವಶಂಕರ !

ಪಾತಮ್ಮ :

ಹಾಗಾದರೆ ನಿಜವೇ ಮಾಸ್ತರೆ—(ಕಣ್ಣೀರು)—ಆ ವಿಷಯಾ—!?

ಮಾಸ್ತರು :

ನಿಜಾನಮ್ಮಾ ತಿಳಿದಿದ್ದರೂ—ಮೊದಲೇ ಹೇಳಲಿಲ್ಲ—ನಿಮಗೆ ಎಷ್ಟಾಬದರೂ—ಮೂರನೆಯವರ ಮುಖಾಂತರ ನಿಮಗೆ ತಿಳಿಯೋದಕ್ಕಿಂತ—ನಿಮ್ಮ ಮಗನೇ ನೇರವಾಗಿ ಬರೆದರೆ ಒಳ್ಳೆಯದೂ—ಅಂತ ತಡೆದೆ.

ಪಾತಮ್ಮ :

ನಿಮ್ಮ ಆನಂದೂನೇ ಬರೆದಿದ್ದನೆ—?

ಮಾಸ್ತರು :

ಹೌದಮ್ಮ—ಬರೆದಿದ್ದ !

ಪಾತಮ್ಮ :

ಹಯ್ಯೋ! ಇನ್ನೆನ್ಸತೀ—ಂದ್ರೆ !

ರಾಯರು :

ಇನ್ನು ಅತ್ತೇನು ಪ್ರಯೋಜನ ? ಆದದ್ದಾಯ್ತೂ ಅಂತ ಅವನನ್ನ ಮರೆತು ಇದ್ದು ಬಿಡೋದು !

ಮಾಸ್ತರು :

ಚೆನ್ನಾಗಿ ಹೇಳಿದಿರಿ ! ಮಗನ್ನೇ ಮರೆಯೋದೂ—ಅಂದ್ರೆ!....ಆಲ್ಲಸ—ಇವತ್ತೋ—ನಾಳೇನೋ ಪುಟ್ಟರಾಮೂನೇ ಬರಬೇಕಲ್ಲ ! ?—ಮಗ ಮನೇಗೆ ಬರಲೀ—ನಾಲ್ಕುದಿನ ಎಲ್ಲ ಒಟ್ಟಿಗೆ ಇದ್ದಮೇಲೆ—

ರಾಯರು :

(ನಿರ್ಧಾರದಿಂದ) ಇಲ್ಲಿನೋಡಿ ಕಿಟ್ಟಣ್ಣ ಮಾಸ್ತರೆ—ಅವನು—ಅವನು ಈ ಮನೆ ಹೊಸಲಿನ ಒಳಗೆ ಕಾಲಿಟ್ಟ ಅಂದರೆ ನಾನು ಹೊರಗೆ

CC-O. In Public Domain. Digitized by eGangotri

ಕಾಲಿಡ್ತೀನಿ ! ಮದುವೆ ಮಾಡಿಕೊಂಡ— ಅಂತ ಅಲ್ಲ ! ಹೆತ್ತ ತಾಯಿ ತಂದೆಗಳಿಗೇ ತಿಳಿಸದೆ ಮಾಡಿಕೊಂಡನಲ್ಲಾ ಅಂತ ! ಏನು ಅಂತಹ ಕೆಲಸಕ್ಕೆ ಬಾರದೋರೆ ನಾವು ?

ಭಟ್ಟರು :

ಪಾಪ—ಪಾಪ ! ಶಿವಶಂಕರ !

ಮಾಸ್ತರು :

ಛೆ ಛೆ ! ಹಾಗಲ್ಲ ಶಾಮರಾವ್ ! ಹೀಗೆ ದುಡುಕಬಾರದು ನೀವು.

ರಾಯರು :

ಮತ್ತೆ—ಕಂಡು ಕೇಳಿಲ್ಲದ ಹುಡುಗೀ ಕಟ್ಟಿಕೊಂಡು ಬಂದರೆ ?

ಮಾಸ್ತರು :

ದೇಶ ಒಂದಾದ ಮೇಲೆ, ಒಂದು ಕ್ಷೇತ್ರದ ಜನ ಇನ್ನೊಂದು ಕಡೆ ಹೋಗೀ ಬಂದೂ ಇರೋ ಹಾಗದ ಮೇಲೇ, ಇದೆಲ್ಲ ನಡೆಯೋದೆ ಶಾಮರಾವ್ ! ನೀವೇ ದುಡುಕಿದರೆ ಹ್ಯಾಗೆ ? —ಪುಟ್ಟರಾಮೂ ಎಂದಿಗೂ ಹಾಗೆ ಅಡ್ಡದಾರಿ ಹಿಡಿಯೋನಲ್ಲ !

ರಾಯರು :

ಅಂದರೆ ! ? ಈಗ ಅವನು ಹಿಡಿದಿರೋದು ರಾಜ ಮಾರ್ಗ ಅಲ್ಲವೆ ? ನಿಮ್ಮ ಶಿಷ್ಯ ಅವನು! ನೀವು ಒಬ್ಬರೇ ಹೊಗಳಬೇಕು ಅಂಥವನನ್ನ ! ಹೆತ್ತವರ ಹೊಟ್ಟೀಗೆ ಹಾಲು ಹೊಯ್ದು ಬಿಟ್ಟ !

ಪಾತಮ್ಮ :

(ಅದೇ ಅಳುವಿನಿಂದ) ಹೀಗಾಗ್ತಾನೇ ನಂ ಪುಟ್ಟರಾಮೂ ಅಂತ ಎಂದೂ —ಅಂದ್ಕೊಂಡಿರಲಿಲ್ಲ !—ಏನಂತೀರೀ ಭಟ್ಟರೆ ? ನಮ್ಮ ಹುಡುಗ ಎಂದಾದರೂ—

ಭಟ್ಟರು :

ಛೆ ! ಎಲ್ಲಾದರೂ ಉಂಟೇನಮ್ಮಾ? ಎಂತಹ ನಡತೆ ! ಎಂತಹ ಗುಣ ಎಷ್ಟುವಿದ್ಯೆ ! ಅದಕ್ಕೇ—ಪಾಪ—ಆ ಉಗ್ರನರಸಿಂಹಯ್ಯನವರು— (ಆಪ್ಟರಲ್ಲಿ ರಾಯರನ್ನು ನೋಡಿ ಉಗುಳು ನುಂಗಿ) ಹಂ ! ಯುಗಧರ್ಮ ತಾಳೀರೀ—ಕಲಿಗಾಲ ನೋಡಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಬಿಡಿ ಭಟ್ಟರೆ—ಉರೀತಿದೆ ಬೆಂಕಿ ಅಂದರೆ, ತುಪ್ಪಾನೇ ಸುರೀತೀರಲ್ಲ ನೀವು!....ನಾ ಹೇಳೋದು ಕೇಳೀಮ್ಮಾ—ಹುಡುಗಾ ಮನೇಗೆ ಬರಲೀೀೀ—ನಾಲ್ಕು ದಿನ ಒಟ್ಟಿಗೆ ಇದ್ದಮೇಲೆ ನಿಧಾನವಾಗಿ ಮಾತಾಡೀೀೀ—

ರಾಯರು :

ಇನ್ನೇನು ಮಾತಾಡೋದು ಮಾಸ್ತರೆ—ಎಲ್ಲಾ ಮುಗಿದ ಮೇಲೇೀ !

ಮಾಸ್ತರು :

ಹಾಗಲ್ಲ ಶಾಮರಾವ್ ! ವಿವೇಚನೆ ಮಾಡದೇೀ— ಎಂದೂ—ಯಾವ ಕೆಲಸಾನೂ ಮಾಡೋನಲ್ಲ ಪುಟ್ಟರಾಮೂ—ಅನ್ನೋದು ಅನುಭವದ ಮಾತು ! ನಿಮ್ಮ ಮನಸನ್ನ ನೋಯಿಸಬೇಕೂ ಅಂತ ಅವನಿಗೆ ಅಷ್ಟು ಇಷ್ಟವೇ ಹೇಳಿ !

ಪಾತಮ್ಮ :

ಇಲ್ಲ ! ಎಂದಿಗೂ ಇಲ್ಲ ! ನಿಜ !

ರಾಯರು :

ಸಾಕು ಸುಮ್ಮನಿರೆ ! ಹೀೀಗೇೀ ನೀನು ಯಾವಾಗಲೂ—!

ಭಟ್ಟರು :

ಆದರೂ—ಪುಟ್ಟರಾಮೂ ಅಂದರೆ, ಪುಟವಿಟ್ಟ ಬಂಗಾರ-ನಿಜವಾಗಿ.

ಮಾಸ್ತರು :

ಮತ್ತೆ ಆಂಥವನು ಹೀಗೆ ದುಡುಂ ಅಂತ ಈ ಕೆಲಸ ಮಾಡಿದಾ ಅಂದರೆ ಒಪ್ಪೋವಂತಹ ಬ ಲ ವಾ ದ ಕಾರಣ ಇರಲೇಬೇಕೂ—ಅನ್ನಸ್ತೆ ನನಗೆ !

ರಾಯರು :

ಹಯ್ಯೋ ಬಿಡಿ ಕಿಟ್ಟಣ್ಣ ! ಏನದು ಒಪ್ಪುವಂತಹ ಕಾರಣ ? ಎಲ್ಲರಿಗೂ ಗೊತ್ತಿದ್ದ ಹಾಗೇ ಇದೆ ! ಒಂದು ಹುಡುಗ, ಒಂದು ಹುಡುಗಿ, ಎಲ್ಲೋ ಕಂಡರು, ಮಾತಾಡಿದರು—ಮೀಟ್ ಮಾಡಿದರು—ಸರಿ ಆಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲುಗೆ ಕೊಟ್ಟಳು—ಇವನು ಮದುವೆ ಮಾಡಿಕೊಳ್ಳದೇ ಇದ್ದರೆ ವಿಧಿ ಅಲ್ಲ ಅನ್ನುವ ಹಾಗೇ ಆಯಿತು—ಇಷ್ಟೇ ತಾನೇ ಇವರ ಕತೆ !

ಭಟ್ಟರು :

ಶಿವಶಂಕರ !

ಮಾಸ್ತರು :

ಛೆ ಛೆ ! ಊರ ಕತೆಯಲ್ಲ ಒಂದೇ ಅಂತ ಹೇಳೋಕೆ ಆಗೋದಿಲ್ಲ ಶಾಮರಾವ್ ! ನಮ್ಮ ರಾಮೂ ವಿಷಯ ಹಾಗಾಗೋದಿಲ್ಲ !

ರಾಯರು :

ನಿಮಗೆ ಭ್ರಮೆ ಇನ್ನೂ ! ಅಂತಹ ದೊಡ್ಡದೊಡ್ಡ ಊರಲ್ಲಿ ಹೆಣ್ಣು ಮಕ್ಕಳು ಹ್ಯಾಗಿರ್ತಾರೆ ಅಂತ ಗೊತ್ತಿಲ್ಲವೆ ! ನಮ್ಮಲ್ಲೇ ನೀತಿ ಸಡಿಲ ವಾಗ್ತಾ ಇದೆ ! ಇನ್ನೂ ಅವರನ್ನ ಕೇಳಬೇಕೆ ?

ಮಾಸ್ತರು :

ಛೆ ಛೆ ! dangerous generalisation ಮಾಡ್ತಿದೀರಿ ನೀವು !

ಪಾತಮ್ಮ :

ಊರು—ಕೇರಿ ಗೊತ್ತಿಲ್ಲದ ಹೆಣ್ಣು! ಸಾಲದ್ದಕ್ಕೆ ನರ್ಸ್ ಅಂತೆ! ಏನಿದು ನಂ ಗ್ರಹಚಾರ ಹೀಗಾಯ್ತಲ್ಲ ! (ರೋದನ ಪ್ರಾರಂಭ)

ಭಟ್ಟರು :

ಹಂ ! ಅಲ್ಲs—ಪ್ರಾಯದ ದುಡುಕಿನಲ್ಲಿ ಹೀಗಾಗಿ ಬಿಟ್ಟರೇ ಮುಂದೆ ಜೀವನ ಹ್ಯಾಗೇ—ಅಂತ !

ಮಾಸ್ತರು :

ಅಲ್ಲs—ಆ ಹುಡುಗೀ ವಿಷಯ ಮಾತ್ರಾ ಯಾರೂ ಏನೂ ಯೋಚನೆ ಮಾಡೋದೇ ಇಲ್ವಲ್ಲಾ ಅಂತೀನಿ ! ಈ ಮನೆಯ ಸ್ಥಿತಿ—ಗತಿ ಏನೂ ಗೊತ್ತಿಲ್ಲದೆ ನಿಮ್ಮ ಮಗನ ಕೈ ಹಿಡಿದು, ಆಜೀವ ಪರ್ಯಂತ ಅವನನ್ನೇ ಅನುಸರಿಸಿ ಗಂಡನ ಮನೇಲಿ, ಅವನ ಜನದ ಜೊತೆಯಾಗಿ ಬದುಕ್ತೀನಿ ಅಂತ ನಂಬಿ ಬರಬೇಕಾದರೆ ಪಾಪ, ಆಕೇದು ತಾನೇ ಧೈರ್ಯ ! ಅದನ್ನೂ ನಾವು ಯೋಚಿಸಬಾರದೆ—ಅಂತ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಸರಿ ಸರಿ, ದೇಶಾನೆಲ್ಲ ನೀವು ನಾಲ್ಕು ಸರ್ತಿ ಸುತ್ತಾಡಿ ಬಂದ ಮೇಲೇ ಹೀಗೇೇೇ ಮಾತಾಡೋಕೆ ಪ್ರಾರಂಭಿಬಿಟ್ಟರಿ ! ನಿಮ್ಮ ಆನಂದೂನೂ ಹೀಗೇ ಬೊಂಬಾಯಿನಿಂದ ಒಂದು ಹುಡುಗೀನ--ಗುಜರಾತೀನೋ, ಪಂಜಾಬೀನೋ—ಕಟ್ಟಕೊಂಡು ಬರಲೀೇ—ಆಗ ತಿಳಿಯುತ್ತೆ.

ಮಾಸ್ತರು :

ಧಾರಾಳವಾಗಿ ಕಟ್ಟಕೊಂಡು ಬರಲಿ ! ಬೇಡ ಅಂದೆನೆ ನಾನು ?

ಪಾತಮ್ಮ :

ಹಯ್ಯೋೇ ! ! !

ಮಾಸ್ತರು :

ಹೌದಮ್ಮ. ಹುಡುಗ ಒಪ್ಪೀೇ—ಹುಡುಗೀ ಒಪ್ಪೀೇ—ಇವತ್ತಿಂದಪ್ಪೇ ಅಲ್ಲ—ಮುಂದಿನ ಜೀವದ ಏನೂ ಹೇಗೇ ಅನ್ನೋದನ್ನ ಅವರೇ ಯೋಚಿಸಿ, ಇಂದಿನ ಪ್ರೇಮ, ಇನ್ನೂ ಹತ್ತು ವರ್ಷವಾದರೂ ಹೀಗೇ ಹೊಸದಾಗಿಯೇ ಉಳಿಯುತ್ತೆ ಅನ್ನೋೀ ನಂಬಿಕೆ ಅವರಿಗೆ ಖಚಿತವಾಗಿ ಬರೋಹಾಗಿದ್ದರೆ, ಅವನು ಧಾರಾಳವಾಗಿ ಮಾಡಿಕೊಳ್ಳಲಿ ! ಊರು, ದೇಶ, ನುಡಿ, ಜಾತಿ ಏನನ್ನೂ ಲೆಕ್ಕಕ್ಕಿಡೋದಿಲ್ಲ ನಾನು !

ಭಟ್ಟರು :

ಶಿವಶಂಕರ !

ಪಾತಮ್ಮ :

ನೀವೇನೋ ಸರಿ ! ಅಂದರೆ ಅಂತಹ ಸೊಸೇನ ಲಕ್ಷ್ಮಮ್ಮನವರೂ ಒಪ್ತಾರೆಯೆ ?

ಮಾಸ್ತರು :

ನಿಜವಾಗಿಯೂ ಒಪ್ತಾಳೆ ! ಇಪ್ಪತ್ತೈದು ವರ್ಷದ ನನ್ನ ಸಹವಾಸ ದೋಷ ! ಹಾಗೆಯೇ ನಾನು ಆನಂದೂಗೆ ಹೇಳಿಯೂ ಇದೇನೆ !

ಭಟ್ಟರು :

ಶಿವಶಂಕರ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :
ಆದರೆ, ಸ್ವಲ್ಪ ಮೊದಲೇ ಕಾಗದ ಬರೆದು, ನಾವಿಬ್ಬರೂ ಬಂದು ನಿಮ್ಮಿಬ್ಬರನ್ನೂ ಹರಸೋದಕ್ಕೆ ಅವಕಾಶ ಮಾಡಿಕೊಡು ಅಂತಲೂ ಹೇಳಿದೇನೆ !

ರಾಯರು :
ಇದೆಲ್ಲ ಬರೀ ಮಾತು ಮೇಷ್ಟರೇ ! ಆನಂದೂ ಹಾಗೆಂದೂ ಮಾಡೋದಿಲ್ಲ ಅನ್ನೋದು ನಿಮಗೆ ಅಷ್ಟೊಂದು ಖಚಿತವಾಗಿ ಗೊತ್ತಿರೋದರಿಂದಲೇ ಹೀಗೆ ಮಾತಾಡೋದಕ್ಕೆ ಸಾಧ್ಯ ನಿಮಗೆ !

ಭಟ್ಟರು :
ಹಾಂ ! ಅದ್ದೀಗ ಸರ್ರಿಯಾದ ಮಾತು !

ಮಾಸ್ತರು :
ನಾನಿನ್ನೇನು ಹೇಳಲಿ ? ನನ್ನ ನಂಬಿಕೆ ಇಷ್ಟು ! ನಮ್ಮ ಜನದಲ್ಲೇ ನಮಗೆ ಬೆಲೆ ಇಲ್ಲ ಅಂತಲೋ, ಬೇರೆ ಕಡೆ ಅವಕಾಶಗಳು ಹೆಚ್ಚಾಗಿವೆ ಅಂತಲೋ ನಮ್ಮ ಹುಡುಗರು ಈಗ ಹುಟ್ಟಿದೂರನ್ನ ಬಿಟ್ಟು ದೇಶದ ಮೂಲೆ ಮೂಲೇಗೆ ಹೋಗ್ತಿದಾರೆ ! ಹಾಗೆ ಹೋದವರು ಅಲ್ಲಿನ ಜನದ ಜೊತೆ ಬೆರೆತುಕೊಳ್ಳಬೇಡವೆ ! ನಮ್ಮ ದೇಶ ಒಂದು, ನಾವೆಲ್ಲ ಒಂದು ಅನ್ನೋ ಅರಿವು ಅವರಲ್ಲಿ ಮೂಡಿದಾಗಲೇ, ಅವರ ಮೂಲಕ ನಮ್ಮದೂ ಉದ್ಧಾರ ?

ರಾಯರು :
ಹಯ್ಯೋ ಬಿಡಿ ಸ್ವಾಮೀ. ನಮ್ಮ ಊರಿನವರೇ ನಮಗಿಲ್ಲ ! ಇನ್ನು ಒಂದೇ ದೇಶದವರೂ ಅಂತ ಅವರಿವರ ಜೊತೆ ಹೊಂದಿಕೊಂಡು ಹೋಗೋದು ಸಾಧ್ಯವೇ ಅಂತೀನಿ ! ಹದಿನಾಲ್ಕು ಭಾಷೆ ; ಹದಿನೆಂಟು ರಾಜ್ಯ ! !

ಭಟ್ಟರು :
ಶಿವಶಂಕರ !

ಮಾಸ್ತರು :
ಇನ್ನೂ ಹೇಗೆ ಹೇಳಲಿ ? ನಮ್ಮದು ಒಂದೇ ದೇಶ, ಒಂದೇ ಜನ ಅನ್ನೊ ಅಭಿಮಾನ, ನಮ್ಮ ನಮ್ಮಲ್ಲಿ ಆತ್ಮೀಯತೆ ಬರಬೇಕಾದರೆ ಬೇರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಷ್ಟ್ರಕ್ಕೆ ಪ್ರವಾಸ ಹೋದಾಗ ಅಷ್ಟೇ–ಅನ್ನೊ ಹಾಗಾದರೆ ಹ್ಯಾಗೆ ? ಅಲ್ಲಽ, ನಮ್ಮ ನಮ್ಮಲ್ಲಿ ಸಂಪರ್ಕ ಹೆಚ್ಚಾಗಿ ನಿಕಟವಾಗದೇ ಹೋದರೆ, ಒಬ್ಬರ ಭಾಷೆ ಇನ್ನೊಬ್ಬರು ಕಲೀದೇ ಇದ್ದರೆ, ಒಬ್ಬರಲ್ಲಿರೋ ಒಳ್ಳೆಯದನ್ನ ಇನ್ನೊಬ್ಬರು ತಿಳಿದೂ ತೊಗೊಳ್ಳದೇ ಇದ್ದರೆ ದೇಶ ಹ್ಯಾಗೆ ಉದ್ಧಾರವಾಗಬೇಕೂ—ಅಂತ ? ಇಲ್ಲಿಂದ—ಅಲ್ಲೀಗೆ ಹೋದ ನಮ್ಮ ಹುಡುಗರು ಅಲ್ಲಿಯ ಅನ್ನ ತಿಂದೂ, ಅವರ ಜೊತೆ ಇದ್ದೂ, ಅವರ ಭಾಷೆ ಕಲಿಯಬಾರದೂ—ಅವರ ಜೊತೆ ಬೆರೆಯಬಾರದೂ—ಅಂದರೆ—!

ರಾಯರು :

ಭಾಷೆ ಕಲೀಲಿ ಸ್ವಾಮೀ ! ಆದರೆ ಮದುವೆ ಅಂದರೆ ಹ್ಯಾಗ್ರೀ ?

ಭಟ್ಟರು :

ಆ ಭಾಷೆ ತಾನೇ ಎಂಥದು ಸ್ವಾಮೀ ! ಈಗ ನೋಡೀ—ನಮ್ಮ ನಂಜುಂಡೂ ಅದೇನೋ ತರಬೇತೀ ಅಂತ ಮದರಾಸಿಗೆ ಹೋಗಿದ್ದ ನಲ್ವಾ ಒಂದು ಮೂರು ತಿಂಗಳು, ಬಂದವನೇ ಆ ಅವರ ಭಾಷೇಲಿ ಮಾತು ಉರುಳಿಸಿದ. ಆ ಮೈಲಿಗೆ ಭಾಷೇನ ಮನೇಲಿ ಆಡಿದರೆ ಮನೆ ಬಟ್ಟು ಒದ್ದೋಡಿಸ್ತೀನಿ ಅಂತ ಖಡಾಖಂಡಿತವಾಗಿ ಹೇಳ ಬೇಕಾಯಿತು—ನಾನು !—ಶ್ವಪಚ ಭಾಷೆ ತಂದು !!

ಮಾಸ್ತರು :

(ಬೆರಗಾಗಿ) ಶ್ವಪಚ ಭಾಷೆ ! ?

ಭಟ್ಟರು :

ಹುಂ ! ಈಗ ನೋಡೀ—ನಮ್ಮಲ್ಲಿಗೆ ಬಂದು, ನಮ್ಮ ದುಡ್ಡು ಮೇಯ್ತಿರೋ ಆ ಕಡೇ ಮನೇ ಅರವದೋನು ಕನ್ನಡ ಕಲೀಬಾರದೇನು ?

ಮಾಸ್ತರು :

ಹಂ ! ಒಂದು ದೃಷ್ಟಿಯಿಂದ ನೀವು ಹೇಳೋದು ನಿಜ....ಅವರೂ....

ಪಾತಮ್ಮ :

ಯಾಕೆ ! ಆ ತಮಿಳಿನೋನು ದಿನಾ ಹಣ್ಣು ಮಾರೋಕೆ ಬರ್ತಾನಲ್ಲಽ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನು ಮಾತಾಡೋದು ಕನ್ನಡವೇ ತಾನೇ ! ಸ್ವಲ್ಪ ಏನೋ ಒಂದು ಥರಾ—ಮಾತಾಡ್ತಾನೆ ತಮಿಳು ರಾಗ ಬೆರಸಿ ಅಷ್ಟೆ ! ಎಷ್ಟು ಒಳ್ಳೆಯವನು ಪಾಪ ! ವ್ಯಾಪಾರದಲ್ಲಿ ಒಂದು ಚೂರೂ ಮೋಸವಿಲ್ಲ ಅವನ ಹತ್ತಿರ ! ಅದೇ ನಮ್ಮೋರ್ವೋ ! —ದೇವ್ರೋಗತಿ !

ರಾಯರು :

ಸರಿ ಬಿಡೆ—ನೀನೊಬ್ಬಳು ! ಆ—ಅವನೋ, ಅವನ ಕನ್ನಡವೋ, ಅವನ ವ್ಯಾಪಾರವೋ !

ಪಾತಮ್ಮ :

ಏನೋ—ಅಂತೂ ಕನ್ನಡ ಕಲಿತು ಆಡ್ತಾನಲ್ಲ !

ಮಾಸ್ತರು :

ಹಾಂ ! ಇಲ್ಲಿ ಬಂದ ಮೇಲೆ ಇಲ್ಲೀ ಭಾಷೇ—ಅಂತ

ರಾಯರು :

ಸರಿ ಬಿಡಿ--ಅದೆಲ್ಲ ಅವನ ಲಾಭಕ್ಕೆ ತಾನೇ !

ಮಾಸ್ತರು :

ಹೌದು. ನಮ್ಮ, ನಮ್ಮ ಲಾಭಕ್ಕೇ ಅಂತಲೇ ಇನ್ನೊಬ್ಬರನ್ನ ಅರ್ಥ ಮಾಡಿಕೊಳ್ಳಬೇಕು ಅನ್ನೋದು—

ಭಟ್ಟರು :

ಅಂದರೆ, ಮಾಸ್ತರು ಹೇಳ್ತಿರೋದು--ಹೊರಗಿನಿಂದ ಇಲ್ಲೀಗೆ ಬಂದ ಜನ ಕನ್ನಡ ಕಲೀಬೇಕು--ನಮ್ಮ ಜೊತೆ ಬೆರೀಲೇಬೇಕು ಅಂತಲೆ ?

ರಾಯರು.

ಅಷ್ಟೇ ಅಲ್ಲ : ಕನ್ನಡದ ಹುಡುಗೀನ ಮದುವೆ ಮಾಡಿಕೊಳ್ಳಬೇಕು ಅಂತ ಕೂಡ.

ಭಟ್ಟರು :

ಶಿವಶಂಕರ !

ಮಾಸ್ತರು :

ಯಾಕಾಗಬಾರದು ಅಂತ ! ಬುದ್ಧಿವಂತೆಯಾದ ಕನ್ನಡದ ಹುಡುಗೀ

Sri Vidyabharathi Book Centre, Sringeri

CC-O. In Public Domain. Digitized by eGangotri

ತನಗೆ ತಕ್ಕವನನ್ನು ತಾನೇ ಯಾಕೆ ಆರಿಸಿಕೊಳ್ಳಕೂಡದು ? ಅಂತಹ ಮದುವೆಗಳಾಗಿಲ್ಲ ಅಂತೀರೇನು ? --ಅಥವಾ ಹಾಗೆ ಮದುವೆಯಾದ ಅವರು ಸುಖವಾಗಿಲ್ಲವೋ ? ಬೇರೆ ಬೇರೆ ಭಾಷೆ ಆಡೋರಲ್ಲೂ ಬುದ್ಧಿವಂತರಿದಾರೆ ಸ್ವಾಮೀ—ಮನ್ಮಥನ ಹಾಗೆ ನೋಡೋಕೆ ಚೆನ್ನಾಗಿರೋರೂ ಇದಾರೆ ! ಸಾವಿರ ರೂಪಾಯಿ ಸಂಬಳ ತರುವ ಸರದಾರರೂ ಇದಾರೆ.

ಪಾತಮ್ಮ :
ಹಯ್ಯೋ ಏನ್ಮಾತಾಡ್ತೀರಿ ಮಾಸ್ತರೇ ! ನಿಮ್ಮ ಶಕುಂತಲಾ ಕೇಳಿಸಿಕೊಂಡು ನಿಮ್ಮ ಬಾಣ ನಿಮ್ಮ ಕಡೆಗೇ ತಿರುಗಿಸಿಯಾಳು !

ಭಟ್ಟರು :
(ನಗುತ್ತ) ಅಂತಹ ಅಳಿಯ ಸಿಕ್ಕಿಬಿಟ್ಟರೆ, ಅವನ ಆ ಮೈಲಿಗೆ ಭಾಷೆ ಕೇಳಿ ಊರು ಬಿಟ್ಟು ಓಡಿ ಹೋಗಬೇಕು—ನೀವು—ಅಷ್ಟೆ !

ಮಾಸ್ತರು :
ಮತ್ತೆ ಭಾಷೆಯ ಮಾತನ್ನೇ ಆಡ್ತೀರಲ್ಲ ನೀವು! ಇದು ಮೈಲಿಗೆ ಭಾಷೆ ಅಂದರೆ ಮಡಿ ಭಾಷೆ ಯಾವುದು ?

ಭಟ್ಟರು :
ಆ—ಅಂ....ಸಂಸ್ಕೃತ !

ಮಾಸ್ತರು :
ಹಾಗಿದ್ದರೆ ಕನ್ನಡ—?

ಭಟ್ಟರು :
ಅದೂ ಆಡುವ ಭಾಷೆ ! ಪರವಾಗಿಲ್ಲ ! ಮಾತೃಭಾಷೆಯಾಗಿರೋದರಿಂದ ಅದೂ ಮಡಿ ಭಾಷೆಯ ಜಾತಿಯಲ್ಲೇ ಬರುತ್ತೆ !

ರಾಯರು :
(ನಗುತ್ತ) ಆದರೂ ಭಟ್ಟರೆ, ಭಾಷೆಯಲ್ಲಿ ಹೀಗೆ ಮಡಿ ಜಾತಿ, ಮೈಲಿಗೆ ಜಾತಿ ಅಂತ ನಾನು ಕೇಳಿರಲಿಲ್ಲ !

ಭಟ್ಟರು :
ಯಾಕೆ ಸ್ವಾಮೀ ! ಈಗ ಇಂಗ್ಲೀಷಿನಲ್ಲಿ ನಮ್ಮ ಮಂತ್ರಾನೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವರ್ತಿಸಿ ಹೇಳಿಬಿಟ್ಟರೆ, ದೇವರ ಪೂಜೆ ಆದಹಾಗೆ ಆಗುತ್ತೆ? ಯಜ್ಞ, ಯಾಗ, ಹವನ ಹೋಮ ಸಾಧ್ಯವೆ? ಹಹ್ಹ—ಇಂಗ್ಲೀಷಿ ನಲ್ಲೇ ಮಂತ್ರ ಹೇಳೋಣವಾಗಲಿ ಹಾಗಾದರೆ! (ಗೆದ್ದ ಹುಂಜದಂತೆ ಬೀಗುತ್ತಾರೆ.)

ರಾಯರು :

ಹಂ! ಹೋಗಲಿ—ಬಿಡಿ

ಭಟ್ಟರು :

ಅಲ್ಲ—ಇವರು ಅಂದ್ರಲ್ಲ ಅಂತ ಹೇಳಿದೆ ಅಷ್ಟೆ! ಇರೋ ವಿಷಯ!

ಮಾಸ್ತರು :

ಅಂದರೆ—? ಇಂಗ್ಲೀಷಿನಲ್ಲೋ, ತಮಿಳಿನಲ್ಲೋ, ಮರಾಠೀಲೋ ಪ್ರಾರ್ಥನೆ ಮಾಡಿದರೆ, ದೇವರಿಗೆ ಮುಟ್ಟೋದಿಲ್ಲ ಅಂತೀರಾ ಹಾಗಾದರೆ?

ಭಟ್ಟರು :

ಅಹ! ಇಂಗ್ಲೀಷ್ ದೇವರಿಗೆ ಮುಟ್ಟಬಹುದು—ನಮ್ಮ ದೇವರಿಗೆ ಮುಟ್ಟೋದಿಲ್ಲ! ತಮಿಳು ದೇವರಿಗೋ ಮರಾಠಿ ದೇವರಿಗೋ ಮುಟ್ಟ ಬಹುದು. ಆದರೆ—ನಮ್ಮ ದೇವರಿಗೆ ಮುಟ್ಟೋದಿಲ್ಲ!

ಮಾಸ್ತರು :

ಕನ್ನಡದಲ್ಲಿ ಪ್ರಾರ್ಥನೆ ಮಾಡಿದರೆ—?

ಭಟ್ಟರು :

ಓಹೋ! ಓಹೋ!

ಮಾಸ್ತರು :

ಅಂದರೆ, ಜನಕ್ಕೆ ತಕ್ಕ ಭಾಷೆ—! ಭಾಷೆಗೆ ತಕ್ಕ ದೇವರು!

ರಾಯರು :

(ಪಾತಮ್ಮನಿಗೆ) ಗಹನವಾಯ್ತು ಇದು! ಹೋಗು ಸ್ವಲ್ಪ ಕಾಫಿ ಮಾಡು —(ಪಾತಮ್ಮ ಹೊರಡುತ್ತಾರೆ)

ಭಟ್ಟರು :

ಹೌದು ಸರ್ರಿಯಾಗಿ ಹೇಳಿದಿರಿ ತಾವು! ಆ ಜನಗಳ ದೇವರೇ ಬೇರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಷೆಯೇ ಬೇರೆ, ಊರು ಬೇರೆ—ಊಟ ಬೇರೆ—ಅದಕ್ಕೇ ಇತರೇ ಜನ ಅನ್ನೋದು ! ನಮಗೂ ಅವರಿಗೂ ಸಂಬಂಧವೇ ಇಲ್ಲದೇ ಇರೋವಾಗ ಇನ್ನು ಬಾಂಧವ್ಯ ಉಂಟಾಗೋದಕ್ಕೆ ಸಾಧ್ಯವೆ? ಹಹ್ಹ ! ಶಿವಶಂಕರ—ಶಿವಶಂಕರ ! (ತಮ್ಮ ಮಾತಿಗೆ ತಾವೇ ಆನಂದಪಡುತ್ತಾರೆ)

ಮಾಸ್ತರು :

ನಮ್ಮದೇ ದೇಶದಲ್ಲೇ ಅವರೂ ನಮ್ಮ ಹಾಗೇ ಇದೇ ಮಣ್ಣಿನ ಮಕ್ಕಳಾಗಿ ಇದಾರಲ್ಲಾ ಸ್ವಾಮೀ—ಆ ಸಂಬಂಧವೂ ಇಲ್ಲವೆ ನಮ—ನಮಗೆ ?

ಭಟ್ಟರು :

ಛೆ ! ಎಂಥಾ ಸಂಬಂಧ ನಮ—ನಮಗೆ ?

ಮಾಸ್ತರು :

ಅಲ್ಲ ಸ್ವಾಮೀ ! ಹೋದ ವರ್ಷ ನೀವು ಊರಲ್ಲಿ ಇಲ್ಲದಾಗ, ನಿಮ್ಮ ಹುಡುಗ ಮರದಿಂದ ಬಿದ್ದು, ಪಾಪ, ಮೂಳೆ ಮುರಕೊಂಡಾಗ, ನಿಮ್ಮ ಮನೇ ಸಾಲಿನ ಆ ಗುಜರಾಥೀ ಸೇಟ್ ಸಾಹೇಬ, ತನ್ನ ಕಾರಿನಲ್ಲೇ ಮಗೂನ ಆಸ್ಪತ್ರೇಗೆ ಕರಕೊಂಡು ಹೋಗಿ, ತಾನೇ ನಿಂತು, ಉಪಚಾರ ಮಾಡಿಸಿ, ಮತ್ತೆ ಮನೇಗೆ ಕರ್ಕೊಂಡು ಬಂದುಬಿಟ್ಟ—ಅಂತ ಹೇಳಿದಿರಿ—ಆವತ್ತು.

ಭಟ್ಟರು :

ಹೌದು—ಈಗ 'ಇಲ್ಲ' ಅಂತಿದೇನೆಯೇ ?

ಮಾಸ್ತರು :

ಮತ್ತೆ, ಸಂಬಂಧವಿಲ್ಲದೆಯೂ ಹಾಗೆ ಉಪಕಾರ ಮಾಡಿದನಲ್ಲಾ—ಂತ—

ಭಟ್ಟರು :

ಹಾಗೇ ಅಂತ ಅವನನ್ನ ದೇವರ ಮನೇಗೆ ಕರ್ಕೊಂಡು ಹೋಗಿ ಕೂರಿಸಿ, ಪೂಜೆ ಮಾಡೋದಕ್ಕೆ ಸಾಧ್ಯವೆ ಸ್ವಾಮೀ ? ನಮ್ಮ ಊರಿಗೆ, ನಮ್ಮ ಕೇರಿಗೆ ಬಂದು ಕೂತ ಮೇಲೆ, ಕಾರಿದ್ದೂ, ಆಷ್ಟೂ ಮಾಡದಿದ್ರೆ ? ಆದರೂ, ಅದ್ದಾದ್ದಮೇಲೆ, ಆವತ್ತಿನಿಂದ ಇವತ್ತಿನವರೆಗೆ ಒಂದು ಸಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದರೂ ನಿಂತು ಮಾತಾಡಿದಾನೆಯೆ ಅವನು ನನ್ನ ಹತ್ತಿರ? ಕಂಡಾಗ ಕೈ ಎತ್ತಿ ನಮಸ್ಕಾರ ಕೂಡಾ ಮಾಡೋದಿಲ್ಲ ! ಈ ಹೊರಗಿನವರನ್ನ ಎಂದೂ ನಂಬಬಾರದು !

ಮಾಸ್ತರು :

ಮತ್ತೆ 'ಹೊರಗಿನವರು' ಅಂತೀರಲ್ಲ !

ಭಟ್ಟರು :

ಹೌದು ! ಮತ್ತೇನು ನಮ್ಮವರೆ ಅವರು ? ಬೇರೆ ದೇಶಕ್ಕೆ ಹೋದರೆ ಸೇರಿಸೋದಿಲ್ಲ ಅಂತ ಇಲ್ಲೇ ಉಳಿದಿದಾರೆ ನಮ್ಮ ದೇಶದಲ್ಲೇ !

ಮಾಸ್ತರು :

ಸರ್ರೀ ಹೋಯ್ತು! ಅಂತೂ 'ನಮ್ಮದು' ಅಂತಲಾದರೂ ಹೇಳಿದಿರಲ್ಲ. ಪುಣ್ಯಕ್ಕೆ 'ನನ್ನದು' ಅಂತ ಹೇಳಲಿಲ್ಲ !

ಭಟ್ಟರು :

ಶಿವಶಂಕರ ! ಹಾಗೆ ಯಾರಾದರೂ ಹೇಳುತಾರೆಯೇ ಸ್ವಾಮೀ ?

ಮಾಸ್ತರು :

ಮತ್ತೇನು ಹೇಳಿ ನಿಮ್ಮ ಮಾತಿನ ಅರ್ಥ ! ಸಾವಿರ ವರ್ಷಗಳಿಂದ ನಮ್ಮ ಪೂರ್ವಿಕರು ಹೇಳುತ್ತಾ ಇದ್ದದ್ದಕ್ಕೆಲ್ಲ ವ್ಯತಿರಿಕ್ತವಾಗುತ್ತಲ್ಲ ನಿಮ್ಮ ಈ ಮಾತು !—ಈ ಭಾವನೆ ! "ನಾವೆಲ್ಲ ಒಂದು" 'ರಾಷ್ಟ್ರವೆಲ್ಲ ಒಂದು' 'ಒಟ್ಟಿಗೆ ದುಡಿಯೋಣ—ಒಟ್ಟಿಗೆ ಊಟ ಮಾಡೋಣ—ಒಟ್ಟಿಗೆ ಬಾಳೋಣ' ಅಂತ ಹಿಂದಿನ ಕಾಲದ ಆ ಋಷಿಗಳು—ಆ ದೃಷ್ಟಾರರು—ಆ ಜ್ಞಾನಿಗಳು—ನಿಮ್ಮ ಮಡಿ ಭಾಷೆಯಾದ ಸಂಸ್ಕೃತದಲ್ಲೇ—

(ಅಷ್ಟರಲ್ಲಿ ಒಳಗಿನಿಂದ Loud Speakerನಲ್ಲಿ 'ಈಗ ಸರಿಯಾಗಿ ನಿಂತ್ಕೋ ನೀನು' 'ಸ್ವಲ್ಪ ಕತ್ತೆತ್ತಬೇಕು—ಹ—ಹಾ' 'ಇದು ಫೈನಲ್ಲು ! ತಪ್ಪಿದರೆ ಪ್ರಯೋಜನವಿಲ್ಲ' ಎನ್ನುವ ಮಾತೂ ರಂಗವನ್ನು ಸಜ್ಜುಮಾಡುವ ಶಬ್ದ ವಿಶೇಷಗಳೂ ಕೇಳಿಬರುತ್ತವೆ.)

ಮಾಸ್ತರು :

ಆ್ಹಂ ? ಏನು ನಡೀತಿದೆ ಒಳಗೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಅದೇ ಡ್ರೆಸ್ ರಿಹರ್ಸಲ್ ಅಂತೆ ! ನಿಮ್ಮ ಶಕುಂತಲಾ, ನಮ್ಮ ಮೋಹನ ಸೇರಿಬಿಟ್ಟಿದಾರೆ ಗುಂಪುಕಟ್ಟಿಕೊಂಡು. ಒಂದೇ ಸಮ ನಡೀತಾ ಇದೆ ಅವರ ಪ್ರಾಕ್ಟೀಸು ! "ನಾವೆಲ್ಲರು ಒಂದೇ" ಅಂತ ಅದೇನೋ ನಾಟಕವಂತಲ್ಲಾ ಕಾಲೇಜಿನಲ್ಲಿ—ನಾಳೆ !

ಮಾಸ್ತರು :

ಅರೆ ! ಅದೇನು ಮಾಡ್ತಿದಾರೆ ನಾವೂ ನೋಡೋಣಲ್ಲಾ—ಈ ಮಾತನ್ನ ಇಲ್ಲಿಗೇ ಬಿಟ್ಟು !

ಭಟ್ಟರು :

ಹಂಯ್ಯೋ ಅದೇನು ಬಿಡಿ ಸ್ವಾಮೀ—ಹುಡುಗರ ಆಟ !

ಮಾಸ್ತರು :

ಹುಡುಗರಿಂದಲೇ ಎಷ್ಟೋ ವಿಷಯಗಳನ್ನ ನಮ್ಮಂತಹ ಮುದುಕರೂ ಕಲೀಬೇಕಾಗಿದೆ ಭಟ್ಟರೆ (ನಗುತ್ತಾ) ಕಲಿಗಾಲ ನೋಡೀ—ಅಹಹ ತಾಳಿ ನೋಡೋಣ—ಅದೇನು ಮಾಡ್ತಿದಾರೇ—ಅಂತ !—

[ಎಂದು ಹಿಂದಿನ ಪರದೆಯನ್ನು ಮುಟ್ಟಲೊಡನೆ ಅದು ಸೀಳಿ ಅತ್ತ ಇತ್ತ ಸರಿದು ಹೋಗುತ್ತದೆ ಮುನ್ನೆಲೆಯ ದೀಪ ಆರಿ, ಹಿನ್ನೆಲೆ ಪ್ರಜ್ವಲಿಸುತ್ತದೆ. ಮುನ್ನೆಲೆಯ ಪಾತ್ರಗಳೆಲ್ಲ ಹಿಂದೆ ಹಿಂದಕ್ಕೆ ರಂಗಮಂಟಪದ ಇಕ್ಕೆಲಗಳಿಗೆ ಸರಿದುನಿಂತು, ಹಿನ್ನೆಲೆಯಲ್ಲಿ ನಡೆವುದನ್ನು ನಿಟ್ಟಿಸಿ ನೋಡುತ್ತಾರೆ. ಒಳರಂಗದಲ್ಲಿ ಉದಯ ಸೂರ್ಯ ಥಳಥಳಿಸುತ್ತಿದ್ದಾನೆ. ಮುಂದೆ ಮುನಿಗಳ ವೇಷದಲ್ಲಿ ಮೂವರು ಕೈ ಎತ್ತಿ ನಮಿಸುತ್ತ ಶ್ರುತಿಬದ್ಧರಾಗಿ....]

ಮುನಿಗಳು :

ಸಂಗಚ್ಛಧ್ವಂ ಸಂವದಧ್ವಂ
ಸಂವೋ ಮನಾಂಸಿ ಜಾನತಾಂ
ದೇವಾಭಾಗಂ ಯಥಾಪೂರ್ವೇ
ಸಂಜಾನಾನಾ ಉಪಾಸತೇ

[ಗಂಭೀರವಾದ ಒಂದು ಧ್ವನಿ ಆರ್ಥವನ್ನು ಆಗಲೇ ಧ್ವನಿವರ್ಧಕದ ಮೂಲಕ ಉಗ್ಗಡಿಸುತ್ತದೆ]

Sri Vidyabharathi Book Centre, Sringeri

CC-O. In Public Domain. Digitized by eGangotri

ಒಟ್ಟಿಗೆ ನಡೆವೆವು—ಒಟ್ಟಿಗೆ ನುಡಿವೆವು
ಒಟ್ಟಿಗೆ ಮನದಲಿ ಧ್ಯಾನಿಪೆವು

ಮುನಿಗಳು :

ಸಮಾನೋ ಮಂತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹಚಿತ್ತಮೇಷಾಂ
ಸಮಾನಂ ಮಂತ್ರಮಂತ್ರಯೇವಃ
ಸಮಾನೇ ನವೋ ಹವಿಷಾ ಜುಹೋಮಿ—

[ಗಂಭೀರವಾದ ಅದೇ ಧ್ವನಿ]

ಮಂತ್ರವು ಒಂದೇ ಸಮಿತಿಯು ಒಂದೇ
ಮನವೂ ಒಂದೇ—ನಡೆಯೂ ಒಂದೇ—

ಮುನಿಗಳು :

ಸಮಾನೀವ ಆಕೂತಿಃ
ಸಮಾನಾ ಹೃದಯಾನಿವಃ
ಸಮಾನವಸ್ತುವೋ ಮನೋ
ಯಥಾವಃ ಸುಹಾಸತಿ

[ಗಂಭೀರವಾದ ಅದೇ ಧ್ವನಿ]

ಮನಸ್ಸಿನ ಇಷ್ಟಾರ್ಥಗಳು ಒಂದೇ
ಹೃದಯವೂ ಮನಸ್ಸೂ ಒಂದೇ
ಹೀಗೆ ನಗುನಗುತ ನಿಲನಗೊಂಡ ನಾವೂ ಒಂದೇ—

ಮುನಿಗಳು :

ಸಹೃದಯಂ ಸಾಂ ಮನಸ್ಯವವಿದ್ವೇಷಂ ಕೃಣೋಮಿವಃ
ಅನ್ಯೋನ್ಯಮಭಿನವತ ವತ್ಸಂ ಜಾತಮಿ ಪಾಘ್ನಾ ಶ್ಯ
ಮಾಭ್ರಾತಾ ಭ್ರಾತರಂ ದ್ವಿಕ್ಷನ್ ಮಾಸ್ವಸಾರ ಮುತಸ್ವಸಾ
ಸಮ್ಯಂಚಃ ಸರ್ವ ಸ್ತಾಭೂತ್ವಾ ವಾಚಂ ವದತ ಭದ್ರಯಾ ।

Sri Vidyabharathi Book Centre, Sringeri

CC-O. In Public Domain. Digitized by eGangotri

(ಗಂಭೀರವಾದ ಅದೇ ಧ್ವನಿ)

ಸಹೃದಯ, ಹಸನಾದ ಮನ, ಇವುಗಳ ಮುಂದೆ
ಎಂತಹ ವಿದ್ವೇಷವೂ ಕರಗಿಹೋಗುತ್ತದೆ.
ಸೋದರನು ಸೋದರನನ್ನೂ ಸೋದರಿಯು ಸೋದರಿಯನ್ನೂ
ನೋಯಿಸದೆ, ಎಂದೂ ಒಂದಾಗಿ ಒಳ್ ನುಡಿಯುತ್ತೇವೆ.

ಮುನಿಗಳು :

ಸಹನಾವವತು—

ಧ್ವನಿ :

ಒಟ್ಟಾರೆ ಎಲ್ಲರನ್ನೂ ಕಾಪಾಡಲಿ—

ಮುನಿಗಳು :

ಸಹನೌ ಭುನಕ್ತು

ಧ್ವನಿ :

ಒಟ್ಟಿಗೆ ಎಲ್ಲರೂ ಒಂದಾಗಿ ಅನುಭವಿಸೋಣ—

ಮುನಿಗಳು :

ಸಹವೀರ್ಯಂ ಕರವಾವಹೈ—

ಧ್ವನಿ :

ಒಟ್ಟಿಗೆ, ಎಲ್ಲರೂ ಒಂದಾಗಿ ವೀರಕಾರ್ಯ ಮಾಡೋಣ

ಮುನಿಗಳು :

ತೇಜಸ್ವಿನಾವಧೀತ ಮಸ್ತು

ಧ್ವನಿ :

ನಮ್ಮ ಸುಜ್ಞಾನ ಶಾಶ್ವತವಾಗಲಿ

ಮುನಿಗಳು :

ಮಾವಿದ್ವಿಷಾವಹೈ—

ಧ್ವನಿ :

ನಾವೆಂದೂ ಒಬ್ಬರನ್ನೊಬ್ಬರು ದ್ವೇಷಿಸುವುದು ಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನಿಗಳು :

ಓಂ ಶಾಂತಿಃ ಶಾಂತಿಃ ಶಾಂತಿಃ

(ಆಸ್ಪರಲ್ಲಿ ಇದ್ದಕ್ಕಿದ್ದಂತೆ ಮುನ್ನೆಲೆಯಲ್ಲಿ ರಂಗಪಾರ್ಶ್ವದಿಂದ ಚಿಕ್ಕತ್ತೆ, 'ಪಾತಮ್ಮಾ-ಪಾತಮ್ಮಾ' ಎಂದು ಕೂಗುತ್ತಾ ನುಗ್ಗಿ, ಇನ್ನೊಂದು ಪಾರ್ಶ್ವದ ಕಡೆಗೆ (ಮನೆಯ ಒಳಕ್ಕೆ) ನಡೆಯುತ್ತಾಳೆ. ರಂಗದ ಮಧ್ಯೆ ಬಂದಾಗ ಆಕೆಗೇ ಗಾಬರಿಯಾಗಿ, ನಿಂತು, ತಾನೂ ಒಂದೆರಡು ಸೆಕೆಂಡು ಒಳರಂಗದ ನಾಟಕವನ್ನೂ ನೋಡಿ, ಮತ್ತೆ 'ಪಾತಮ್ಮಾ ಪಾತಮ್ಮಾ..ಇದೇನೇ' ಎಂದು ಕೂಗುತ್ತಾ ಮುಂದುವರಿಯುತ್ತಾಳೆ. ಅಕೆ ಇದ್ದಕ್ಕಿದ್ದಂತೆ ಎಬ್ಬಿಸಿದ ಗದ್ದಲದಿಂದಾಗಿ ಎಲ್ಲ ತಟಕ್ಕನೆ ನಿಂತು, ಒಳಗಿನ ಧ್ವನಿವರ್ಧಕದಿಂದ, 'ಯಾರದು....? ಥತ್ ! ಕರ್ಟನ್ ಹಾಕಿರೋ' ಎಂಬ ಮಾತುಗಳು ಕೇಳಿ ಬಂದೊಡನೆ, ಹಿನ್ನೆಲೆಯ ಪರದೆ ಮುಚ್ಚಿಕೊಳ್ಳುತ್ತದೆ. ರಂಗದ ಮುನ್ನೆಲೆಯಲ್ಲಿ ಮತ್ತೆ ಬೆಳಕು ಮೂಡಿದಾಗ, ಎಲ್ಲ ಪಾತ್ರಗಳೂ ಇನ್ನೂ ಪರದೆಯ ಕಡೆಗೇ ನೋಡುತ್ತಿದ್ದಾರೆ. ಭಟ್ಟರು ಜೋಡಿಸಿದ ಕೈಗಳನ್ನೂ ತಲೆಯ ಮೇಲೆತ್ತಿ ಕಣ್ಮುಚ್ಚಿ ನಮಿಸುತ್ತಾ ನಿಂತಿದಾರೆ. ಚಿಕ್ಕತ್ತೆ ಈಗ ಒಳಗೆ ಹೋಗಿದ್ದಾಳೆ)

ಮಾಸ್ತರು :

ಹೂಂ. ಸೊಗಸಾಗಿ ಮಾಡ್ತಾರೆ ಹುಡುಗರು. ಆದರೂ ಇನ್ನೊಂದೆರಡು ರಿಹರ್ಸಲ್ ಆಗಬೇಕು—

ರಾಯರು :

ಓ ಭಟ್ಟರೇ-ಇನ್ನೂ ಎಚ್ಚರವಾಗಲಿಲ್ವೇ ನಿಮಗೆ–? ದೃಶ್ಯ ಮುಗೀತು!

ಭಟ್ಟರು :

ಆ್ಞಂ—? ಓ—! ಹ—ಹ ಅಹಹ....ಅಂ ?

ರಾಯರು :

ದೃಶ್ಯ ಮುಗೀತೂ–ಅಂದೆ. ನಮ್ಮ ಚಿಕ್ಕತ್ತೆ, ಗುಡ್ಡದ ಕರಡೀ ಹಾಗೆ ನುಗ್ಗಿ ಎಲ್ಲಾ ಮುಗಿಸಿಬಿಟ್ಟಳು !

ಭಟ್ಟರು :

ಅಹಹ—ಹ ! ಆದರೂ ಆಪ್ಯಾಯಮಾನವಾಗಿತ್ತು ಆ ಒಂದು ಕ್ಷಣ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಎಲ್ಲೀದು ಗೊತ್ತಿದೆಯೆ ಭಟ್ಟರೆ, ಈ ಮಾತುಗಳು !

ಭಟ್ಟರು :

ಎಲ್ಲೀದಾದರೇನು ! ಸಂಸ್ಕೃತ. ಅಹಹ—ಎಷ್ಟು ಚೆನ್ನಾಗಿತ್ತು

ಮಾಸ್ತರರು :

ಋಗ್ವೇದ, ಅಥರ್ವವೇದಗಳ ಸೂಕ್ತಗಳು ಅವು. ಅಮೃತಮಯವಾದ ಅಜೇಯ ತತ್ವಗಳನ್ನು ಸಾರುತ್ತಿರುವ–ವೇದಗಳೇ ನಮ್ಮ ಸಂಸ್ಕೃತಿಯ ತಾಯಿಬೇರು.

ಭಟ್ಟರು :

ಅಲ್ವೆ—ಮತ್ತೆ ! ಮುಖ್ಯ ಸಂಸ್ಕೃತ !!

ಮಾಸ್ತರು :

ಐದು ಸಾವಿರ ವರ್ಷ ಹಳೆಯದಾದರೂ ಈ ಸೂಕ್ತಗಳು ನಿತ್ಯನೂತನವಾದ ಮಾತುಗಳನ್ನೇ ಮಿಡಿಯುತ್ತಿವೆ ಭಟ್ಟರೆ ! ಭರತವರ್ಷದ ಸಾರಸ್ವತ ಸಂಪತ್ತು ಅದು !

ಭಟ್ಟರು :

ಅಲ್ಲದೆ ! ಅಲ್ಲದೆ !! ಅದಕ್ಕೇ ದೇವಭಾಷೆ ಅನ್ನೋದು ಇದಕ್ಕೇ !

ಮಾಸ್ತರು :

ಸೂಕ್ತಗಳ ಅರ್ಥ ನೋಡಿ—

ರಾಯರು :

ಏನಿದರ ಅರ್ಥ ಒಂದು ಮಾತಿನಲ್ಲಿ—?

ಮಾಸ್ತರು :

ಒಂದೇ ಮಣ್ಣಿನ ಮಕ್ಕಳು ನಾವು! ನಮ್ಮ ನಮ್ಮಲ್ಲಿ ಯಾವ ಭೇದವೂ ಇಲ್ಲ—ಇರಕೂಡದು.....ಅಂತ !

ರಾಯರು :

ಆ್ಹಂ ! ಆ ? ಓ ! ಐದು ಸಾವಿರ ವರ್ಷಗಳ ಹಿಂದಿನ ಕಾಲಕ್ಕೆ ಹೊಂದಿಕೊಳ್ಳುವ ಮಾತು ಅದು—

CC-O. In Public Domain. Digitized by eGangotri

ಮಾಸ್ತರು :

ಇವತ್ತಿಗೂ ಈ ಮಾತು ಹೊಂದಿಕೊಳ್ಳೋ ಹಾಗೆ ನಾವು ಮಾಡಬೇಕು ಶಾಮರಾವ್! ಆಗಲೇ ನಮ್ಮ ಬಾಳಿಗೆ ಬಲ ಬರೋದು! ಐದು ಸಾವಿರ ವರ್ಷಗಳ ಹಿಂದೆ ಆ ಹಳೇ ಕಾಲದಲ್ಲಿ ತೆರೆದಿದ್ದ ಕಣ್ಣು ಇವತ್ತು ಯಾಕೆ ಮುಚ್ಚಿಕೊಂಡಿರಬೇಕು ?

ಭಟ್ಟರು :

ಅಂದರೆ, ನಾವೆಲ್ಲರೂ ಒಂದೇ—ಅಂತ, ಆ ಮಾತು ತಾನೆ ! ಇವತ್ತು ಎಲ್ಲ ಜಾತಿ, ಎಲ್ಲ ಜನ, ಎಲ್ಲ ದೇಶ—

ಮಾಸ್ತರು :

ಹೌದು "ನಾವೆಲ್ಲರು ಒಂದೇ" ಅಂತ ! ತಾವೇ ನಮ್ಮ ನಮ್ಮಲ್ಲಿ ಕಟ್ಟಿ ಕೊಂಡ ಭೇದಗಳನ್ನು ಒಡೆದಾಗಲೇ ರಾಷ್ಟ್ರಕ್ಕೆ ಶಕ್ತಿ—ರಾಷ್ಟ್ರಕ್ಕೆ ಸುಖ—ಅಂತ !

ಭಟ್ಟರು :

ಶಿವಶಂಕರ !

ರಾಯರು :

ಸರಿ—! ಮಾಸ್ತರು ಹೀಗೆ ಹೇಳ್ತಿರೋದರಿಂದ ನಾವೆಲ್ಲ ಒಂದೇ ಅಂತ ನಂಬಬೇಕು ಅಷ್ಟೆ !

ಮಾಸ್ತರು :

ಹಾಗಲ್ಲ ಶಾಮರಾವ್ ! ನೀವು ಹೇಳಿದ ಹಾಗೆ ಎರಡು ಸಾವಿರ ವೈಲಿ ಉದ್ದ—ಅಗಲ ಇರೋ ಈ ಮಹಾನ್ ರಾಷ್ಟ್ರದ ಜನತೆಯಲ್ಲಿ ನಡೆ-ನುಡಿಯ ಭೇದ ಇರಕೂಡದು ಅಂತ ಅನ್ನೋದು ಸಾಧ್ಯವಿಲ್ಲ ! ಆದರೆ ಆ ಭೇದ, ಬಾಹ್ಯಭೇದ—ಅಂತರಂಗದ ಭೇದವಲ್ಲ.

ರಾಯರು :

ಏನೋ ! ಅಂತೂ ಭೇದವಿದೆ ಅಂತ ಒಪ್ಪಿಕೊಂಡಿರಲ್ಲ !

ಮಾಸ್ತರು :

ಯಾವಾಗ ಇಲ್ಲ ಅಂದಿದೇನೆ ? ಪ್ರಾಚೀನ ಕಾಲದ ಆ ಮಂತ್ರಸೂಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ನಮ್ಮ ನಮ್ಮಲ್ಲಿ ಯಾವ ಭೇದವೂ ಇಲ್ಲ ಎಂದವು. ಇವತ್ತು ನಾವು ಆ ಮಾತನ್ನು ಸ್ವಲ್ಪ ಬದಲಾಯಿಸಿ, ನಮ್ಮ ನಮ್ಮಲ್ಲಿ ಇರಬಹುದಾದ ಭೇದಗಳನ್ನೆಲ್ಲಾ ತಿಳಿದು, ಒಂದಾಗಿ ಬಾಳ್ತೇವೆ ಅನ್ನೋಹಾಗೆ ಆಗಬೇಕು—ಅಷ್ಟೆ ! ಪ್ರತಿಯೊಂದೂ—ಆದಿಯಲ್ಲಿ ಒಂದಾಗಿದ್ದು, ಬರಬರುತ್ತ ಹಲವಾಯಿತು—ಇದು ನಮ್ಮ ಜ್ಞಾನ. ಆ ಹಲವು ಮತ್ತೆ ಒಂದಾಗಬೇಕು—ಇದು ನಮ್ಮ ಧ್ಯೇಯ !

ಭಟ್ಟರು :

ವೇದಾಂತವಾಯಿತು—ತಮ್ಮ ಮಾತು ! ಜೀವ-ಆತ್ಮಗಳ ವಿಷಯ ಅದು ! ನಿಜಜೀವನದ ಮಾತಲ್ಲ !

ಮಾಸ್ತರು :

ಅಂದರೆ—ವೇದಾಂತದ ಮಾತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬಾರದೇ—ಅಂತ. ಜೀವನವನ್ನು ತಾಗದ ವೇದಾಂತ ತಾನೂ ಬಾಳುವುದಿಲ್ಲ.

ಭಟ್ಟರು :

ಶಿವಶಂಕರ !

ಮಾಸ್ತರು :

ಅರ್ಥ ಆಗೋದಕ್ಕೆ ಅಷ್ಟು ಕಷ್ಟವಿಲ್ಲ ಭಟ್ಟರೆ ! ನಾವು ಬೇಡ ಬೇಡ ಅಂದರೂ ನಮ್ಮ-ನಿಮ್ಮ ನಾಡಿಗಳಲ್ಲಿ ಸುಪ್ತವಾಗಿ ಮಿಡೀತಿದೆ ಏಕತೆಯ ತಾನ ! ಇವತ್ತು ಅದರ ಶ್ರುತಿ ಸ್ವಲ್ಪ ತಪ್ಪಿದೆ ಅಷ್ಟೆ ! ರಾಷ್ಟ್ರ ಸಂಸ್ಕೃತಿಯ ಬಲದಿಂದ ಇವತ್ತೂ ನಮ್ಮ ನಾಲಿಗೆ "ಸರ್ವೇ ಜನಾಸ್ಸುಖಿನೋಭವಂತು" ಅಂತಲೇ ನುಡಿಯುತ್ತೆ. ಆದರೆ ಮನಸ್ಸು ಹಳಿ ತಪ್ಪಿಹೋಗಿದೆ. ಮನಸ್ಸಿನ ಬಗೆಯನ್ನೂ ನಾಲಿಗೆಯ ನುಡಿಯನ್ನೂ ಸೇರಿಸಿ ಸುಬದ್ಧವಾಗಿ ಶ್ರುತಿಮಾಡಬೇಕು ಅಷ್ಟೇ ! ನಮ್ಮ ಸಂಸ್ಕೃತಿ "ಹೌದು" ಅನ್ನೋಹಾಗೆ ನುಡಿಯಬೇಕು—ನುಡಿದ ಹಾಗೇ ನಡೆಯುವ ಧೈರ್ಯ ತೋರಿಸಬೇಕು—

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಸ್ಸರಿ ! ಯಥಾಪ್ರಕಾರ—ಮಹಾತ್ಮಾ ಗಾಂಧೀ—(ನಗುತ್ತಾರೆ)

ಮಾಸ್ತರು :

ನಗುವ ಮಾತಲ್ಲ ಶಾಮರಾವ್ ! ನಿಜವಾಗಿ ಆತ ಯುಗಪುರುಷ ! ಆತ ಆಡಿದ ನುಡಿ, ನಡೆದ ಕಡೆ ಅರ್ಥವಾಗಬೇಕಾದರೆ, ನಮ್ಮ ದೇಶಕ್ಕೆ ಇನ್ನೂ ವಯಸ್ಸಾಗಬೇಕು !

ಭಟ್ಟರು :

ಶಿವಶಂಕರ ! ಹಂ ! ಬರ್ತೀನಿ ನಾನಿನ್ನು— ಹಾಗೇ ದಾರೀಲಿ— ಉಗ್ರನರಸಿಂಹಯ್ಯನವರ ಮನೇಗೆ ಹೋಗಿ— (ಏಳಲು ಹವಣಿಕೆ)

ರಾಯರು :

ಯಾಕೆ ! ಹೊರಟುಬಿಟ್ಟಿರಾ ?

ಮಾಸ್ತರು :

ಯಾಕೆ ಅಷ್ಟು ಬೋರ್ ಆಯಿತೇನು ?—ತಮಗೆ—ನನ್ನ ಮಾತು ?

ಭಟ್ಟರು :

ಛ್ಛಾಂ ! ಬೋರು ! ? ಅಂದರೆ ?

ರಾಯರು :

ಬೇಸರವಾಯಿತೇ ಅಂತ—! ಅಥವಾ (ನಗುತ್ತಾ) ತಮಗೆ ಅರ್ಥವಾಗುವ ಸಂಸ್ಕೃತದಲ್ಲೇ ಹೇಳಬೇಕಾದರೆ....ಆ—ಶುಷ್ಕವೇದಾಂತ—ವಾಯಿತೇ—ಅಂತ !

ಭಟ್ಟರು :

ಛೆ ಛೆ ಛೆ ಛೆ ! ರಸವತ್ತಾಗಿತ್ತು ತಮ್ಮ ಮಾತು !

ಮಾಸ್ತರು ;

ಎಲ್ಲಿಂದಲೋ ಹೊರಟು—ಎಲ್ಲೀಗೋ ಬಂದುಬಿಟ್ಟಿವು ಅಷ್ಟೆ !

ಭಟ್ಟರು :

ಹಾಗೇ ಮತ್ತೆ—ಆಗಬೇಕಾದ್ದು—ಹಹ—ಹೆ—ಆ—ಹಿಂದೆ—ಏನಾಗಿದ್ದೆವು ಅಂತ ಗೊತ್ತಿಲ್ಲ—ಮುಂದೆ ಏನಾಗ್ತೀವಿ ಅಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊತ್ತಿಲ್ಲ—ಈಗಿಂದಷ್ಟೇ ನಮಗೆ ಗೊತ್ತು—ಇಂದಿನದಷ್ಟೇ ನಮ್ಮ ಪುಟ್ಟ ಪ್ರಪಂಚ.

ಮಾಸ್ತರು :

ಹಾಂ ! ಈ ಪುಟ್ಟ ಪ್ರಪಂಚದಲ್ಲೇ ಇಷ್ಟೊಂದು ಕಿತ್ತಾಡ್ತೀವಲ್ಲs—ನಮ್ಮ ರಾಜ್ಯ—ನಮ್ಮ ಭಾಷೆ ಅಂತ—!

ರಾಯರು :

ಅದ್ಯಾಕಪ್ಪಾ ಅನ್ನೋದೇ—ಕಿಟ್ಟಣ್ಣ ಮಾಸ್ತರ ಪ್ರಶ್ನೆ !

ಭಟ್ಟರು :

ಹಾಗಂದ್ರೆ ಹ್ಯಾಗೆ ? ಇದೇ ಮತ್ತೆ 'ಪ್ರಾಪಂಚಿಕ' ಅನ್ನೋದು. ಹುಟ್ಟಿದ ಮೇಲೆ ಇದೆಲ್ಲ ಇರಬೇಕಾದ್ದೇ !

ಮಾಸ್ತರು :

"ಇದೆಲ್ಲ ಇರಬೇಕಾದ್ದೇ" ಅಂತ ಸೋಲು ಯಾಕೆ ಒಪ್ಪಿಕೊಳ್ಳಬೇಕು—ಭಟ್ಟರೆ ? 'ಇದೆಲ್ಲ ಇರಕೂಡದು' ಅಂತ ಯಾಕೆ ನಮ್ಮನ್ನಾ ನಾವೇ ತಿದ್ದೋಕೆ ಪ್ರಯತ್ನ ಮಾಡಕೂಡದೂ—ಅಂತ !

ಭಟ್ಟರು :

ಶಿವಶಂಕರ....ಇದರಲ್ಲಿ ನಮ್ಮ ಯತ್ನ....

(ಅಷ್ಟರಲ್ಲಿ ಚಿಕ್ಕತ್ತೆ ಕಿರಿಚಿಕೊಳ್ಳುತ್ತಾ ಬರುತ್ತಾರೆ—ಅವರ ಹಿಂದೆ ಪಾತಮ್ಮನವರೂ--ಆಗಮಿಸುತ್ತಿದ್ದಾರೆ.)

ಚಿಕ್ಕತ್ತೆ :

ಹಯ್ಯೋ ಏನಾಗ್ಹೋಯ್ತೋ ಶಾಮೀ !

ರಾಯರು :

(ಬೆಚ್ಚಿ) ಆ್ಞಂ ? ಯಾಕೆ—? ಏನಾಯ್ತು ಚಿಕ್ಕತ್ತೆ—?

ಚಿಕ್ಕತ್ತೆ :

ಏನಾಯ್ತು ? ತುಂಡು ಅಡಿಕೆ ತರೋಕೆ ಹೋಗಿ ತುಂಟ ಆನೆ ಹಿಡಕೊಂಡು ಬಂದಾ—ಅಂತ, ನಮ್ಮ ಪುಟ್ಟರಾಮು ಇದೇನು ಮಾಡಿಕೊಂಡಿತೋ !

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ರಾಯರು :

ಓ—ಅದೇ ! ಹಂ ! ಹೌದು ಚಿಕ್ಕತ್ತೆ ! ಬಹಳ ಅನ್ಯಾಯ ! ಏನು ಮಾಡೋದು ಅಂತ—ಅದನ್ನೇ ಯೋಚನೆ ಮಾಡ್ತಿದೇವೆ ಎಲ್ಲಾ !

ಚಿಕ್ಕತ್ತೆ :

ಇನ್ನೇನು ಯೋಚನೆ ಎಷ್ಟು ಮಾಡಿದರೆ ಏನು ಪ್ರಯೋಜನವೋ ಸಾಮೀ ! ಮಳೆ ಸುರಿದ ಮೇಲೆ ಕಾಳು ಎರಚಿದರೂ—ಅಂತ.

ಭಟ್ಟರು :

ಏನ್ಮಾಡೋದು ತಾಯೀ—ಹೀಗೆಲ್ಲ ನಡೆದೇ ನಡಿಯುತ್ತೆ—ಪ್ರಪಂಚ ಅಂದ ಮೇಲೆ.

ಚಿಕ್ಕತ್ತೆ :

ಪ್ರಪಂಚ ಅಂದರೆ ಹೀಗೇ ? ಅದೂ ನಮ್ಮ ಪುಟ್ಟರಾಮು !!! ಹಗ್ಗ ಅಂತ ನುಟ್ಟಿದರೆ ಹೆಬ್ಬಾವಾಗಿ ಸುತ್ತಿಕೊಂಡಿತೂ—ಅಂತ ! ಹ್ಯಾಗಿದ್ದೋನು—ಹ್ಯಾಗಾಗಿ ಹೋದ ನಮ್ಮ ಪುಟ್ಟರಾಮು !!

ಮಾಸ್ತರು :

ನೀವು ಭಾವಿಸಿಕೊಂಡಿರೋ ಅಷ್ಟು ಕೆಟ್ಟದೇನು ಆಗಿಲ್ಲ ಅಜ್ಜಿ !

ಚಿಕ್ಕತ್ತೆ :

ಹಯ್ಯೋ—ಬಿಡಿ ಮೇಷ್ಟ್ರೆ--ನೀವಂತೂ ! ದೇವರೇ ಕೊಡವಲ್ಲ, ಇನ್ನು ದಯ್ಯ ಕೊಟ್ಟೇತೇ ಅಂತ—ಇಲ್ಲಿಯೋಳನ್ನ ಮದುವೆ ಯಾಗಿದ್ರೇ ಸುಖ ಕಂಡ ಹಾಗಿತ್ತು ನಾವು ! ಇನ್ನು ಯಾವೋಳೋ ಅಲ್ಲಿಯೋಳನ್ನ ಕಟ್ಟಕೊಂಡು ಬಂದು—

ರಾಯರು :

ನಮ್ಮ ಗ್ರಹಚಾರ ಚಿಕ್ಕತ್ತೇ—ಅವನನ್ನ ಯಾಕೆ ಅನ್ನಬೇಕು !

ಚಿಕ್ಕತ್ತೆ :

ಕಣ್ಣು ಬಿಟ್ಟುಕೊಂಡು ಸಾಕೇ ಹೆಣ್ಣು ಹುಲೀಗಿಟ್ಟರೂ—ಅಂತ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಮ್ಮ :

ಹೆತ್ತೋರ ಹೊಟ್ಟೇ ಮೇಲೆ ಹೀಗೆ ಹೊಡೀತಾನೇ ಹಿರೀ ಮಗ—ಅಂತ ಎಂದೂ ಅನ್ನಿಸಿರಲಿಲ್ಲ (ಕಣ್ಣೀರು)

ಚಿಕ್ಕತ್ತೆ :

ಶಾಪ ಕೊಟ್ಟ ಮೇಲೂ ಕೋಪ ಇಳೀಲಿಲ್ಲಾ ಅಂತ—ಕಟ್ಟಿ ಕೊಂಡಿದ್ದು ಸಾಲದೂ ಅಂತ——ಇಲ್ಲೀಗೇ ಕರ್ಕೊಂಡು ಬೇರೆ ಬರ್ತಾನಂತಲ್ಲೋ—ಶಾಮೀ—ನಮ್ಮ ಮೂತಿ ತಿವಿಯೋದಕ್ಕೆ !

ರಾಯರು :

ಹೌದು ಚಿಕ್ಕತ್ತೇ ಹಾಗೇ ಬರೆದಿದಾನೆ ! ಹೊರಟುಬಿಟ್ಟಿದಾನೆ ಪೂನಾದಿಂದ ರೈಲಿನಲ್ಲಿ ! ಇಲ್ಲದೆ ಇದ್ದರೆ ಬರಕೂಡದು ಅಂತ ಟೆಲಿಗ್ರಾಂ ಬಿಡ್ತಿದ್ದೆ !....ಆದರೆ ಇನ್ನೇನು ಒಂದು ಗಂಟೇ ಒಳಗೆ ಮನೇಗೇ ಬರಬೇಕು ಅವರು ! ರೈಲು ಲೇಟಾಗದೇ ಇದ್ದರೆ !

ಮಾಸ್ತರು :

ಬರಲಿ—ನೋಡೋಣ—ಈಗಲೇ ಯಾಕೆ ಇಲ್ಲದ್ದನ್ನೆಲ್ಲಾ ಯೋಚನೆ ಮಾಡಿಕೊಂಡೂ—

ಚಿಕ್ಕತ್ತೆ :

ಅಯ್ಯೋ—ಹೊಳೇನೇ ನುಂಗಿದೋಳು ಮಳೇಗೆ ಹೆದರು ತಾಳೆಯೇ ಅಂತ—

ಮಾಸ್ತರು :

ಯಾರು—ಯಾರಿಗೆ ಯಾಕೆ ಹೆದರಬೇಕು ಹೇಳಿ—! ಒಬ್ಬರಿಗೊಬ್ಬರು ಹೆದರಿಕೊಂಡೇ ನಡೆಯಬೇಕಾದರೆ—ಅದು ಸಂಸಾರವಾಗೋದಿಲ್ಲ ! ಬರಲಿ ಮೊಮ್ಮೊಗ—ಹೆಂಡ್ತೀನ ಕರ್ಕೊಂಡು ! ಪ್ರೇಮದ ಕಟ್ಟಿನಿಂದ ಕಟ್ಟಿಬಿಡಿ ನಿಮ್ಮ ಹೊಸ ಸೊಸೇನ—ಆಗ ನೋಡಿ ಏನಾಗುತ್ತೇ—ಅಂತ !

ಪಾತಮ್ಮ : ಆ್ಹಂ—! ?

ರಾಯರು :

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಭಟ್ಟರು :

ಶಿವಶಂಕರ !

ಚಿಕ್ಕತ್ತೆ :

ಸರಿ—ಬಿಡಿ ನಿಮ್ಮ ಮಾತಂತೂ ! ಕತ್ತಿ ಹಿರಿದೋನ ಮುಂದೆ ಬುತ್ತಿ ಹಿಡಿದರೂ ಅಂತ ! ಪ್ರೀತಿ ಮಾತು ಎಲ್ಲೀದು ಇಲ್ಲಿ ! ನಮ್ಮ ಜನವೇ ? ನಾವು ಹೇಳಿದ್ದೇ—ನಾವು ಕೇಳಿದ್ದೇ—? ಹೀಗೆ ಮಾಡಿ ಕೊಂಡೋರು ಯಾರೂ ಉಳಿದಿಲ್ಲ ಈ ಪ್ರಪಂಚದಲ್ಲಿ ! ನಾರಾಯಣ ಅಂದೋನೇ ನರಕಕ್ಕೆ ಹೋದ ಮೇಲೇ....

ಮಾಸ್ತರು :

ಹಾಗೆ ಮಾಡಿಕೊಳ್ಳದವರು ತಾನೇ ಯಾರು ಉಳಿದಿದಾರೆ ತಾಯೀ !

ಚಿಕ್ಕತ್ತೆ :

ಆದರೂ ಎಷ್ಟೋ ವಾಸಿ ತಿಳಿದೋರ ಹೆಣ್ಣನ್ನ ಮದುವೆ ಆದರೆ ! ಮೆಚ್ಚೀ ಮೆಚ್ಚೀ ಕರಕೊಂಡು ಬಂದನಲ್ಲಾ ಆ ಕಡೇ ಬೀದೀ ಕಪ್ಪಣ್ಣ—ಬಂಗಾಳೀನೋ—ತಂಗಾಳೀನೋ—ಈಗ ದಿನಾ ದಿನಾ ಕಚ್ಚಾಡ್ತಾರೆ ಹಾಲು ಕುಡಿಸೋಕೆ ಹೋದರೆ ಹೆಡೆ ಎತ್ಕೊಂಡು ಬಂತೂ ಅಂತ ಅಂತಾರಲ್ಲ—ಹಾಗೆ ! ಇವನು ಗಂಡು ರಾಕ್ಷಸ ; ಅವಳು ಹೆಣ್ಣು ಪಿಶಾಚಿ !

ಭಟ್ಟರು :

ಅದೇನು ದೊಡ್ಡ ಮಾತಲ್ಲ ಬಿಡಿ—ಯಾಕೆ ನಮ್ಮ ವಠಾರದಲ್ಲಿ ಇದಾನಲ್ಲ ಸಣ್ಣ ಗರುಡಪ್ಪ—ಅದೇನು ಕಾದಾಡ್ತಾನೇ—ಅವನ ಹೆಂಡತಿ ದೊಡ್ಡ ನಾಗಮ್ಮನ ಜೊತೇ—ಛೆ ಛೆ ! ಹಾಗೆ ನೋಡಿದರೆ ಒಂದೇ ಮನೆತನ ಅವರದ್ದು ! ಮೊದಲಿಂದ ಸಂಬಂಧ ಇಬ್ಬರಿಗೂ ! ಆದರೆ ! ಈಗ—ಓ ಅದೇನು ಕತ್ತಿ ಮಸೀತಾರೇ ಅಂತೀರಿ ! ಅಬ್ಬಬ್ಬಬ್ಬ ! ಒಬ್ಬರನ್ನ ಒಬ್ಬರು ನೋಡೀ ಕಡಿದೂ ಕಡಿದೂ ಹಲ್ಲೆಲ್ಲಾ ಸವೆದು ಈಗ ಇಬ್ಬರಿಗೂ ಬರೀ ವಸಡು ಮಾತ್ರ ಉಳಿದಿದೇ ಅಂತಾರೆ ಜನ ! ನನ್ನ ಹೆಂಡತೀನೋ—ಗರುಡಪ್ಪನೇ ಸರಿ ಅಂತ—ಅವನನ್ನೇ ವಹಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಕುಣೀತಾಳೆ! ಹಾಗೆ ನೋಡಿದರೇೀ—ಆ ನಾಗಮ್ಮನೇ ಪಾಪ—ಸಾಧು ಪ್ರಾಣಿ ಅಂತ—ನಾನು—

ರಾಯರು :

ಸರಿ—ಆ ವಿಷಯದ ಮೇಲೆ—ನಿಮ್ಮ ಮನೇಲಿ—ನಿಮ್ಮಿಬ್ಬರಿಗೂ ಲಠಾಪಠೀೀ (ನಗುತ್ತಾರೆ)

ಚಿಕ್ಕತ್ತೆ :

ಅವನ ಉರೀ ನೋಡೀೀ ಇವನೂ ಬರೇ ಹಾಕಿಕೊಂಡಾ—ಅಂತ

ಮಾಸ್ತರು :

(ನಗುತ್ತಾ) ಸಂಸಾರ ರುಚಿಯಾಗೋಕೆ ಇದೆಲ್ಲ ಇರಬೇಕಾದದ್ದೇ ಅಲ್ವೆ! ಗಂಡ ಹೆಂಡಿರಲ್ಲಿ, ಹುಸಿಮುನಿಸು, ವಾಗ್ವಾದ, ಪುಟ್ಟ ಮನಸ್ತಾಪ, ಮೌನ! ಆ ಮೌನ ಮುರಿದ ಮೇಲೆ, ಕಹಿ ಕಳೆದು, ಉಕ್ಕುವ ಹಾಲು ಜೇನು—ಇವೆಲ್ಲ ಇರಬೇಕಾದದ್ದೇ!! ಕತ್ತಲಿನಿಂದ ತಾನೇ ಬೆಳದಿಂಗಳಿನ ಬೆಲೆ! ಆದರೆ ಸಂಸಾರದ ಗಾಡೀನ ಎಳೆಯುವ ಇಬ್ಬರಲ್ಲಿ ಆಯ ತಪ್ಪಬಾರದು ಆಷ್ಟೆ!

ಚಿಕ್ಕತ್ತೆ :

ಅದೇ ನಾನೂ ಹೇಳೋದು! ಆದರೆ ನಮ್ಮ ಪುಟ್ಟರಾಮೂ ತರಹ ಹೆಸರು, ಕುಲ ಕೇಳದ ಹುಡುಗೀನ ಕಟ್ಟಿಕೊಂಡರೆ ಏನುಗತಿ ಹೇಳಿ—ಸುಟ್ಟರೇ ಹೋಗದ ಸುಳಿ ಮೆಟ್ಟಿದರೆ ಹೋಗುತ್ಯೇ ಅಂತs ನಮ್ಮ ದಿರಲಿ—ಅವನದೇ ಏನುಗತಿ ಮುಂದೇ ಅಂತ! ಅವನ ಮಕ್ಕಳ ಗತೀ—?

ಪಾತಮ್ಮ :

ಅದೇ—ನನ್ನ ಚಿಂತೆ!

ರಾಯರು :

ನೀನು ಸುಮ್ಮನಿರೆ ಸಾಕು! ಹಂ! ಚಿಕ್ಕತ್ತೇ ಮಾತು ನಿಜಾ ಅನ್ನಿ! ನಮ್ಮೂರು ಕನ್ನಡ ಸಂಘದ ಕಾರ್ಯದರ್ಶಿ, ಪ್ರಾರ್ಥನೆ ಹೇಳ್ತಿತ್ತಲ್ಲ ಆ ತಮಿಳು ಹುಡುಗಿ ಅಲಮೇಲೂನ ಮಾಡಿಕೊಂಡನಲ್ಲs—

Sri Vidyabharathi Book Centre, Sringeri

CC-O. In Public Domain. Digitized by eGangotri

ಈಗ ಮಕ್ಕಳನ್ನ ಇಂಗ್ಲೀಷ್ ಸ್ಕೂಲಿಗೆ ಕಳಿಸ್ತಾ ಇದ್ದಾನಂತೆ— ಮೊನ್ನೆ ಹೇಳಿದ....

ಭಟ್ಟರು :

ಹೋ ! ನನ್ಮಗ ವೆಂಕಟಸುಬ್ಬ !! ನಿಜ—ನಿಜ ಅವನ ಮನೆ ಹ್ಯಾಗಿದೇ ಅಂತೀರಿ ! ನನ್ನ ಮಗನ ಮನೇ ಅಂತ ವೆಂಕಟಸುಬ್ಬನಿನ ತಂದೆ ತಾಯಿ ಅಲ್ಲೇ ಟೆಕಾಣಿ ಹಾಕಿದಾರೆ ! ನನ್ನ ಮಗಳ ಮನೆ ಅಂತ, ಅಲಮೇಲೂ ತಾಯೀ ತಂದೇನೂ ಅಲ್ಲೇ ಬೇರು ಬಿಟ್ಟಿದಾರೆ—

ರಾಯರು :

ಸರಿ—ಯಥಾಪ್ರಕಾರ—ಬೆಳಗಾಗಿ ಎದ್ದರೆ ಹಣಾ ಹಣಿ, ಮಾರಾ ಮಾರಿ, ಕೇಶಾ ಕೇಶಿ—ತಾನೇ !

ಭಟ್ಟರು :

ಛೆ ಛೆ ಛೆ ಛೆ ! ಇಲ್ಲ !!!

ರಾಯರು : ಆ್ಞಂ ? !!

ಮಾಸ್ತರು :

ಭಟ್ಟರು :

ಇಲ್ಲಾ ಅಂದೆ ! ಅದೇ ಆಶ್ಚರ್ಯ ! ಅವರ ಮನೇಲಿ ನೋಡಿ, ಅದೇನು ಹೊಂದಿಕೊಂಡಿದಾರೇ ಅಂತೀರಿ–! ಒಬ್ಬರನ್ನ ಬಿಟ್ಟು ಒಬ್ಬರು ಇರೋಣಾ ಅಂದ್ರೇನು ! ಇವರ ಕನ್ನಡ ಅವರು ಹಾಸ್ಯಮಾಡ್ತಾರೆ ; ಅವರ ತಮಿಳನ್ನ ಇವರು ಹಾಸ್ಯಮಾಡ್ತಾರೆ—ಇಬ್ಬರೂ ಕೂಡಿ ಮೊಮ್ಮಕ್ಕಳ ಇಂಗ್ಲೀಷನ್ನ ಹಾಸ್ಯಮಾಡ್ತಾರೆ—!? ಅದೇನು ನಗೆ—ಅದೇನು ಸಂತೋಷ ಆ ಮನೇಲಿ !

ಮಾಸ್ತರು :

ಓ—ಅಂದರೀ, ಅಂಥಾದ್ದೂ ಒಂದು ಸಂಸಾರ ನೋಡಿದ್ದೀರಿ ಅಂತ ಆಯಿತಲ್ಲ—!

Sri Vidyabharathi Book Centre, Sringeri

CC-O. In Public Domain. Digitized by eGangotri

ಜಿಕ್ಕತ್ತೆ :

ಹಯ್ಯೋ.... ರಾಗೀ ರಾಶೀ ಒಳಗಿನ ಸಾಸಿವೆ ಕಾಳು ! ಹಳ್ಳಿಯೆಲ್ಲ ಅಂಗಾರಾ ಗೌಡನ ಮನೆ ಸಿಂಗಾರ ಅಂದ ಹಾಗೆ.

ಮಾಸ್ತರು :

ಇರಲೀ—ಅಂಥಾದ್ದೂ ಒಂದಾದರೂ ಇರೋದಕ್ಕೆ ಸಾಧ್ಯ ಅಂತ ಆದ ಮೇಲೆ ಹಾಗೇ ಇನ್ನೂ ಹತ್ತು ಸಂಸಾರ ಆಗೋಹಾಗೆ ಯಾಕೆ ಮಾಡ ಬಾರದು ಅಂತ—

ಜಿಕ್ಕತ್ತೆ :

ನನಗಂತೂ ಹಾಗೆ ಹೊಂದ್ಕೊಂಡ್ಹೋಗ್ತಾರೇ ಹೀಗೆ ಮದುವೆ ಯಾದರೇ—ಅಂತ ನಂಬಿಕೆ ಇಲ್ಲ....ಹಕ್ಕಿಮರಿ ಸೋಡ್ಕೊಳ್ಳೊಕೆ ಬೆಕ್ಕಿನ ಮರಿ ತಂದಹಾಗೇ.

ಮಾಸ್ತರು :

ಛೆ ಛೆ ! ಪರಸ್ಪರವಾಗಿ ಅರಿತುಕೊಳ್ಳೋವರೆಗೆ, ಒಬ್ಬರಲ್ಲಿ ಇನ್ನೊಬ್ಬರು ಸಣ್ಣಪುಟ್ಟ ಅಂಕುಡೊಂಕುಗಳನ್ನ ಕಾಣಬಹುದು. ಅದನ್ನ ತಿದ್ದಬೇಕೇ ವಿನಃ ಮುದ್ದೆ ಮಾಡಿಟ್ಟುಕೊಂಡರೆ ಹೇಗೆ! ಅರ್ಥ ಮಾಡಿ ಕೊಳ್ಳೋವರೆಗೆ ಅನರ್ಥವೇ ವಿನಃ, ಅನರ್ಥವೇ ಒಂದು ಸಂಸಾರದ ಅರ್ಥವಾಗೋ ಹಾಗೆ ಮಾಡಬಾರದು. ಬಂದವಳು—ಈ ಮನೆ ನನ್ನದು, ಈ ಜನ ನನ್ನವರು ಅನ್ನೋ ಹಾಗೆ ನಡೆದುಕೊಳ್ಳಬೇಕು ; ಬಂದವಳನ್ನ ಮನೆಯವರು, ಈ ಹುಡುಗಿ ನಮ್ಮ ಮನೆಯ ವಸ್ತು ಅಂತ ಗುರುತಿಸಿ ನಡೆದುಕೊಳ್ಳಬೇಕು–ಆಗ ತಾನೇ ಆ ಮನೆ ಬಂಗಾರವಾಗಿ ಹೋಗುತ್ತೆ.

ಭಟ್ಟರು :

ಅದು ಹ್ಯಾಗೆ ಸಾಧ್ಯ ಮಾಸ್ತರೆ ? ಒಬ್ಬೊಬ್ಬರೂ ತಾವೇ ಹುಟ್ಟಿಸಿದ ತಪ್ಪನ್ನ ಇನ್ನೊಬ್ಬರ ಮೇಲೆ ಹೊತ್ತಾಕೋಕೆ ಕಾದು ನಿಂತಿರೋ ವಾಗ—!

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಹಾಂ ! ಅದೇ ಮುಖ್ಯವಾದ ಮಾತು ! ತಪ್ಪುಮಾಡೋದು ತಪ್ಪಲ್ಲ, ತಪ್ಪು ಅಂತ ತಿಳಿದ ಮೇಲೂ ತಿದ್ದಿಕೊಳ್ಳದೇ ಇದ್ದರೆ, ಅದು ನಿಜವಾದ ತಪ್ಪು. ಅಲ್ಲಽ, ಒಂದು ಮನೆಯ ಸಣ್ಣದೊಂದು ವಿಷಯವೇ ಇಷ್ಟು ತೊಂದರೆ ಕೊಡುತ್ತಲ್ಲಽ, ಇನ್ನು ರಾಷ್ಟ್ರದ ಮಾತು ಹೇಗಿರಬೇಕು ಹೇಳಿ—! ಆದರೆ ತಪ್ಪನ್ನ ತಿದ್ದಿಕೊಂಡ ಧೀರರಿದ್ದರು ನಮ್ಮ ದೇಶದಲ್ಲಿ ! ಎಲ್ಲ ಅನರ್ಥಗಳಿಗೂ ಕಾರಣವಾದ ಅಹಂಕಾರವನ್ನೂ ಮುರಿದು ಮೇಲೇರಿದ ಧೀರರು ! ಬೇರೆಯದು ಅನ್ನೋದನ್ನ ಬಲವಿನ ಬಲೆ ಹಾಕಿ, ತನ್ಮೈಡೆಗೇ ಸೆಳೆದುಕೊಂಡವರಿದ್ದರು. ಅಂತಹವರೇ ನಮ್ಮ ಸಂಸ್ಕೃತಿಯನ್ನು ಜಗತ್ತಿನಲ್ಲಿ ಬೆಳಗಿದವರು. ಅವರು ಕೊಟ್ಟ ಬಲದಿಂದಲೇ, ನಮ್ಮ ದೇಶ ಇನ್ನೂ ' ಜಗತ್ತಿನ ಗುರು ' ಅನ್ನಿಸಿಕೊಂಡಿರೋದು. ಎರಡು ಸಾವಿರ ವರ್ಷಗಳ ಹಿಂದೆ, ನಮ್ಮ ದೇಶದಲ್ಲಿ ಅಶೋಕ ಅಂತ—

(ಆಷ್ಟರಲ್ಲಿ ಒಳಗಿನ ಧ್ವನಿವರ್ಧಕದಿಂದ " ಹೂಂ...ಸರಿಯಾಗಿ ಹೇಳಬೇಕು ಈಗ " ' ತಪ್ಪಬೇಡಿ '...' ಶಕುಂತಲಾ, ತಲೆಯನ್ನ ಇನ್ನೂ ಸ್ವಲ್ಪ ತಗ್ಗಿಸಬೇಕು ನೀನು, ಹಾಗೇ '...ಎಂಬ ಮಾತುಗಳು ಕೇಳಿಬರುತ್ತವೆ.)

ಮಾಸ್ತರು :

ಓ—ಇದೇನು ಮಾಡ್ತಿದಾರೆ ಇನ್ನೂ—?

ಪಾತಮ್ಮ :

ಅವರ ಪ್ರಾಕ್ಟೀಸು ಇನ್ನೂ ಮುಗೀಲಿಲ್ಲ !

ಭಟ್ಟರು :

ನೋಡೋಣ ತಾಳಿ—ಏನ್ಮಾಡ್ತಿದಾರೆ ಈ ಹುಡುಗರೂ—ಅಂತ ?

ಎಂದು ನಡೆದು ಪರದೆಯನ್ನು ಮಷ್ಟೆ ಮುಟ್ಟುವಷ್ಟರಲ್ಲಿ ಆದು ಸೀಳಿ ಸರಿದು ಹೋಗುತ್ತದೆ. ಮುನ್ನೆಲೆಯು ದೀಪ ಆರಿ ಹಿನ್ನೆಲೆಯ ಪಾತ್ರಗಳ ಮೇಲೆ ಬೆಳಕು ಬೀಳುತ್ತದೆ. ಮುನ್ನೆಲೆಯ ಪಾತ್ರಗಳು ಓರೆಗಾಗಿ ರಂಗಭೂಮಿಯ ಎರಡು ಪಕ್ಕಗಳಲ್ಲಿ ನಿಂತು ಒಳರಂಗವನ್ನು ವೀಕ್ಷಿಸುತ್ತವೆ. ಹಿನ್ನೆಲೆಯ ರಂಗದಲ್ಲಿ ಬಿಳಿ ಸೀರೆಯನ್ನುಟ್ಟು ತಲೆಗೂದಲನ್ನು ಬಿಚ್ಚಿ ಹರಹಿಕೊಂಡ

Sri Vidyabharathi Book Centre, Sringeri

CC-O. In Public Domain. Digitized by eGangotri

'ಮ್ಲಾನಮುಖಿ' (ಅಳುತ್ತ ನಿಂತ ಮೂವತ್ತು ವಯಸ್ಸಿನಾಕೆ) ಗೆ ಎದುರಾಗಿ ಸಾಮ್ರಾಟ ಅಶೋಕ, ಧೀರನಾಗಿ ನಿಂತಿದಾನೆ)

ಅಶೋಕ :

ಏನು ಬೇಕಮ್ಮ ನಿನಗೆ—? ಬೇಡಬಹುದು.

ಆಕೆ :

ಬೇಡಲು ಬರಲಿಲ್ಲ ದೊರೆ, ನೀಡಲು ಬಂದಿದ್ದೇನೆ.

ಅಶೋಕ :

ಏನೆಂದೆ | ಬೇಡಲು ಬರಲಿಲ್ಲವೆ !

ಆಕೆ :

ಯುದ್ಧದಲ್ಲಿ ಗೆದ್ದು ವಿಜಯೋನ್ಮತ್ತನಾದ ಅಶೋಕನಿಗೆ ನನ್ನ ಶೋಕವನ್ನು ಧಾರೆ ಎರೆದುಕೊಡಲು ಬಂದಿದ್ದೇನೆ ಸಾಮ್ರಾಟ್.

ಅಶೋಕ :

ಶೋಕ !!

ಆಕೆ :

ಹೌದು ಆದರೆ ನಿನ್ನನ್ನು ಶಪಿಸುವುದಿಲ್ಲ ದೊರೆ, ಶಪಿಸಿದರೆ ನನ್ನೆದೆಯ ಬೆಂಕಿ ನಿನ್ನನ್ನು ಉರಿಸಿ ಬೂದಿ ಮಾಡೀತು !

ಅಶೋಕ :

ಆ್ಹಂ....?

ಆಕೆ :

ಹೌದು ಅಂತಹ ನಂಬಿಕೆ ನನಗಿದೆ. ಆದರೆ ಸತ್ತವರ ಸಂಖ್ಯೆಗೆ ಮತ್ತೊಂದನ್ನು ಏರಸಲಾರೆ ನಾನು ! ಅಶೋಕನಾದ ನೀನು ಬದುಕಿ ನನ್ನ ಶೋಕವನ್ನು ಅಳೆದುನೋಡಬೇಕಾಗಿದೆ. ಸಾವನ್ನು ಮೆಟ್ಟಿ ಇನ್ನು, ನಾವು ಬದುಕುವ ಹಾದಿಯನ್ನು ಭಾವಿಸಬೇಕಾಗಿದೆ.

ಅಶೋಕ :

ಆ್ಹಂ !—ಅಶೋಕನಲ್ಲ—ನಿನ್ನ—ಶೋಕ !

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಅಕೆ :

ಅದೆಷ್ಟೋ ಜನ ಅನುಭವಿಸಿದ ನೋವಿನಲ್ಲಿ ನೂರರ ಒಂದು ಪಾಲು ನನ್ನದು. ಆದರೂ ನನ್ನ ನೋವು ನನಗೆ ನೊಡ್ಡದು.

ಅಶೋಕ :

ಹೇಳು ತಾಯೀ—

ಅಕೆ :

" ತಾಯೀ " !!! ತಾಯೀ ಎಂದೆಯಾ ದೊರೆ? ಹಾಗೆ ನುಡಿದು ನನ್ನನ್ನು ಸೋಲಿಸುತ್ತಿದೀಯೆ. ಪರಸ್ತ್ರೀಯನ್ನು ' ತಾಯೀ ' ಎಂದು ಕರೆಯುವಂತಹ ಭಾರತೀಯ ಸುಸಂಸ್ಕೃತ ಹೃದಯನ್ನಿಟ್ಟುಕೊಂಡೂ, ನನ್ನಂತಹ ಸಾವಿರಾರು ' ತಾಯಿ 'ಯರ ಮಂಗಳ ಸೌಭಾಗ್ಯವನ್ನೇಕೆ ಮಣ್ಣುಗೂಡಿಸಿದೆ ದೊರೆ!? ಘೋರವಾದ ಅಂತಹ ಮಾನವ ಮಾರಣ ವನ್ನೇಕೆ ಮಾಡಿದೆ ?

ಅಶೋಕ :

(ಭ್ರಾಂತನಾಗಿ) ಆ್ಞಂ ? !

ಅಕೆ :

ಹೌದು! ಪ್ರೀತಿಯ ಮಗಳಾಗಿ, ಒಲವಿನ ಹೆಂಡತಿಯಾಗಿ, ವಾತ್ಸಲ್ಯದ ತಾಯಿಯಾಗಿ ಎಂತಹ ಸುಖದಿಂದ ಬಾಳುತ್ತಿದ್ದೆ ನಾನು ! ಅದರೆ— (ಬಿಕ್ಕುತ್ತಾ) ನನ್ನ ಒಬ್ಬನೇ ಮಗ ಇಪ್ಪತ್ತರ ಹರಯದ ಆ ಬಂಟ ಯುದ್ಧದಲ್ಲಿ ಮಡಿದುಹೋದ....ನನ್ನ ಪತಿ, ಗುಂಡಿಗೆದಾರರ ಗಂಡು ಅವನು ! ಅವನನ್ನು ನಿನ್ನವರು ಮೋಸದಿಂದ ಹಿಡಿದು ಶೂಲಕ್ಕೇರಿಸಿ ದರು. ವೃದ್ಧನುದ ನನ್ನ ಕುರುಡು ತಂದೆ ಸುದ್ದಿ ಕೇಳಿಯೇ ಸತ್ತು ಹೋದ. ಹೊಟ್ಟೆಯಲ್ಲಿ ಪುಟ್ಟ ಜೀವವಿಟ್ಟುಕೊಂಡಿರುವ ಸೊಸೆ ಹುಚ್ಚಿ ಯಾಗಿ ಅಲೆಯುತ್ತಿದಾಳೆ.

ಅಶೋಕ :

(ಭಾವದುಂಬಿ) ಓ ಹ್ :

Sri Vidyabharathi Book Centre, Sringeri

CC-O. In Public Domain. Digitized by eGangotri

ಅಕೆ :

ಜೀವನದ ಹೊಂಗನಸೆಲ್ಲ ಹುಡಿಯಿಟ್ಟುಹೋಯಿತು.....ಕಾಣದವರ ಮೇಲೇಕೆ ಇಂತಹ ಕಡುಸೇಡು ದೊರೆ ?

ಅಶೋಕ :

(ಏನು ಹೇಳಲೂ ತೋರದೆ) ಏನು—ಏನು ಹೇಳಲಿ ತಾಯೀ–ಕಳಿಂಗ ಸಮರದಲ್ಲಿ—ನನ್ನವರೂ ನಿನ್ನಂತೆಯೇ....ಬವಣೆಗೊಂಡಿದ್ದಾರೆ, ಇದು—ಇದು, ಈ ಸಮರ....ಇದು ರಾಜ ಧರ್ಮ ತಾಯೀ !

ಅಕೆ :

ರಾಜ ಧರ್ಮ ! ತಪ್ಪು ಭಾವನೆ ದೊರೆ—ತಪ್ಪುತಿಳಿದಿದ್ದೀಯೆ ! ಜನತೆಯನ್ನು ಮಕ್ಕಳಂತೆ ಅಕ್ಕರೆಯಿಂದ ನಡೆಸಿಕೊಳ್ಳುವುದು ರಾಜ ಧರ್ಮ ; ವೈಯಕ್ತಿಕವಾದ ಹಟದ ಸಲುವಾಗಿ ಅವರನ್ನು ಯುದ್ಧದ ಬೇಗೆಗೆ ನೂಕುವುದಲ್ಲ. ಶತ್ರುವನ್ನೂ ಶಾಂತಿಮಂತ್ರದಿಂದ ಪರಿವರ್ತಿಸಿ ಅವನೆದೆಯನ್ನು ಆಳುವುದು ರಾಜಧರ್ಮ ; ಒಬ್ಬನ ಒಂದು ದಿನದ ಹಿಂಗ್ಗಿಗಾಗಿ ಇನ್ನೊಂದು ರಾಜ್ಯವನ್ನೇ ಸುಟ್ಟು ಬೂದಿಮಾಡುವುದಲ್ಲ !! ಇಂದಿನವರೂ ಮುಂದಿನವರೂ ಹೌದು—ಹೌದೆನ್ನುವಂತೆ ಧರ್ಮಧೂತನಾಗಿ ಆಳುವುದು ರಾಜಧರ್ಮ ; ಇಂದಿನವರು ಶಪಿಸಿ ಮುಂದಿನವರು ಹೀಗೆಳೆಯುವಂತೆ ಪಿಶಾಚ ನರ್ತನ ಮಾಡುವುದಲ್ಲ !

ಅಶೋಕ :

(ಭಾವಿಸುತ್ತ) ಓ.....ತಾಯೀ, ನಿಲ್ಲಿಸು! ಒಳಗಣ್ಣು ತೆರೆಯುತ್ತಿದೆ. ಎದೆಯಲ್ಲಿ, ಎದೆಯಲ್ಲಿ—ಬೇಗೆ ಏಳುತ್ತಿದೆ.

ಅಕೆ :

ನಿನ್ನ...ಮಗ—

ಅಶೋಕ :

ಧರ್ಮ–ವಿ–ವರ್ಧನ—

ಅಕೆ :

ರಣರಂಗದಲ್ಲಿ ತುಂಡರಿದು ಈಡಾಡಿ ಬಿದ್ದಿರುವ ಹೆರಯದವರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ ವಿವರ್ಧನನ ರೂಪ ಕಾಣುವುದಲ್ಲವೇ ದೊರೆ? ಒಳಗಣ್ಣು ತೆರೆದುನೋಡು....ನಿನ್ನ ಧರ್ಮವಿವರ್ಧನನೇ ಆಸುವಳಿದು ಬಿದ್ದಿದ್ದಾನೆ.

ಅಶೋಕ :

ಓಹ್ !

ಆಕೆ :

ನೋಡು ದೊರೆ—ನಿನ್ನೆದುರಿಗೇ ನಿನ್ನ ಪತ್ನಿಯರು ರಕ್ತಸಿಕ್ತ ಮಂಗಳ ಸೂತ್ರಗಳನ್ನು ಹಿಡಿದು ಅಗ್ನಿಜ್ವಾಲೆಯೊಳಕ್ಕೆ ಹಾರಿ ಕೊಳ್ಳುತ್ತಿದಾರೆ !

ಅಶೋಕ :

(ಭ್ರಾಂತನಾಗಿ ನಿಟ್ಟಿಸುತ್ತ) ಓ !!

ಆಕೆ :

ವೃದ್ಧರಾದ ನಿನ್ನ ತಂದೆ ತಾಯಿಯರು, ನಿನ್ನ ಶವದ ಬಳಿಯೇ ನೇಣು ಹಾಕಿಕೊಂಡು ಹೆಣವಾಗಿ ತೂಗಾಡುತ್ತಿದಾರೆ. ನೋಡು !

ಅಶೋಕ :

ಹ.... ಯ್ಯೋ !

ಆಕೆ :

ಕ್ಷಣದ ಕನಸಿನಲ್ಲಿಯೇ ನಿನಗೆ ಇಂತಹ ಎದೆಗುದಿಯೇ ದೊರೆ? ನೀನು ಭಾವಿಸಿದುದನ್ನು ನಾನು ಅನುಭವಿಸುತ್ತಿದೇನೆ. ನಿನ್ನ ಹಟ ಕ್ಕಾಗಿ ನಾನು ಬೇಯುತ್ತಿದೇನೆ. ನಿನ್ನ ತಪ್ಪಿಗಾಗಿ, ವಿಧಿ, ನನಗೆ ನರಕಯಾತನೆ ವಿಧಿಸಿದೆ.

ಅಶೋಕ :

ತಾಯೀ!!

ಆಕೆ :

ನಾನು—ನನ್ನದು ಎಂಬ ಅಹಂಭಾವದಿಂದ ಸೀಮೆಯನ್ನೇ ಮೆಟ್ಟಿ ಬೆಂಕಿ ಇಟ್ಟುದರಿಂದ, ನಿನ್ನನ್ನು ಬಿಟ್ಟು ಉಳಿದೆಲ್ಲರ ಮಾರಣವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗಿದೆ. ಒಬ್ಬನೇ—ನೀನೊಬ್ಬನೇ ನಿಂತಿದ್ದೀಯೆ! ಬದುಕು ದೊರೆ—ಚೆನ್ನಾಗಿ ಬದುಕು. (ಮೆಲ್ಲನೆ ಅವನಿಂದ ತಿರುಗುತ್ತಾ)..... ನಾನಿನ್ನು ಬರುತ್ತೇನೆ ದೊರೆ, ನನ್ನ ಕೆಲಸವಾಯಿತು!

ಅಶೋಕ :

(ತಟಕ್ಕನೆ ಧಾವಿಸಿ, ಆಕೆಯನ್ನು ಬಳಸಿ ನಿಂದು) ಓ....ತಾಯೀ—ನಿಲ್ಲು ನಿಲ್ಲು ತಾಯೀ. ನನ್ನನ್ನು ಈ ಕೂಪದಲ್ಲಿ ತಳ್ಳಿ ಹೊರಟು ಹೋಗ ಬೇಡ—ನನ್ನೆದೆಗೆ ಶಾಂತಿಯನ್ನು ತಂದುಕೊಡು ತಾಯೀ—ಹೋಗಬೇಡ—

ಆಕೆ :

ಶಾಂತಿ—!! ಶಾಂತಿ ಮುಂತ್ರ ನನ್ನಲಿಲ್ಲ ದೊರೆ. ಇದ್ದರೆ ಅದು ನನ್ನಲ್ಲಿಯೇ ಸುಪ್ತವಾಗಿರಬೇಕು.

ಉಪಗುಪ್ತ :

(ಆಗಮಿಸುತ್ತ) ಅಶೋಕ—

ಅಶೋಕ :

ಓ—ಗುರುವೇ—

ಉಪಗುಪ್ತ :

(ನಿಧಾನವಾಗಿ) ಅರ್ಥವಾಯಿ—ತೆ?

ಅಶೋಕ :

ನನ್ನ ಒಳಗಣ್ಣನ್ನು ತೆರೆಯಿಸಿದ ಈ ತಾಯಿಯನ್ನು ಹೇಗೆ ನಂಬಿಸಲಿ ಗುರುವೇ—? ಆಕೆಯ ಕ್ರೋಧವನ್ನು, ದುಃಖವನ್ನು ಹೇಗೆ ಶಮನ ಮಾಡಲಿ—?

ಉಪಗುಪ್ತ :

'ಇಂದು ಹೆಜ್ಜೆ ತಪ್ಪಿತು—ಮುಂದಿನ ನಡೆ ಧರ್ಮದ ದಾರಿಯಲ್ಲಿರು ವಂತೆ ಎಚ್ಚರ ವಹಿಸುತ್ತೇನೆ' ಎಂದು ಆಕೆಗೆ ನುಡಿ–ಕೊಡು ಅಶೋಕ

ಅಶೋಕ :

ಭಗವನ್!

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಗುಪ್ತ :

ನಾನು ಅನುಭವಿಸಿದವನಲ್ಲ ದೊರೆ—ಅದರಿಂದ, ಹೇಳಲು ಅರ್ಹತೆ ಪಡೆದಿಲ್ಲ. ನರನರದಲ್ಲಿ ನರಕಯಾತನೆ ಅನುಭವಿಸಿ ಅರ್ಹತೆ ಪಡೆದ ಈ ತಾಯಿ ನಿನಗೆಲ್ಲ ಹೇಳಿದ್ದಾಳೆ—

ಆಕೆ :

(ಭಾವಿಸಿ. ರೋದಿಸುತ್ತ ಉಪಗುಪ್ತನ ಪಾದದ ಬಳಿ ಕುಸಿದು) ಸಿಡಿದು ಹೋಗುತ್ತಿದೇನೆ—ಭಗವನ್—ಶಾಂತಿ ನೀಡಿ

ಉಪಗುಪ್ತ :

ರೋದಿಸು ತಾಯೀ—ಕಟ್ಟಿಕೊಂಡ ಶೋಕ ಕಡಿದು ಹರಿಯಲಿ, ಈಗ ನೋಡು—ಅಶೋಕನನ್ನು ನೋಡು ತಾಯೀ—ನೊಂದಾಗ ಜೀವಿಗಳೆ ಒಂದಾಗುತ್ತಾರೆ—ನೋಯದಿರುವಾಗಲೂ ಒಂದಾಗಿ ಬೆಸೆದು ಬಾಳಿದ ಜನತೆ ಎಂದೆಂದೂ ತನ್ನ ಹಿರಿಮೆಯನ್ನು ಸಾರುತ್ತದೆ.

ಅಶೋಕ :

ಭಗವನ್ !!

ಉಪಗುಪ್ತ :

ಎಂದೇ ಬುದ್ಧಭಗವಾನರು ಭಾವಿಸಿದರು—ಒಂದು ಸಣ್ಣ ಮೋಹ, ತನ್ನ ಹೊಟ್ಟೆಯಲ್ಲಿ ತನಗಿಂತ ದೊಡ್ಡದಾದ ಮೋಹವನ್ನು ಬಚ್ಚಿಟ್ಟು ಕೊಂಡಿರುತ್ತದೆ. ಮೋಹ ಎದೆಯನ್ನು ಆವರಿಸಿದಾಗ, ಆಶೆ ಮೊಳೆಯುತ್ತದೆ. ಆಶೆಯಿಂದಾಗಿ ಕ್ರೌರ್ಯ, ಕ್ರೌರ್ಯದಿಂದಾಗಿ ಹಾನಿ ಸಂಭವಿಸುತ್ತದೆ. ಆ ಹಾನಿಯನ್ನು ತುಂಬಿಕೊಳ್ಳುವ ಮೋಹ ಮತ್ತೆ ಎದೆಯನ್ನು ವ್ಯಾಪಿಸುತ್ತದೆ. ವಿಷಚಕ್ರ ಇದು !

ಅಶೋಕ :

ತಿಳಿಯುತ್ತಿದೇನೆ ಭಗವನ್.

ಉಪಗುಪ್ತ :

ಮನಸ್ಸನ್ನು ಶಾಂತಿ ಆವರಿಸಬೇಕಾದರೆ, ಒಳಗಿನ ಹುಳುಕನ್ನು ಎಂದರೆ

CC-O. Vidyabharathi Book Centre, Sringeri

CC-O. In Public Domain. Digitized by eGangotri

ಮೋಹವನ್ನು ತೊಡೆದುಹಾಕಬೇಕು—ಆಲ್ಲಿಗೆ ಒಂದು ಮೆಟ್ಟಿಲನ್ನು ಏರಿದಂತೆ—ತಾಯೀ

ಆಕೆ :

(ನಿಧಾನವಾಗಿ) ಅರ್ಥವಾಗುತ್ತಿದೆ ಭಗವನ್.

ಉಪಗುಪ್ತ :

ಎಲ್ಲದರ ಬಗೆಗೆ ಹೃದಯವನ್ನು ಕರುಣೆಯಿಂದ ತುಂಬಿಕೊಳ್ಳಬೇಕು—ಪರರ ದುಃಖವನ್ನು ಪರಿಹರಿಸಲೇಬೇಕೆಂಬ ಪರಮ ಕರುಣೆ. ಅಂತಹ ಕರುಣೆ. ಮಾನವನನ್ನು ಉನ್ನತಿಯ ಎರಡನೆಯ ಮೆಟ್ಟಿಲಿಗೆ ಹತ್ತಿಸುತ್ತದೆ.

ಅಶೋಕ :

(ತಲೆತಗ್ಗಿಸಿ) ಭಗವನ್

ಉಪಗುಪ್ತ :

"ನಾನು ನನ್ನನ್ನು ನಡೆಸಿಕೊಳ್ಳುವಂತೆಯೇ ಉಳಿದೆಲ್ಲರನ್ನೂ ನಡೆಸಿಕೊಳ್ಳುತ್ತೇನೆ" ಎನ್ನುವ ಪ್ರಜ್ಞೆ, ಕರುಣೆಗೆ ಸಾರ್ಥಕತೆಯನ್ನು ತಂದುಕೊಡುತ್ತದೆ ದೊರೆ. ಮಾನವ, ಪ್ರಾಣಿ, ಪಕ್ಷಿ, ಕ್ರಿಮಿ ಕೀಟಾದಿಗಳನ್ನೂ ಈ ಸಮ್ಯಕ್ ಪ್ರಜ್ಞೆಯಿಂದ ನಡೆಸಿಕೊಳ್ಳುವಾತನ ಹೃದಯ, ಶಾಂತಿದೇವಿಯ ದಿವ್ಯ ಪೀಠವಾಗುತ್ತದೆ. ಅಂತಹ ಅದೃಷ್ಟವಂತ, ಮೈತ್ರಿ—ಕ್ಷಾಂತಿಯನ್ನುಳಿದು ಜೀವಿಸಲಾರ. ದೇಹ ದಿಂದಿದ್ದಾಗ, ಆತ ಧರ್ಮ ಚಕ್ರದಲ್ಲಿ ದಿವ್ಯಶಾಂತಿಯಿಂದ ಬಾಳಿ, ದೇಹ ವಿಟ್ಟಾಗ ಮುಕ್ತಿಯನ್ನು ಮುಟ್ಟುತ್ತಾನೆ.

ಅಶೋಕ :

ನನ್ನ ಮನಸ್ಸಿನ ಶಾಂತಿಗಾಗಿ, ತಮ್ಮ ನಿರೀಕ್ಷೆಗೆ ಅರ್ಹನಾಗಿ, ಬುದ್ಧ ದೇವನ ಕರುಣೆಯ ಮಗುವಾಗಿ ಬಾಳುವಂತೆ ಅನುಗ್ರಹಿಸಬೇಕು—ಭಗವನ್....ಈ ತಾಯಿಗೆ ಮಾತುಕೊಡುವ ಅರ್ಹತೆ ನನಗೆ ಬರಲಿ.... ತಾಯೀ—

Sri Vidyabharathi Book Centre, Sringeri

CC-O. In Public Domain. Digitized by eGangotri

ಆಕೆ :

ನನ್ನ ಮನಸ್ಸನ್ನು ಮುಸುಕಿದ್ದ ಮಾಯೆಯು ಮುರಿಯುತ್ತಿದೆ ಅಣ್ಣ. ನಿನ್ನ ನುಡಿ, ನಿನ್ನ ನಡೆ, ಮುಂದಿನವರಿಗೆಲ್ಲ ಮಾರ್ಗದರ್ಶನ ಮಾಡಿಸುವಂತೆ, ನನಗೆ ಒದಗಿದಂತಹ ದೀನತೆ ಮುಂದೆ ಯಾರಿಗೂ ಬಂದೊದಗದಂತೆ ಆಗಲು ತಕ್ಕುದಾದ ಮಾತುಕೊಡು ತಂದೆ—

ಅಶೋಕ

(ಭಾವಿಸುತ್ತಾ, ಸಾವಕಾಶವಾಗಿ ಏರುತ್ತಿರುವ ಕಂಠದಿಂದ ಘೋಷಿಸುತ್ತಾನೆ. ಆತನ ಧ್ವನಿಯೇರಿದಂತೆ, ಒಳರಂಗವೆಲ್ಲ ಸಾವಕಾಶವಾಗಿ ಬೆಳಗುತ್ತದೆ)

ದಿಗ್ವಿಜಯದ ಭೇರಿ ನಿನದ— ನಿಲ್ಲಲಿ.
ಧರ್ಮ ವಿಜಯದ ಮಂಗಳವಾದ್ಯ ಇನ್ನು ಮೊಳಗಲಿ—
ಕಲಿಂಗವನ್ನು ಜಯಿಸಿದ್ದಕ್ಕಾಗಿ ದೇವಾನಾಂಪ್ರಿಯನು ಅನುಶೋಚಿಸುತ್ತಾನೆ.
ಚಕ್ರಾಧಿಪತ್ಯದಲ್ಲೆಲ್ಲಾ ಧರ್ಮಾನುಶಾಸನವಾಗಲಿ
ಅದಕ್ಕಾಗಿ ಧರ್ಮ ಮಹಾಮಾತ್ರರು ನಿರಂತರವಾಗಿ ಶ್ರಮಿಸಲಿ.
ಸರ್ವಮತದವರೂ ಸರ್ವತ್ರ ವಾಸಮಾಡಲಿ.
ಪರಮತಕ್ಕೆ ನಿತ್ಯಗೌರವವಿರಲಿ—ಅದೇ ನನ್ನ ಮತದ ಶ್ರೇಯಸ್ಸಾಗಲಿ. ಎಲ್ಲೆಲ್ಲಿಯೂ ಧರ್ಮ ಮಂಗಲವಾಗಲಿ.
ವೈರದಿಂದ ವೈರ—ಎಂದಿಗೂ ಶಾಂತವಾಗದು.
ದಿಗ್ವಿಜಯದಿಂದ ಬಿದ್ದವನಿಗೂ—ಗೆದ್ದವನಿಗೂ ಕೇಡಾಗುತ್ತದೆ.

ಅದರಿಂದ ನನ್ನ ಪುತ್ರರೂ ಪೌತ್ರರೂ ದಿಗ್ವಿಜಯವನ್ನು ಬಯಸದಿರಲಿ. ಧರ್ಮವಿಜಯವೇ ನಿಜವಾದ ನಿತ್ಯವಿಜಯವೆಂದು ಅವರು ತಿಳಿಯಲಿ.

(ಕಣ್ಣುಂಬಿ) ತಂಗೀ–ನಿನಗಿಂದು ಮಾತುಕೊಡುತ್ತಿದೇನೆ. ನಾನು ನನ್ನನ್ನು ನಡೆಯಿಸಿಕೊಳ್ಳುವಂತೆಯೇ ನಾಡಿನವರನ್ನೆಲ್ಲ ನಡೆಸಿಕೊಳ್ಳುತ್ತೇನೆ. ಈ ನನ್ನ ಮಾತು ಶತ ಶತ ಸಂವತ್ಸರಗಳ ಕಾಲ ನಿಲ್ಲುವಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ, ಶಾಸನ ಮಾಡುತ್ತೇನೆ....ನಾವೆಲ್ಲರು ಒಂದು, ನಾವೆಲ್ಲರು ಒಂದೆ ತಾಯ ಮಕ್ಕಳು—ನಾವೆಲ್ಲರು ಅಣ್ಣತಮ್ಮಂದಿರು; ಅಕ್ಕತಂಗಿಯರು. ಈ ಐಕ್ಯಮಂತ್ರದ ಬಲದಿಂದ ನಿತ್ಯ ಶಾಂತಿಯನ್ನು ಸಾಧಿಸುತ್ತೇನೆ. (ಉಪಗುಪ್ತನ ಅಡಿಗೆ ಎರಗುತ್ತ) ಈ ನನ್ನ ಮಾತು ಸುಳ್ಳಾಗದಂತೆ ಅನುಗ್ರಹಿಸಿ ಭಗವನ್ !

ಆಕೆ :

ತಂದೇ—ಇಂದೀಗ ನೀನು ಜನತೆಯ ತಂದೆ ! (ಅಶೋಕನ ಬಳಿಯೇ ಉಪಗುಪ್ತನ ಅಡಿಗೆ ಎರಗುತ್ತಿದ್ದಂತೆ, ಹಸನ್ಮುಖದಿಂದ ಉಪಗುಪ್ತ ತನ್ನೆರಡೂ ಕೈಗಳಿಂದ ಆವರನ್ನು ಆದರಿಸಿ ಎತ್ತುತ್ತಿರುವಂತೆ ಪರದೆ ಮುಚ್ಚಿಕೊಳ್ಳುತ್ತದೆ. ಮುನ್ನೆಲೆಯ ಪಾತ್ರಗಳು ಮತ್ತೆ ತಮ್ಮ ತಮ್ಮ ಸ್ಥಾನಗಳಿಗೆ ಬರುತ್ತಾರೆ)

ಭಟ್ಟರು :

ಶಿವಶಂಕರ—!

ಮಾಸ್ತರು :

ಯಾಕೆ ? ನಾಟಕದ ಪ್ರಾಕ್ಟೀಸ್ ನೋಡಿ ದೇವರ ಧ್ಯಾನ ಮಾಡೋ ಹಾಗೆ ಆಯ್ತೇನು ?

ಭಟ್ಟರು :

ಛೆ ಛೆ ! ಹುಡುಗರು ದಿವಿನಾಗಿ ಮಾಡಿದರು.

ರಾಯರು :

ನಿಮ್ಮ ಶಕುಂತಲಾ ನೋಡಿ ಮಾಸ್ತರೆ—ಹ್ಯಾಗೆ ಮಾಡ್ತಾಳೆ ! ಅವಳ ಕಾಲೇಜು ರಂಗಭೂಮಿಗೆ ಏನೂ ಬಡತನವಿಲ್ಲ !

ಮಾಸ್ತರು :

ಯಾಕೆ—ನಿಮ್ಮ ಮೋಹನ ಏನು ಕಡಿಮೆ !?

ಪಾತಮ್ಮ :

ಆದರೆ ನೋಡಿ, ಇವರು, ನಮ್ಮ ಮೋಹನನ್ನ ಯಾವಾಗಲೂ ನಾಟಕದೋನು—ನಾಟಕದೋನು ಅಂತ ಹೀಯಾಳಿಸುತ್ತಾರೆ.

ಮಾಸ್ತರು :

ಆದಕ್ಕೆ ನಾಟಕದೋರಿಗಿಂತ ಚೆನ್ನಾಗಿ ಮಾಡಿದ !

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಯಾರೂ—?

ಪಾತಮ್ಮ :

ಅಶೋಕನ ಪಾರ್ಟು ಮಾಡಲಿಲ್ಲವೆ—ಅವನೇ ನಮ್ಮ ಮೋಹನ!

ಭಟ್ಟರು :

ಓಹೊ! ಅವನೆ? ಅಷ್ಟು ಭಾರಿ ಮೀಶೆ ಇಟ್ಟುಕೊಂಡುಬಿಟ್ಟಿದ್ದ—ತಟಕ್ಕನೆ ಗೊತ್ತೇ ಆಗಲಿಲ್ಲ!—ನಮ್ಮ ಮೋಹನ ಅಂತ!

ರಾಯರು :

ಅಂದ ಹಾಗೇ—ಅಶೋಕ, ಮೀಶೆ ಬಿಟ್ಟುಕೊಂಡಿದ್ದನೇ—ಅಂತ!

ಮಾಸ್ತರು :

ಹಹ (ನಗುತ್ತ) ಇಂಥದೇ ನಾವು ಯೋಚನೆ ಮಾಡೋದು. ಅಶೋಕ ಏನು ಆಡಿದ ಏನು ಮಾಡಿದ ಅಂತ ಚಿಂತಿಸೋದಿಲ್ಲ! ಅವತ್ತಿನ ಅವನ ಆ ಮಾತು, ಇವತ್ತಿನ ಜಾಡ್ಯಕ್ಕೂ ಔಷಧ ಅಂತ ನಮಗೆ ಹೊಳೆಯೋದಿಲ್ಲ—! ಅವನು ಮೀಶೆ ಬಿಟ್ಕೊಂಡಿದ್ದನೆ—ಗಡ್ಡ ಬೆಳೆಸಿದ್ದನೆ—ಅಂತ ಇದೇ! ಬಿಡ್ರಿ ಶಾಮರಾವ್!

ಚಿಕ್ಕತ್ತೆ :

ಹೂಂ! ಅಲ್ಲಽ-ಹಲ್ಲು ಉದುರಿಸೋಕೆ ಬಂದೋನ್ನ ಬೆಲ್ಲ ಕೇಳಿದ ಹಾಗಾಯ್ತು! ಪುಟ್ಟರಾಮು ಯಾರನ್ನೋ ಕಟ್ಟಿಕೊಂಡಾ ಅಂತ ಹೊಟ್ಟೆ ಉರಿದು ಹೋಗ್ತಿದೇ! ಇಲ್ಲಿ ಕೂತ್ಕೊಂಡು ನೀವು—ಅವನಿಗೆ ಮೀಶೆ ಇತ್ತೇ—ಅವನಿಗೆ ಜುಟ್ಟತ್ತೇ ಅಂತ, ತವಡು ಕುಟ್ಟುತಾ ಇರಿ.

ಪಾತಮ್ಮ :

ಅದೇ! ದೊಡ್ಡೋನಂತೂ ಹಾಗಾಗಿಹೋದ, ಮೋಹನನಾದರೂ ನಮಗೆ ದಕ್ಕಲಿ.

CC-O. In Public Domain. Digitized by eGangotri

ರಾಯರು :

ಯಾಕೆ ಬಿಡೇ ಅವನು ಎಲ್ಲೂ ಹೋಗೋದಿಲ್ಲ. ಅವನಿಗೆ ಈ ನಾಟಕದ ಕಂಪನಿಯೇ ಗಟ್ಟಿ !

ಮಾಸ್ತರು :

ನಷ್ಟವಿಲ್ಲ ರಾಯರೇ ! ತೆಗಳೋ ಮಾತಲ್ಲ ಅದು. ಲೋಕದ ರೂಢಿಯನ್ನು ತಿದ್ದೋ ಹಾಗೆ ಅಭಿನಯಿಸಬಲ್ಲ ನಟನಾಗಬೇಕಾದರೆ, ದೇವರ ವರ ಬೇಕು. ನೋಡಿ, ಅಶೋಕನ ಶಾಸನಗಳ ಮಾತನ್ನ ಎಷ್ಟು ಭಾವತುಂಬಿ ಹೇಳಿದ ನಿಮ್ಮ ಹುಡುಗ ! ಒಳ್ಳೇ ಭವಿಷ್ಯ ಇದೆ ಅವನಿಗೆ.

ರಾಯರು :

ಸಾಕೇನೇ ಸರ್ಟಿಫಿಕೇಟು !—ಇನ್ನಾದರೂ ಕಾಫಿ ತಂದ್ಕೊಡು.... ಅಂದಹಾಗೆ, ಮೋಹನನಿಗೆ ಹೇಳಿದೆಯೇನೇ—ನಿನ್ನಣ್ಣ ಹೀಗಾಗಿ ಹೋದ ಅಂತ !

ಪಾತಮ್ಮ :

ಸ್ಸರಿ ! ನಾಟಕದ ಭರಾಟೇಲಿ ಅವನಿಗೆ ಯಾವುದರ ಮೇಲೂ ಗಮನವಿಲ್ಲ. ಇವತ್ತು ಅಣ್ಣಾನೂ ಬರ್ತಾನೆ ಹೇಡತಿ ಕರಕೊಂಡು—ನಾಳೆ ತನ್ನ ನಾಟಕನೋಡೋಕೆ ಅಂತ ಹಿಗ್ಗಿದ—ಅಷ್ಟೆ !

ಚಿಕ್ಕತ್ತೆ :

ನಿನ್ನ ಮನೇಗೆ ಬೆಂಕಿಬಿದ್ದಿದೇ ಅಂದರೆ, ಇದ್ದಿಲ ಅಂಗಡಿ ಇಡ್ತೀನಿ ಅಂದನಂತೆ ಯಾರೋ !

ಭಟ್ಟರು :

ಹಹ—! ಅಲ್ಲ—ಶಾಸನದ ಮಾತೇ ನಿಮ್ಮ ಮೋಹನ ಆಡಿದ್ದು—?

ಮಾಸ್ತರು :

ಹೌದು ಮತ್ತೆ ! ಹೆಚ್ಚುಕಡಿಮೆ ಎರಡು ಸಾವಿರದ ಇನ್ನೂರು ವರ್ಷಗಳಿಂದ ಅಶೋಕನ ಆ ಮಾತುಗಳು ಭಾರತದ ತಿಳಿವಿಗೆ ಹೊಳಪು ಕೊಡ್ತಾ ಇದೆ. ಮರೆತು ಹೋದಾವು ಅಂತ ತನ್ನ ಮಹಾ ಸಾಮ್ರಾಜ್ಯದ ಮೂಲೆ ಮೂಲೆಗಳಲ್ಲಿ ಆ ಮಾತುಗಳನ್ನ, ಬಂಡೆಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ, ಕಂಬಗಳ ಮೇಲೆ ಕೊರೆಸಿಬಿಟ್ಟ ಆ ಮಹಾತ್ಮ! ಆತ ಮೆರೆದ ಧರ್ಮಚಕ್ರ ಇವತ್ತು ನಮ್ಮ ರಾಷ್ಟ್ರಧ್ವಜವನ್ನು ಅಲಂಕರಿಸಿದೆ.

ಭಟ್ಟರು :

ಆಶೋಕನ ಶಾಸನ ಅಂತೇನೋ ಕೇಳಿದೀನಿ- ಆದರೆ ಇವತ್ತಿಗೂ ಇವೆಯೇ ಆ ಶಾಸನಗಳು ?

ಮಾಸ್ತರು :

ಮತ್ತೆ ! ಕನ್ನಡನಾಡಿನಲ್ಲೂ ಇವೆ! ಅದರಲ್ಲೂ ತುಂಗಭದ್ರಾ ಅಣೆಕಟ್ಟಿನಿಂದ ಅರವತ್ತು ಮೈಲಿ ದೂರದಲ್ಲಿ–ಮಸ್ಕಿ ಅಂತ ಒಂದು ಹಳ್ಳಿ !

ಭಟ್ಟರು :

ಹೂಂ—!

ಮಾಸ್ತರು :

ಅಲ್ಲಿಂದ ಒಂದು ಫರ್ಲಾಂಗ್ ದೂರದಲ್ಲಿ ಭಾರಿ ಬಂಡೆಗಳಿಂದಾದ ಒಂದು ಗುಹೆ ! ಅಲ್ಲಿನ ಒಂದು ಬಂಡೆಯ ಕೆಳಭಾಗದಲ್ಲಿ ಕೆತ್ತಿರುವ ಶಾಸನ, ಆತನ ಉಳಿದ ಶಾಸನಗಳಿಗೆ ಕೈದೀವಿಗೆ ಆಯ್ತು !

ಚಿಕ್ಕತ್ತೆ :

ಅಂತೂ, ಬುದ್ಧೀಗಿಂತ ಸದ್ದೇ ಜಾಸ್ತೀ ಅಂತ, ಕಲ್ಲಿನ ಮಾತೆತ್ತಿಕೊಂಡು....ಮನುಷ್ಯರ ಮಾತನ್ನೇ ಮರೆತಿರಲ್ಲ !

ಮಾಸ್ತರು :

ಸರಿಯಾದ ಮಾತು ! ಆಶೋಕನ ಕಲ್ಲುಬಂಡೆಗಳು ಉಡ್ತಿರೋ ಮಾತಿನ ಅರ್ಥ ನಮಗಾದರೆ, ಒಂದೇ ದೇಶದ ನಮ್ಮ, ನಮ್ಮಲ್ಲಿ ಪರಸ್ಪರ ಕೋಪ, ತಾಪ ಉಳಿಯೋ ಕಾರಣವೇ ಇಲ್ಲಮ್ಮ ! ಅದಕ್ಕೇ, ಮಾರಿಗೆ ಚಿತಣವಾಗ್ತಿರೋ ಇಂದಿನ ಜಗತ್ತಿನಲ್ಲಿ ಶಾಂತಿ ನೆಲೆಸ ಬೇಕಾದರೆ ಆಶೋಕನ ಉಪದೇಶವನ್ನೇ ಪ್ರಪಂಚ ಮರೆ ಹೋಗ ಬೇಕು—ಅಂತ ದೊಡ್ಡ ದೊಡ್ಡೋರಲ್ಲ ಹೇಳ್ತ ಇರೋದು ! ನಮ್ಮೋರಷ್ಟೇ ಅಲ್ಲ—ಪರ ದೇಶದವರೂ ಕೂಡ !

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಅಂದಮೇಲೆ—ಆ ಮಾತಿಗೆ ಬೆಲೆ ಇದೆ ಅಂದ ಹಾಗಾಯ್ತು

ಭಟ್ಟರು :

ಹಾಸ್ಯ ಮಾಡ್ತಿದೀರಾ ಸ್ವಾಮೀ ! ಕಿಟ್ಟಣ್ಣ ಮಾಸ್ತರನ್ನ !

ರಾಯರು :

ಛೆ ! ನಮ್ಮಲ್ಲಿರೋ ಗುಣಾ ನಮಗೇ ಕಾಣಬೇಕಾದರೆ, ಹೊರಗಿನವರು ಹೇಳಿದಾಗತಾನೇ ! ಅದೇ ನಮ್ಮ ಋಣೇ ಬರಹ !

ಮಾಸ್ತರು :

ನಿಜ ! ನಮ್ಮಲ್ಲೇ ನಮಗೆ ನಂಬಿಕೆ ಕಡಿಮೆ ; ಸಹನೆ ಕಡಿಮೆ

ಪಾತಮ್ಮ :

(ತಟ್ಟೆಯಲ್ಲಿಟ್ಟ ಬಟ್ಟಲುಗಳೊಡನೆ ಬಂದು) ಇಗೋ ಕಾಫಿ !

ರಾಯರು :

ಕೊಗೊಳ್ಳಿ ಮಾಸ್ತರೇ—

ಪಾತಮ್ಮ :

ಇದು—ನಿಮಗೆ (ರಾಯರಿಗೆ ಕೊಡುತ್ತಾರೆ)

ರಾಯರು :

ಭಟ್ಟರಿಗೆ ?

ಪಾತಮ್ಮ :

ಇಗೋ—ಹಾಲು ! ಸ್ವಲ್ಪ ಸಕ್ಕರೆ ಬೆರೆಸಿದೇನೆ—

ರಾಯರು :

ಚಿಕ್ಕತ್ತೇಗೆ—?

ಪಾತಮ್ಮ :

ಹಣ್ಣು—!

ಚಿಕ್ಕತ್ತೆ :

ಹಯ್ಯೋ ಕಣ್ಣಿಂಗೋ ಕಾಲಕ್ಕೇ ಬ್ರಹ್ಮಚಾರೀ, ಹೆಣ್ಣು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂತ ಕುಣಿದಾಡಿದಾ ಅಂತಾರಲ್ಲ ಹಾಗೆ—ನನಗ್ಯಾತಕ್ಕಮ್ಮ ಬಿದ್ದೋಗೋಳಿಗೆ ಹಣ್ಣು ಹಂಪಲು !

ಭಟ್ಟರು :

(ಹೆಜ್ಜೆಯನ್ನು ಅವರೆಡೆಗೆ ಮುಂದಿಡುತ್ತಾ) ಇರಲೀ ತೊಗೋಳ್ಳೀ ಅಜ್ಜೀ ಪರವಾಗಿಲ್ಲ—!

ಚಿಕ್ಕತ್ತೆ :

(ಚೀರುತ್ತಾ) ಹಯ್ಯೋ ದೂರಾ—ದೂರ ! ಮಡೀಲಿದೀನಿ !

ಪಾತಮ್ಮ :

ಇರಲಿ ತೊಗೊಳ್ಳಿ ಚಿಕ್ಕತ್ತೆ !

ಚಿಕ್ಕತ್ತೆ :

ಹೂಂ ಹಾಕಿಬಿಡು ತಾಯೀ ದೂರ-ದೂರದಿಂದ (ಕ್ಯಾಚ್ ಹಿಡಿಯುತ್ತಾರೆ) ಹೂಂ ಯಾಕೆ ಇನ್ನೂ ಕೈಲಿ ಹಿಡಿದುಕೊಂಡೇ ಕೂತಿದೀರಿ ? ತೊಗೊಳ್ಳಿ ಮಾಸ್ತರೆ ಕಾಫೀ—ಭಟ್ಟರೆ, ಹಾಲು.

ಮಾಸ್ತರು :

ಅಲ್ಲಽ – ನಾವಷ್ಟೇತೊಗೊಳ್ಳಬೇಕಲ್ಲಾ—ಅಂತ

ರಾಯರು :

ಯಾಕೆ—? ಓಹೋ !! ಏನೇ ನಿನ್ನ ಮಗನ ನಾಟಕ ಕಂಪನಿಗೆ ಆಯ್ತೇನೆ ಸರಬರಾಜು !

ಪಾತಮ್ಮ :

ಆಯ್ತಲ್ಲ ! ಅವರಿಗೆ ಆಗಲೇ ಕಾಫಿ ಉಪ್ಪಿಟ್ಟು ಮಾಡಿಕೊಟ್ಟೆ !

ಮಾಸ್ತರು :

ಅದು ಸರಿ—ನಾಟಕ ಆಡೋರಿಗೆ ಆಯ್ತು—! ನೋಡೋರಿಗೆ—?

ರಾಯರು :

ನೋಡೋರಿಗೆ—ಅಂದ್ರೆ ! ಓ !! ನಿಜ ! (ಪ್ರೇಕ್ಷಕರನ್ನ ನೋಡಿ) ಅವರೂ ಏನಾದರೂ ಸ್ವಲ್ಪ ತೊಗೊಂಡು ಬರಲೀ ! ಅಲ್ಲೀವರೆಗೆ ಕಾಯೋಣ ನಾವು—! ಯಾಕೆ ಚಿಕ್ಕತ್ತೇ !

Sri Vidyabharathi Book Centre, Sringeri

CC-O. In Public Domain. Digitized by eGangotri

ಚಿಕ್ಕತ್ತೆ :

ಹಯ್ಯೋ ! ನನಗೇನು ಹೇಳೋ ಶಾಮೀ—ಕುದುರೇಗೇ ಇಲ್ಲದ ಅವಸರ ಬಾಲಕ್ಕೇನು ಅಂತಾರಲ್ಲ—ಹಾಗೇ ! ಕಾಯೋಣ ! ಹೇಗಿದ್ದರೂ ಸಿನ್ನಮಗ, ಅವನ ಮುದ್ದು ಹೆಂಡ್ತೀನ ಕರ್ಕೊಂಡು ಬರೋವರೆಗೂ ಇದ್ದು—ಒಂದೇ ಸಲ ಈ ವೈಲಿಗೆ ಮನೇನ ಬಿಟ್ಟು ಹೊರಟುಹೋಗೋಣ ಅಂತ ತಾನೇ ಕೂತಿರೋದು ಕಂಯೋಣ..... ಕಾಯೋಣ....

ರಾಯರು :

ಸರಿ ಹಾಗಿದ್ದರೆ, (ಪ್ರೇಕ್ಷಕರನ್ನು ಉದ್ದೇಶಿಸಿ ಮರ್ಯಾದೆಯಿಂದ) ತಾವೂ ಹೋಗಿ ಆದಷ್ಟು ಬೇಗ ಬನ್ನಿ. ಇಲ್ಲೇ ಸಿದ್ಧವಾಗಿ ಕೂತಿರ್ತೇವೆ—ತಮಗಾಗಿ ಕಾಯ್ತಾ !

(ಅಂಕದ ಪರದೆ ಇಳಿಯುತ್ತದೆ)

—ವಿರಾಮ—

CC-O. In Public Domain. Digitized by eGangotri

ಎರಡನೆಯ ಅಂಕ

ಚಿಕ್ಕತ್ತೆ :

ಓ ಪರದೆ ಎತ್ತಲ್ಲ !!

ಭಟ್ಟರು :

ಹಂ—ನಾನೂ ಏಳ್ತೀನಿ ಇನ್ನು—ಶಿವಶಂಕರ—ಶಿವಶಂಕರ ! ಸೊಗ ಸಾಗಿತ್ತು ಕೇಸರಿ ಹಾಲು. ಕಾಶ್ಮೀರದ ಕೇಸರಿ, ಬೊಂಬಾಯಿನ ಬಾದಾಮಿ ! (ಏಳುತ್ತಾರೆ) ಕೊಡಗಿನ ಮೆಣಸಿನ ಕಾಳು—

ಮಾಸ್ತರು :

ಹಾಗೇ....ಅಲ್ಲಿಂದ—ಇಲ್ಲಿಂದ ಎಲ್ಲ ಹದವಾಗಿ ಕೂಡಿದಾಗಲೇ ಆ ಸೊಗಸು ನಮ್ಮದು....

ರಾಯರು :

ಯಾಕೆ ಭಟ್ಟರೆ—ಎದ್ಬಿಟ್ರಿ ! ಕೂತ್ಕೊಳ್ಳಿ.

ಮಾಸ್ತರು :

ಕಿಟ್ಟಣ್ಣ ಮಾಸ್ತರ ಹರಿಕತೇನ ಪೂರ್ತಿ ಕೇಳಿಕೊಂಡೇ ಹೋಗಿ ಅಂತಿರೇನು—ಅವರಿಗೆ !

ರಾಯರು :

ಹಾಗಲ್ಲ ! ಹ್ಯಾಗಿದ್ರೂ ಮಗ ಬರೋದು, ಇನ್ನೊಂದು ಅರ್ಧ ಗಂಟೆ ತಾನೇ, ಬರ್ಲೀ...ನೀವು ಹೇಳಿದ ಹಾಗೆ, ಅವನು ಬಂದಿದ್ದನ್ನ ನೋಡಿ, ಅವನ್ಹೇಳೋದನ್ನ ಕೇಳಿ, ಅವನಿಗೆ—ಹೇಳೋದನ್ನ ಹೇಳೀ....

ಚಿಕ್ಕತ್ತೆ :

ಒಂದೇ ಸಲಕ್ಕೆ ಸಂಬಂಧ ಮುರಿದುಕೊಂಡೇ ಹೋಗೋಣ ಅಂತ ತಾನೇ ಕೂತಿದ್ದು. ಇಲ್ದಿ ಇದ್ರೆ ನನಗೆ ತಾನೇ ಏನ್ಕೆಲ್ಸ ಇಲ್ಲಿ—ಬಿಲಾ ಇಲ್ಲ ಅಂತ ತಾನೇ ಹೊಲದಲ್ಲಿ ಕೂತಿರೋದು.

Sri Vidyabharathi Book Centre, Sirsi

CC-O. In Public Domain. Digitized by eGangotri

ಮಾಸ್ತರು :

ಸರಿ, ಮನಸ್ಸನ್ನು ನೀವು ಅಷ್ಟು ಕಠಿಣಮಾಡಿಕೊಂಡುಬಿಟ್ಟರಿ ನನಗೆ ಇಲ್ಲಿ ಇನ್ನು ಜಾಗವಿಲ್ಲ—

ಪಾತಮ್ಮ :

ಹಾಗಲ್ಲ ಮಾಸ್ತರೆ, ಅವನು ಬರೋವರೆಗೆ ನೀವು ಸ್ವಲ್ಪ ಇಲ್ಲೇ ಇದ್ದರೆ ಏನಾಸಿ. ಇವರಿಗೆ ಬರೋ ಕೋಪದಲ್ಲಿ ಅದೇನು ಮಾಡ್ತಾರೋ ಅದೇನು ಬಿಡ್ತಾರೋ ಒಂದೂ ಗೊತ್ತಿಲ್ಲ.

ಚಿಕ್ಕತ್ತೆ :

ಸರಿ, ನಿನಗಿನ್ನೂ ಭ್ರಾಂತು ಪಾತು—ನಂ ಶಾಮಿ ಗೊತ್ತಿಲ್ಲವೆ! ಹೊತ್ತಿಸೋದರೋಳಗೆ ಉರಿದು, ಆರಿಸೋದರೊಳಗೆ ಥಣ್ಣಗಾಗಿ ಹೋಗಿರ್ತಾನೆ, ಇನ್ನೂ ನಾನೇ ವಾಸೀ—ಹಸೀ ಹುಣಸೇಮರ! ಮೊಗ್ಗಿಲ್ಲ....ಆದರೂ ಕುಗ್ಗಿಲ್ಲ!

ಭಟ್ಟರು :

ಶಿವಶಂಕರ—ಶಿವಶಂಕರ

ರಾಯರು :

ಸರಿ, ನೀವೂ ಕೂತ್ಕೊಂಡೇ ಬಿಡಿ ಭಟ್ಟರೆ—ಅವನು ಬರೋವರೆಗೆ—

ಮಾಸ್ತರು :

ಹೌದು, ಆದರೆ ಪುಟ್ಟರಾಮು ಖಂಡಿತ ಬರ್ತಾನೆ ಅಂತಿರಾ? ಎಷ್ಟು ಹೊತ್ತಿಗೆ ಬರ್ತಾನೋ—ಏನೋ—ಈಗಾಗಲೇ ತುಂಬ ತಡ ಆಯ್ತಲ್ಲ!

ಪಾತಮ್ಮ :

ಹಯ್ಯೋ! ಒಂದು ವೇಳೇ....ಇರದೇ ಹೋಗಿಬಿಟ್ಟರೆ ಏನು ಗತಿ—ಅಂದರೆ?

ರಾಯರು :

ಆ್ಹಂ!?

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಮ್ಮ :

ಅಲ್ಲಾ—ಆ ಮಾಡಿಕೊಂಡೋಳನ್ನ ಕರ್ಕೊಂಡು ಬರದೇ ಹೋದರೆ ಏನು ಗತೀ ಅಂದೇ !

ರಾಯರು :

ಅಲ್ಲಾ! ಈಗೊಂದು ಅರ್ಧ ನಿಮಿಷದ ಕೆಳಗೆ ಬಂದರೇನ್ಗತೀ ಅಂದಳು —ಈಗಾಗಲೇ, ಬರದೇ ಇದ್ದರೇನು ಗತೀ ಅಂತಿದ್ದಾಳೆ !!

ಚಿಕ್ಕತ್ತೆ :

ಬಿಸೀ ತುಪ್ಪ—ಹಸೀ ಮನಸ್ಸು ಅಂತಾರಲ್ಲ ಹಾಗೆ—ನುಂಗಲೂ ಆರಳು—ಉಗುಳಲೂ ಆರಳು....! ಬೇಲೀಮೇಲಿನ ಓತೀಕೇತ—ಅದಕ್ಕೂ ಹೂಂ ! ಇದಕ್ಕೂ ಹೂಂ !

ಮಾಸ್ತರು :

ತಾಯಿಕರುಳು ಅಂದರೆ ಅದೇ ಸ್ವಾಮೀ—

ಭಟ್ಟರು :

ಶಿವಶಂಕರ ! ಸರಿ, ಅಂತೂ ಪುಟ್ಟರಾಮೂ ಬರೋವರೆಗೂ ಎಲ್ಲರೂ ಹೀಗೇ ಕೂತ್ಕೊಂಡು—ಬಂದಕೂಡಲೇ ಅವನನ್ನ ಒಟ್ಟಿಗೇನೇ—

ಮಾಸ್ತರು :

(ನಗುತ್ತ) ಮುತ್ತಿಕೊಂಡು, ಒದ್ದು ಬುದ್ಧೀ ಮಾತು ಹೇಳೀ....

ಭಟ್ಟರು :

ದಾರಿಗೆ ತರೋದು—ಅಂತ ನಿಶ್ಚಯವಾದ ಮೇಲೆ—

ರಾಯರು :

ದಾರಿಗಿನ್ನೇನು ತರ್ತೀರಿ ಅವನ್ನ! ಈಜು ಬರದೆ ನೀರಿಗೆ ಬಿದ್ದೋನ್ನ! ಇನ್ನೂ ಬದುಕಿಸೋಕೆ ಸಾಧ್ಯವೇ ಅಂತ ನೋಡೋಣ, ಪ್ರಯತ್ನ ನಮ್ಮದು !

ಭಟ್ಟರು :

(ಹುಸಿನಗುತ್ತಾ) ಉಗ್ರನರಸಿಂಹಯ್ಯನವರ ಪುಣ್ಯ—ಹ್ಯಾಗಿದೆಯೋ ಯಾರಿಗೆ ಗೊತ್ತು !

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಮ್ಮ :

ಇನ್ನೇನೂ ಇಲ್ಲದೆ ಇದ್ರೂ—ಆ ಹಾಳು ಹುಡುಗೀನ—ಹಾಗೇ ಹಿಂದಕ್ಕೆ ಕಳಿಸಿ, ನೀನು ಮಾತ್ರ ಇನ್ಮೇಲೆ ಇಲ್ಲೇ ಇದ್ಬಿಡೂ—ನಿನ್ನ ಹಾಳು ಪೂನಾ ಕೆಲಸಾನೂ ಬೇಡಾ—ಆ ನಾನ್ನೂ ರೈವತ್ತು ರೂಪಾಯೂ ಬೇಡಾ—ಅಂತ—ನಾನಂತೂ—

ಚಿಕ್ಕತ್ತೆ :

ಹುಂ—ಅದೊಂದೇ ದಾರಿ ನಮಗೇ !!—ಅನ್ಸುತ್ತೇ ನನಗೂ. ಅಂಥವಳಿಗೇನು—ಬಜಾರಿಗೇ !!—ನೂರಾರು ದಾರಿಯಿರುತ್ತೆ ಹಕ್ಕಿ ಹೊರಟಿದ್ದೇ ಹಾದಿ, ಛಿಕ್ಕಿ ಹೊಡೆದಿದ್ದೇ ಲಾಭ ಅಂತ !

ರಾಯರು :

ನೀವೇನಾದರೂ ಮಾಡ್ಕೊಳ್ಳಿ–ನನ್ನ ದಾರಿ ಅಂತೂ ನಾನು–ಯೋಚಿಸಿದ್ದೀನಿ.

ಭಟ್ಟರು :

ಆಲ್ಲ ಮಾಸ್ತರ್ ಸ್ವಾಮೀ—ಇಂತಹ ಸಂದಿಗ್ಧವನ್ನೂ ದಾಟಿಸುವ ದಾರಿ ಇದೆಯೋ—ಅಂತ, ನನ್ಮ ಧರ್ಮದಲ್ಲಿ !

ಮಾಸ್ತರು :

ಧರ್ಮದ ದಾರಿ ಹಿಡಿದರೆ, ಎಂತಹ ಸಂದಿಗ್ಧವನ್ನೂ ತುಳಿದು ದಾಟಬಹುದು ಭಟ್ಟರೆ.

ಭಟ್ಟರು :

ಅಂದರೆ—

ಮಾಸ್ತರು :

ಮಾನವ ಧರ್ಮದ ದಾರಿ !

ಭಟ್ಟರು :

ಅಂದರೆ—?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಆದೇ, ನನ್ನ ನಾನೇ ಹೇಗೆ ಕಾಣ್ತೇನೋ ಹಾಗೇ ಇತರರನ್ನೂ ಕಾಣ್ತೇನೆ ಅಂತ ಹೇಳಲಿಲ್ಲವೇ ಅಶೋಕ—?

ಭಟ್ಟರು :

ಶಿವಶಂಕರ !

ಮಾಸ್ತರು :

ತಾವೇ ಆರಿಸಿದ್ದರೆ ಹೇಗೋ ಹಾಗೆಯೇ ಹೊಸ ಸೊಸೆಯನ್ನು ಈ ಮನೆಯವರೆಲ್ಲ ನಡೆಸಿಕೊಂಡರೆ !!—ಓ !

ಚಿಕ್ಕತ್ತೆ :

ಹಯ್ಯೋ—ಅದ್ದೇಗೆ? ಹುಟ್ಟೋಕೆ ಮೊದಲೆ ಹಲ್ಲು ಉದುರಿ ಸೋಕೆ ಆಗುತ್ತೇ ?

ಭಟ್ಟರು :

ಯಾರ ಹಲ್ಲು ?

ಚಿಕ್ಕತ್ತೆ :

ಹಲ್ಲು ಇದ್ದೋರದ್ದು ! ಹಯ್ಯೋ ! ಇಲೀ ಕಂಡರೇ ಅರಚಿ ಕೊಳ್ಳೋನು ಹುಲಿ ಬಾಲ ತಿರಿಚುತಾನೆಯೆ ?

ಮಾಸ್ತರು :

ಅದೇನು ಹೇಳ್ತೀರೋ ಸುಲಭವಾಗಿ ಅರ್ಥವಾಗೋದಿಲ್ಲ ! ಆದರೆ, ಭಟ್ಟರು ಅಂದಹಾಗೆ, ಧರ್ಮಮಾರ್ಗದಲ್ಲಿ ನಡೆಯೋದು ಕಷ್ಟ—ತುಂಬ ಕಷ್ಟ !

ಭಟ್ಟರು :

ಹಾಂ ! ನನಗೊಂದು ಹೊಳೀತಿದೆ ! ಆ ಸೊಸೆ ತನ್ನ ಧರ್ಮಮಾರ್ಗದಲ್ಲಿ ತಾನು ನಡೆದರೆ, ಈ ಇವರೂ ತಮ್ಮ ಧರ್ಮಮಾರ್ಗದಲ್ಲಿ ನಡೆದೇ ನಡೀತಾರೆ !

ಚಿಕ್ಕತ್ತೆ :

ಹಾಂ ! ಅದೇ ನನ್ನ ಮನಸ್ಸಿನಲ್ಲೂ ಬಂದಿತ್ತು—ಹೇಳೋಣ ಅನ್ನೋ ಅಷ್ಟರಲ್ಲಿ ಇವರೇ ಹೇಳಿಬಿಟ್ಟರು—ಅನ್ಯಾಯ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಸತ್ಯದ ಮಾತನ್ನು ಯಾರು ಹೇಳಿದರೂ ಅನ್ಯಾಯವಿಲ್ಲ ಅಮ್ಮಾ ! ಭಟ್ಟರು ಹೇಳಿದ ಹಾಗೆ ಇಬ್ಬರೂ ತಮ್ಮ ತಮ್ಮ ಧರ್ಮಮಾರ್ಗಗಳಲ್ಲಿ ನಡೆದುಬಿಟ್ಟರೆ ಇನ್ನೇನುಬೇಕು ಹೇಳಿ. ಒಂದು ವೇಳೆ ಮನೆಗೆ ಬಂದ ಆ ಸೊಸೆ "ತನ್ನ" ಧರ್ಮಮಾರ್ಗದಲ್ಲಿ ನಡೆಯಲಿಲ್ಲ, ಅಂತ ನಮಗೆ ಅನಿಸಿದರೂ, ನಮ್ಮ ಧರ್ಮವನ್ನು ನಾವು ಏಕೆ ಬಿಡಬೇಕು ? ನಮ್ಮ ನಡೆ ಅವಳನ್ನ ಯಾಕೆ—ಅವಲಂಬಿಸಿ ನಿಲ್ಲಬೇಕು ? ಒಂದು ದೀಪ, ತನ್ನದೇನನ್ನೂ ಕಳೆದುಕೊಳ್ಳದೇ ಇನ್ನೊಂದು ದೀಪಕ್ಕೆ ಜೀವ ಕೊಡುವ ಹಾಗೆ, ನಾವು ಧರ್ಮದಲ್ಲಿ ನಡೆದರೆ, ನಮ್ಮದೇನನ್ನೂ ಕಳೆದುಕೊಳ್ಳದೆ, ನಮಗೇ ತಿಳಿಯದ ಹಾಗೆ ಇನ್ನೊಬ್ಬರನ್ನೂ ನಮ್ಮ ದಾರಿಗೇ ಎಳೆದುಕೊಳ್ತೀವಲ್ಲಾ !

ಭಟ್ಟರು :

ಆದರೆ—ಸ್ವಾಮೀ, ನಾನೂ ಹೇಳೋದು, ಇವರ ಧರ್ಮಕ್ಕೂ ಅವರ ಧರ್ಮಕ್ಕೂ—ಅದೇನೋ ಹೇಳ್ತಾರಲ್ಲಾ—ಕ್ರಾಷ್ ಅಂತ, ಅದಾದರೆ ಹೇಗೆ ಅಂತ ?

ರಾಯರು :

ಛೆ ! ಕ್ರಾಷ್ ಅಲ್ಲ ! ಮೊದಲು ಕ್ಲಾಷ್, ಆಮೇಲೆ ಕ್ರಾಷ್ !

ಚಿಕ್ಕತ್ತೆ :

ಅದೇನೋ ? ನಾವಾಡೋ ಮಾತ್ನಲ್ಲೇ ಹೇಳಬಾರದೇನೋ ! ನಡೆಯಲಾರದೋನ ಮೇಲೆ ಹೆಡಿಗೆ—ಹೊರಿಸಿದರಂತೆ.... ಕುಂಟನ ಬೆನ್ನಮೇಲೆ ಗಂಟು ಅಂತಾರಲ್ಲಾ ಹಾಗೆ !

ರಾಯರು :

(ನಗುತ್ತ) ಆದರೆ ಭಟ್ಟರು ಕೇಳಿದ ಪ್ರಶ್ನೆ ಸರಿಯಾದದ್ದೇ. ಪರಸ್ಪರ ವಾಗಿ ಹೀಗೆ ಎರಡು ಧರ್ಮಗಳಿಗೆ ಢಿಕ್ಕಿ ಆದರೆ ಹೇಗೆ ಅಂತ ! ನಮ್ಮ ದೇಶದಲ್ಲೋ ಹತ್ತು ಧರ್ಮ—ನೂರು ಮತ !

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಅಲ್ಲಿ, ಹೀಗೆ ಕೇಳಿದೆ ಅಂತ, ತಾವು.....

ಮಾಸ್ತರು :

ಛೆ! ಎಲ್ಲಿ ಬಂತು! ಕಂಬ ಅಲ್ಲಾಡಿಸಿ ಅಲ್ಲಾಡಿಸೀ ಗಟ್ಟಿ—ಮಾಡೋ ಹಾಗೆ, ತಮ್ಮ ಪ್ರಶ್ನೆಗಳಿಂದ ನನ್ನ ನಂಬಿಕೆಗಳನ್ನ—ಅಲ್ಲಾಡಿಸಿ ಅಲ್ಲಾಡಿಸಿ ಗಟ್ಟಿಮಾಡಿಕೊಳ್ಳೋಕೆ ಅವಕಾಶವಾಯಿತು. ಅಷ್ಟೆ! ಆದರೆ ತಾವು—ಅವರ ಧರ್ಮ-ಇವರ ಧರ್ಮ ಅಂದಿರಿ, 'ಮತ' ಜಾತಿ, ಅನ್ನೋ ಅರ್ಥದಲ್ಲಿ ಧರ್ಮ ಅನ್ನೋ ಪದವನ್ನ....

ಭಟ್ಟರು :

ಹಾಂ! ಉಪಯೋಗಿಸಿದೆ ಅಂತಾನೇ ತಿಳಿಯೋಣಾಗಲೀ—ಆಗ? ಹೇಗೆ?

ಮಾಸ್ತರು :

ಹಾಗೆ ಒಂದು ಧರ್ಮಕ್ಕೂ ಇನ್ನೊಂದಕ್ಕೂ ಮೂಲದಲ್ಲಿ ಯಾವ ವ್ಯತ್ಯಾಸವೂ ಇಲ್ಲ ಭಟ್ಟರೆ. ಪ್ರಚಾರಕರು ಪರಸ್ಪರ ಬಡಿದಾಡ ಬಹುದು. ಭರತಖಂಡದಲ್ಲೇ ಏಕೆ, ಜಗತ್ತಿನ ಧರ್ಮಗಳೆಲ್ಲ ಒಂದೇ ಒಳ ನುಡಿಯನ್ನು ಮಿಡಿಯುತ್ತವೆ. ಕವಿ ವೇಮನ ಹೇಳಿದ—ಹಾಗೆ, ಹಸುಗಳು ಬೇರೆಬೇರೆ ಬಣ್ಣದವು—ಹಾಲು ಒಂದೇ! ಹೂಗಳು ಬೇರೆ ಬೇರೆ ಬಣ್ಣದವು—ಪೂಜೆ ಒಂದೇ!!! ಹಾಗೆ ಭಾರತದ ಕಾಲವಾಹಿನಿಯಲ್ಲಿ ತೇಲಿಬಂದ ಧರ್ಮಕಲಶಗಳು ಬೇರೆ ಬೇರೆ ಆಕಾರದವು; ಆದರೆ ಎಲ್ಲದರಲ್ಲೂ ಒಂದೇ ಅಮೃತ....'ಒಬ್ಬನೇ ದೇವರು, ಸತ್ಯವನ್ನು ಬಿಡಬೇಡ, ನಿನ್ನ ಧರ್ಮದಲ್ಲಿ ನಡೆ, ಪರ ಧರ್ಮವನ್ನು ದೂಷಿಸಬೇಡ, ಅಹಿಂಸೆಯಲ್ಲಿ ನಂಬಿಕೆ ಇಡು' ಅಂತ.... ಆ ಧರ್ಮಗಳೆಲ್ಲ— [ಹೀಗೆನ್ನುತ್ತಿರುವಾಗ, ಹಿನ್ನೆಲೆಯಿಂದ ಧ್ವನಿವರ್ಧಕದಲ್ಲಿ ಮುಂದೆ ಹೇಳುವ ಸಾಲುಗಳು ಬೇರೆ ಬೇರೆ ಧ್ವನಿಗಳಲ್ಲಿ-(ಎರಡು ಅಥವಾ ಮೂರು) ಶ್ರುತಿಬದ್ಧವಾಗಿ, ಗಂಭೀರವಾಗಿ ನಿನದಿಸುತ್ತವೆ]

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ವನಿ 1 :

ಈಶಾ ವಾಸ್ಯಮಿದಂ ಸರ್ವಂ

ಧ್ವನಿ 2 :

ಏಕಂ ಸತ್ ವಿಪ್ರಾಃ ಬಹುಧಾ ವದಂತಿ,

ಧ್ವನಿ 3 :

ಜೀವದಯೆಯೇ ಪರಮ ಧರ್ಮ ; ಅದು ಜೈನ ಧರ್ಮ.

ಧ್ವನಿ 1 :

ಬೌದ್ಧ ಧರ್ಮ ಸಾರಿತು—ಸಬ್ಬೇ ಸತ್ತಾ ಭವಂತು ಸುಖತತ್ತಾ. ಸರ್ವತತ್ವಗಳೂ ಸುಖವಾದ ಆತ್ಮವನ್ನು ಉಳ್ಳವಾಗಲಿ.

ಧ್ವನಿ 2 :

ಹಿಂದೂ ಧರ್ಮದ ತಿರುಳನ್ನು ಹದಿನಾಲ್ಕನೆಯ ಶತಮಾನದ ಬೇಲೂರು ಶಿಲಾಶಾಸನ—ಸಾರಿತು—ಶಿವ—ಕೇಶವರು ಎಂದೂ ಒಂದೇ.

ಶ್ರೀಮತ್ ತ್ರೈಲೋಕ್ಯಪೂಜ್ಯಾಯ ಸರ್ವ ಕರ್ಮಸುಸಾಕ್ಷಿಣೇ
ಫಲದಾಯ ನಮೋ ನಿತ್ಯಂ ಕೇಶವಾಯಚ ಶಿವಾಯಚ
ಯಂಶೈವಾಸ್ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ
ಕರ್ತೇತಿ ನೈಯಾಯಿಕಾಃ
ಅರ್ಹಂಶ್ಚೇತಿ ಚ ಜೈನಶಾಸನಮತಾಃ
ಕರ್ಮೇತಿ ಮೀಮಾಂಸಕಾಃ
ಸೋಽಯಂನೋ ವಿಧಧಾತು ವಾಂಛಿತ ಫಲಂ
ಶ್ರೀ ಕೇಶವೇಶಸ್ಸದಾ

ಧ್ವನಿ 3 :

ಬಸವೇಶ್ವರರು ಹೇಳಿದರು—

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಬಣ್ಣಿಸಬೇಡ—ಇದಿರ ಹಳಿಯಲುಬೇಡ,
ಇದೇ ಅಂತರಂಗ ಶುದ್ಧಿ—ಇದೇ ಬಹಿರಂಗ ಶುದ್ಧಿ,

ಧ್ವನಿ 1 :

ದಾಸರು ಹಾಡಿದರು—

ಕುಲ ಕುಲ ವೆನ್ನುತಿಹರು
ಕುಲ ಯಾವುದು ಸತ್ಯದರ್ಮವುಳ್ಳ ಮನುಜಗೆ—

ಧ್ವನಿ 2 :

ರಾಮ—ರಹೀಮರಲ್ಲಿ ಭೇದವಿಲ್ಲ,

ಧ್ವನಿ 3 :

ಈಶ್ವರ ಅಲ್ಲಾ ತೇರೇ ನಾಂ
ಸಬಕೋ ಸನ್ಮತಿ ದೇ ಭಗವಾನ್,

ಧ್ವನಿ 1 :

India is a secular State
All religions are equal,

ಧ್ವನಿ 2 :

Articles 14 to 18 under the Fundamental Rights of the Indian Constitution, declare equality before the Law, Prohibition of discremination on grounds of Religion, Race, Caste, Sex or Place of Birth.

(ಧ್ವನಿವರ್ಧಕದ ಘೋಷಣೆ ತಟಕ್ಕನೆ ನಿಂತುಹೋಗುತ್ತದೆ. ಮುಂದೆ ಅರ್ಧ ನಿಮಿಷ ರಂಗದಲ್ಲಿ ಮೌನ. ಮುನ್ನೆಲೆಯ ಪಾತ್ರಗಳು—ಧ್ಯೇನಿಸುತ್ತಿವೆ.)

ಮಾಸ್ತರು :

ಹುಡುಗರು ಎಷ್ಟು ಚೆನ್ನಾಗಿ ಸಂಗ್ರಹಿಸಿಡ್ಡರು-ಭಾರತದ ಸರ್ವಧರ್ಮಸಾರವನ್ನ! ಯಾವುದೇ ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡವನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೊಂದು ಧರ್ಮದ ಜೊತೆ ಕ್ಲಾಷ್ ಮಾಡೋದು ಸಾಧ್ಯವಿಲ್ಲದ ಮಾತು ಸಾರ್.

ರಾಯರು :

ಈ ನಾಟಕದೋರದ್ದೂ ನಿಮ್ಮದೇ ಹಾಡು—'ನಾವೆಲ್ಲರೂ ಒಂದೇ' ಅಂತ.

ಭಟ್ಟರು :

ಅದೇನು ಬಿಡಿ ಈಗ ರಾಜಶಾಸನವೇ ಆಗಿ ಹೋಗಿದೆ.....ಹೊರಗಿನೋರನ್ನ ಒಳಗೆ ಕರೆದುಕೊಳ್ಳದೇ ಇದ್ದರೆ ಅಪರಾಧವೇ ಆಗಿ ಹೋಗುತ್ತೆ.

ಮಾಸ್ತರು :

ಛೆ! ಹಾಗಲ್ಲ ಭಟ್ಟರೆ, ಭಾರತೀಯರನ್ನ ಎಂದಿನಿಂದಲೂ ಆಳ್ತೀರೋದು ರಾಜಶಾಸನಕ್ಕೆಂತ ಹೆಚ್ಚಾಗಿ ಧರ್ಮಶಾಸನ—ಎನ್ನಬೇಕು. ಅದರ ಹಳೆಯ ತತ್ವಗಳನ್ನೇ ಕಾಲ ಬದಲಾದ ಹಾಗೆ ಹೊಸ ಹೊಸ ಮಾತುಗಳಲ್ಲಿ ಇಟ್ಟು ಆಚರಣೆಗೆ ತರ್ತಾ ಇದ್ದೀವೆ ಅಷ್ಟೆ.

ಭಟ್ಟರು :

ಏನೋ ದ್ರಾವಿಡ ಪ್ರಣಾಯಮ ಮಾಡಿಬಿಟ್ಟಿರಿ.

ಜಿಕ್ಕತ್ತೆ :

ಹಂ ಆದೇ....ಕಡ್ಡೀ ಎತ್ತಲಾರದೋನ ಕೈಯಲ್ಲಿ ಕಟ್ಟಿಗೆ ಕೊಟ್ಟಿರೂ ಅಂತಾಲ್ಲ....ಹಾಗೆ.

ಭಟ್ಟರು :

ಅ...ಹಂ....! ಒಂದು ವೇಳೆ ಹಾಗೆ ಧರ್ಮಗಳಲ್ಲಿಯೇ ಕ್ಲಾಷ್ ಬಂದಾಗ ಹೇಗೆ ಮಾಡಬೇಕು—ಅನ್ನೋದನ್ನೇ ಹೇಳಲಿಲ್ಲ ನೀವು

ಮಾಸ್ತರು :

ಆರು ಸಾವಿರ ವರ್ಷಗಳ ಬದುಕಿನಲ್ಲಿ ಸೆಲೆ ಎದ್ದ ಸಂಸ್ಕೃತಿಯನ್ನೇ ಕಡೆದು ನಮ್ಮ ರಾಷ್ಟ್ರ, ಒಂದು ದಿವ್ಯಾಸ್ತ್ರ ಸಿದ್ಧಮಾಡಿಕೊಂಡಿದೆ ಭಟ್ಟರೆ, ಎಂತಹ ಕ್ಲಾಷ್‌ಗಳನ್ನೂ ಎದುರಿಸಬಲ್ಲ ಎರಡೇ ಅಕ್ಷರದ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿವ್ಯಾಸ್ತ್ರ ಅದು—"ಪ್ರೇಮ" ಅಂತ. ಯುದ್ಧವಿಲ್ಲದೆ ಗೆದ್ದು ಜಯ ಭೇರಿ ಹೊಡೆಯಬೇಕಾದರೆ ಅದೊಂದೇ ದಿವ್ಯಾಸ್ತ್ರದಿಂದ ಸಾಧ್ಯ. ಕತ್ತರಿಸುವ ಅಸ್ತ್ರವಲ್ಲ ಅದು ; ಕಟ್ಟಿಹಾಕುವ ಅಸ್ತ್ರ.

ಚಿಕ್ಕತ್ತೆ :

ಸ್ಸರಿ, ಒದೆಯೋಕೆ ಬಂದೋನಿಗೆ ಹೊದೆಯೋಕೆ ಕೊಟ್ಟಹಾಗೆ!

ಮಾಸ್ತರು :

ಏನಾದರೂ ಅದೇ, ಅದೊಂದೇ ಅಸ್ತ್ರ ! ನಮ್ಮ ರಾಷ್ಟ್ರದ ಮುಂದಿನ ಮಹಾ ಸಮಸ್ಯೆಗಳನ್ನ ಮುರಿಯೋದಕ್ಕೂ ಅದೇ ಅಸ್ತ್ರ—ಈ ಮನೇ ಮಗ, ರಾಯರೆದುರಿಗೆ ಅವರ ಸೊಸೆಯನ್ನು ತಂದು ನಿಲ್ಲಿಸಿದಾಗಲೂ ಅದೇ ಅಸ್ತ್ರ. ಪ್ರೇಮಬಂಧನಕ್ಕಿಂತ ಹಿತವಾದ ಬಂಧನ—ಬೇರೆ ಇಲ್ಲ.

ಚಿಕ್ಕತ್ತೆ :

ಅಂತೂ-ಇಂತೂ, ಇಲ್ಲೀಗೆ ಬಂತೂ-ಮಾತು ! ಹೊರಟು ಹೋದೆಯಾ ಅಂದರೆ ಹಾಸಿಗೇ ಕೆಳಗೇ ಇದೇನೆ—ಅಂದಹಾಗೆ !

ಭಟ್ಟರು :

ಶಿವಶಂಕರ !

ಮಾಸ್ತರು :

ಆ ದಿವ್ಯಾಸ್ತ್ರವನ್ನು ಮರೆತು ಕುರುಡರಾಗಿ ನಾವು ಮುನ್ನುಗ್ಗಿ ಬಿಟ್ಟಾಗ, ನಮ್ಮ ದೇಶ ಬಲುದೊಡ್ಡ ತಪ್ಪುದಂಡಗಳನ್ನು ಕೊಟ್ಟಿದೆ ರಾಯರೇ ! ಪ್ರೇಮ ಒಂದೇ ಐಕ್ಯದ ನೆಲಗಟ್ಟು ಅನ್ನೋದು ನಮ್ಮ ಇತಿಹಾಸ, ಅಡಿಗಡಿಗೂ ಕಲಿಸಿದ ಪಾಠ. ಅದನ್ನ ಮರೆತು ನಡೆದರೆ, ನೆಲದ ಮಕ್ಕಳೇ ಒಬ್ಬರೊಡನೆ ಒಬ್ಬರು ಬಡಿದಾಡಿ, ಹೊರಗಿನ ಮೂರನೆ ಯವನು ಒಳಬಂದು ಇಬ್ಬರನ್ನೂ ತುಳಿಯೋದಕ್ಕೆ ದಾರಿಮಾಡಿಕೊಡು ತಾನೆ ಅಂತ—ಇದು ನಮ್ಮ ಇತಿಹಾಸ ಕಲಿಸಿದ ಪಾಠ.

ರಾಯರು :

ಅದು ನಿಜ, ಅದು ನಿಜ, ಅದು ಈಚಿನ ಪಾಠ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಯಾಕೆ ? ಬಲು ಪುರಾತನ ಪಾಠವೂ ಹೌದು ! ಮಹಾಭಾರತದ ಪಾಠ !! ಒಂದಾಗಿದ್ದವರು ಎರಡಾಗಿ ಒಡೆದು ಬಡಿದಾಡಿದಮೇಲೆ ಎಂದೆಂದೂ ಉಳಿದಿದ್ದು ಅಂದರೆ ಅವರು ಜಗತ್ತಿಗೆ ಕಲಿಸಿದ ಪಾಠ ಅಷ್ಟೆ.

ಚಿಕ್ಕತ್ತೆ :

ಹೌದಲ್ಲ, ಪಾಂಡವರು ಗೆದ್ದರು ನಿಜ—ಆದರೆ ಅಂತೂ ಇಂತೂ—

ಭಟ್ಟರು :

ಕುಂತೀ ಮಕ್ಕಳಿಗೆ ರಾಜ್ಯವಿಲ್ಲ ಅಂತಲೇ ಆಯಿತು !

ಚಿಕ್ಕತ್ತೆ :

ಹಯ್ಯೋ ನಾ ಹೇಳೂ ಆಷ್ಟರಲ್ಲೇ ಹೇಳ್ತಾರಲ್ಲ ಈ ಭಟ್ಟರೂ ! ಪಾಠಕ್ಕಿಂತ ಕಾಟ ಜಾಸ್ತಿ ಆನ್ನೋ ಹಾಗೆ !

ರಾಯರು :

ಹಹ....ಅಂತೂ ಆದು ಪುರಾಣದ ಕತೆ—

ಮಾಸ್ತರು :

ಇನ್ನು ಇತಿಹಾಸಕ್ಕೆ ಬಂದರೆ, ಓ—ಅದೆಷ್ಟು ನಿದರ್ಶನಗಳು ಬೇಕು ನಿನಗೆ ! ಒಂದಿದ್ದದ್ದು ಎರಡಾಗಿ ಒಡೆದರೆ ಮೂರನೇದಕ್ಕೆ—ಜಾಗ ಆನ್ನೋದು ಖಂಡಿತವಾದ ಮಾತು ! ಮುಂದಿನೋರಿಗೆ ಇದನ್ನ ತೋರುವ ಸಲುವಾಗಿ ಹೆತ್ತ ಮಕ್ಕಳ ನೆತ್ತರಲ್ಲೇ ಭೂಮಿತಾಯಿ ನೂರಾರು ಸಲ ಮಿಂದಿದಾಳೆ ಸ್ವಾಮೀ—ನೋಡಿ, ಎರಡು ಸಾವಿರ ವರ್ಷಗಳ ಹಿಂದೆ—ಕ್ರಿಸ್ತಪೂರ್ವ ೩೨೭ರಲ್ಲಿ(ಒಂದು ಬಾರಿ ಹಿನ್ನೆಲೆಯ ಧ್ವನಿವರ್ಧಕದಿಂದ ತುತ್ತೂರಿಯ ಧ್ವನಿಯಾಗುತ್ತದೆ)

ಚಿಕ್ಕತ್ತೆ :

(ಬೆಚ್ಚಿ) ಹಯ್ಯೋ....ಇದೇನು ! ವೀಣೆ ನುಡಿಸ್ತಿದ್ದೋನ ಮೇಲೆ ಸಾಣೆಕಲ್ಲು ಎಸೆದರೂ ಅಂದಹಾಗೆ—ಈ ಶಬ್ದ !!

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಓ ! ಇನ್ನೂ ನಡೀತಿದೆಯೇನು ಇವರ ರಿಹರ್ಸಲ್ಲು !!

ಭಟ್ಟರು :

ತಾಳಿ—ನೋಡೋಣ (ಏಳುತ್ತಾರೆ)

ರಾಯರು :

ಬಿಡಿ ಭಟ್ಟರೆ, ಕಿಟ್ಟಣ್ಣ ಮಾಸ್ತರ ಹರಿಕಥೇನೇ ಸಾಗಲೀ—

ಭಟ್ಟರು :

ಹಾಗಲ್ಲ ಸ್ವಾಮೀ—ಪರದೆ ಒಳಗಿಂದು—ಉಪಕತೆ ಇದ್ದಹಾಗೆ ! ಏನ್ಮಾಡ್ತಿದಾರೇ ಅಂತ ಒಂದು ನಿಮಿಷ ಇಣಿಕೆ ನೋಡಿಬಿಡ್ತೀನಿ.

(ಪರದೆ ಯತ್ತ ನಡೆದು ಅದನ್ನು ಬಿಡಿಸಿ ಇಣಿಕಿದೊಡನೆ, ಅದು ಸೀಳಾಗಿ ಸರಿದು ಹೋಗುತ್ತದೆ. ಧೀರ ಯವನ ಅಲೆಕ್ಸಾಂಡರ್ ನಿಂತಿದ್ದಾನೆ....ಒಳರಂಗದಲ್ಲಿ. ಬಳಿಯಲ್ಲಿಯೇ ಅಂಭಿರಾಜ !)

ಅಲೆಕ್ಸಾಂಡರ್ :

(ಭುಜತಟ್ಟಿ) ನಿನ್ನನ್ನು ಅಂಜಿಸಿ ನಡುಗಿಸುತ್ತಿದ್ದ ಭಾರತಸಿಂಹವನ್ನು ಸೆರೆಹಿಡಿದಿದ್ದೇನೆ ಅಂಭಿರಾಜ ! (ನೇಪಥ್ಯವನ್ನು ಉದ್ದೇಶಿಸಿ) ಕರೆದು ತನ್ನಿ.

ಅಂಭಿ :

ಇದೀಗ ನನ್ನ ಕಡುಸೇಡಿನ ಬೇಗೆ ಆರಿದಂತಾಯಿತು ಸಮ್ರಾಟ್ ! ತಮ್ಮ ಕೃಪೆಯಿಂದಾಗಿ ನನ್ನ ಹಟ ಗೆದ್ದಂತಾಯಿತು—

(ಅಲೆಕ್ಸಾಂಡರ್ ನಗುತ್ತಿದ್ದಂತೆ, ಮಲಿನ ವಸ್ತ್ರಧಾರಿಯಾದ ಪೌರವರಾಜ, ಧೀರನಾಗಿ ನಡೆದುಬಳುತ್ತಾನೆ. ಅವನ ದೇಹದ ಗಾಯಗಳಿಂದ ರಕ್ತ ಒಸರುತ್ತಿದೆ—ಬಿಚ್ಚುಗತ್ತಿ ಹಿಡಿದ ಒಬ್ಬ ಯವನ ಬಳಿಯಲ್ಲಿದ್ದಾನೆ)

ಅಂಭಿ :

ಪೌರವ, ನಿನ್ನ ಸಿರಿ, ಹಿರಿಮೆಗಳನ್ನು ಆಳಿಸಿದ ಸಿಕಂದರ್ ಸಾಮ್ರಾಟರಿಗೆ ನಮಿಸಿ ಬೇಡಿಕೊಂಡು, ಜೀವದಾನ ಪಡೆದುಕೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೌರವ :

(ಅವನೆಡೆ ಕಣ್ಣೆತ್ತಿಯೂ ನೋಡದೆ) ವೀರನನ್ನು ವೀರ ಮಾತನಾಡಿಸಲಿ, ಹೇಡಿಯ ಮಧ್ಯಸ್ತಿಕೆ ಇಲ್ಲಿ ಬೇಡ.

ಅಂಭಿ :

ನೋಡಿ ಸಮ್ರಾಟ್....ಇವನ ಹೆಮ್ಮೆ ಇನ್ನೂ ಮುರಿದಿಲ್ಲ. ಎಂದಿನಂದಲೂ ಇದೇ ಹೆಮ್ಮೆಯಿಂದ ಬೀಗುತ್ತಿದಾನೆ....ಸೋತು ಹಣ್ಣಾಗಿ ನಿಂತಿದ್ದರೂ ನಾಚಿಕೆಯೆಂಬುದಿಲ್ಲ.

ಪೌರವ :

(ಅವನೆಡೆಗೆ ನೋಡದೆಯೆ) ಇದು ವೀರನ ಸೋಲು ಅಂಭೀ—ನಿನಗೆ ಅರ್ಥವಾಗುವಂತಹುದಲ್ಲ. ಊರಬಾಗಿಲಿಗೆ ಬಂದ ಮಾಂಗೆ ಔತಣವಿತ್ತು. ೬೫ ಆನೆ, ಮೂರು ಸಾವಿರ ಎತ್ತು, ಎರಡು ಲಕ್ಷ ಕುರಿಗಳನ್ನು ಕಾಣಿಕೆಯಾಗಿ ಅರ್ಪಿಸಿ, ಮನೆ ಹೊಗಿಸಿದಂತಹ ಹೆಂಬೇಡಿಗೆ ಅರ್ಥವಾಗುವಂತಹುದಲ್ಲ ! ಹೆತ್ತ ತಾಯಿಗೆ ಎರಡು ಬಗೆಯುವ ಕ್ಷುದ್ರ ಕೀಟದ ತಿಳಿವಿಗೆ ನಿಲುಕದ ಮಾತು ಅದು. ಇನ್ನು ಸಾಕು. ನಿನ್ನ ನಾಲಗೆಯನ್ನು ಮಡಿಸಿಡು ಅಂಭೀ—ವೀರನೊಡನೆ ಎರಡು ಮಾತನಾಡಿ ಧೀರಮರಣವನ್ನಪ್ಪುತ್ತೇನೆ.

ಅಲೆಕ್ಸಾಂಡರ್ :

ಹ—ಹಾಂದು ಪೋರಸ್ !!.....ಈ ದಿಗ್ವಿಜಯ ಯಾತ್ರೆಯಲ್ಲಿ ನನ್ನ ಸಂಗ್ರಾಮ ನೈಪುಣ್ಯಕ್ಕೆಣೆಯಾದ ವೀರನೈರಂ ನೀನೊಬ್ಬನೇ—

ಅಂಭಿ :

ಆ್ಹಂ !....ಸಮ್ರಾಟ್.....ಅವನನ್ನು ಹೊಗಳುತ್ತಿದ್ದೀರಿ !!!

ಅಲೆಕ್ಸಾಂಡರ್ :

ಆದರೆ ಮುಖಸ್ತುತಿಯಲ್ಲ ಅಂಭಿರಾಜ ! ಸ್ವಲ್ಪ ಆಯತಪ್ಪಿದರೆ, ಪೌರವ ರಾಜನೇ ಈ ಅಲೆಕ್ಸಾಂಡರನನ್ನು ಪೆಪೆಮುರಿಗೆ ಕಟ್ಟಿಸಿ ತನ್ನೆದುರು ನಿಲ್ಲಿಸಿಕೊಳ್ಳುತ್ತಿದ್ದ ಎಂಬುದನ್ನು ಅರಿತುಕೊಂಡು ಹೇಳು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತಿದೇನೆ.....(ಪೌರವನನ್ನು ನಿಟ್ಟಿಸಿ ನೋಡುತ್ತ) ಘೋರ ಮೃಗದಂತೆ ಕಾದಾಡಿದೆ, ವೀರಪೌರವ!....ಅದ್ಭುತ ಯುದ್ಧವಿದ್ಯೆಯ ಅಂವನ್ನು ಮಾಡಿಕೊಟ್ಟೆ ನನಗೆ! ವೇದಭೂಮಿಯಾದ ಭಾರತ, ಅಲೆಕ್ಸಾಂಡರ ನನ್ನೇ ಮುರಿಯುವಂತಹ ಕ್ಷಾತ್ರಭೂಮಿಯೂ ಹೌದೆಂದು ನಡೆದು ತೋರಿದೆ; ನುಡಿದು ತೋರುತ್ತಿದ್ದೀಯೇ!

(ಈ ಎಡೆಯಿಂದ ಆ ಎಡೆಗೆ ನಡೆಯುತ್ತಾನೆ)

(ತಡೆದು) ನಿಜವಾಗಿ ಹೇಳುತ್ತೇನೆ ಪೌರಸ್, ಅರ್ಬೆಲಾ ಮಹಾಸಮರದಲ್ಲಿ ಘಾರ್ಸಿ ಸಾಮ್ರಾಜ್ಯವನ್ನು ಮಣ್ಣು ಮುಕ್ಕಿಸಿದಾಗಲೂ ನನಗಿಂತಹ ಆನಂದ, ಹೆಮ್ಮೆ ಆಗಿರಲಿಲ್ಲ! ವೀರನಿಗೆ ಹೆಮ್ಮೆ ಎನಿಸಬೇಕಾದರೆ ತನಗೆ ಸಮಬಲನಾದ ವೀರನನ್ನು ಎದುರಿಸಿದಾಗಲೇ ಹ! —ಎಂತಹ ಅಪೂರ್ವವಾದ ಆನಂದ!! ನನ್ನ ಈ ಜೀವನದಲ್ಲಿ ಒಮ್ಮೆಯೇ ಬಂದುದು ಅಂತಹ ಆನಂದ....ರಣರಂಗದಲ್ಲಿ ನಿನ್ನನ್ನು ಕಂಡಾಗ!

ಪೌರವ:

(ನಿಧಾನವಾಗಿ) ಅದು ನನ್ನದೂ ಪುಣ್ಯ....ಸಿಕಂದರ್!

ಅಲೆಕ್ಸಾಂಡರ್:

ಇನ್ನೂ ಹೇಳಲೆ? ಬಿರುಗಾಳಿಯಂತೆ ಬೀಸಿಬಂದ ನನ್ನ ಸೈನ್ಯ.... ಎಂದೂ ಯಾರಿಗೂ ಮಣಿದು ನಿಲ್ಲಲಿಲ್ಲ. ಇಲ್ಲಿಯೂ ಮೊದಲು ನಿನ್ನ ನಾಡಿನ ರಾಜರೂ ಸಿಕಂದರನ ಹೆಸರು ಕೇಳಿಯೇ ನಡುಗಿ ಕಾಣಿಕೆ ಒಪ್ಪಿಸಿ, ಸ್ವಾಗತ ನೀಡಿದರು.

ಪೌರವ:

(ಅಂಭಿಯನ್ನು ಕಡೆಗಣ್ಣಿನಿಂದ ನಿಟ್ಟಿಸುತ್ತ) ಈ ಮಾತಿಗೆ ಅಂಭಿರಾಜ ಸಾಕ್ಷಿ —ನುಡಿಯುತ್ತಿದಾನೆ!

ಅಲೆಕ್ಸಾಂಡರ್:

ಹ....ಹ...ನಮಗಾಗಿ ತಕ್ಷಶಿಲೆಯ ಹೆಬ್ಬಾಗಿಲು ತೆರೆಯಿತು. ಆದರೆ, ನನ್ನ ಮಹಾ ಸೈನ್ಯವನ್ನು, ನಿನ್ನಿಂದ ಸಹಾಯಪಡೆದು ಉತ್ತೇಜನ

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಗೊಂಡ ಪಶ್ಚಿಮಗಾಂಧಾರದ ಕೆಚ್ಚೆದೆಯ ವೀರರು ಮೂವತ್ತು ದಿನಗಳ ವರೆಗೆ ತಡೆದು ನಿಲ್ಲಿಸಿದರು. ಅಂದೇ ನಿನ್ನ ಬಗೆಗೆ ನನಗೆ ಗೌರವ ಮೂಡಿತು ಪೋರಸ್. ಒಂಟಿಯಾದರೂ, ನೀನು ನನ್ನನ್ನು ಎದುರಿಸಿ ನಿಲ್ಲುವೆ ಎಂಬುದು ಖಚಿತವಾದಾಗ, ನಿನ್ನ ನಿಲುವಿನ ಬಗೆಗೆ ಆಶ್ಚರ್ಯವೇ ಆಯಿತು. ನಿನ್ನ ವೀರ ಚತುರಂಗ ಸೇನೆಯನ್ನು ಕಂಡಾಗ, ಮೊದಲಬಾರಿಗೆ ನನ್ನ ಸೈನ್ಯದ ಬಗೆಗೆ ಕಳವಳವುಂಟಾಯಿತು. ಸೇನೆಯ ಮುನ್ನೆಡೆಯಲ್ಲಿಯೇ ನಿಂತು ನೀನು ತೋರಿದ ಕೆಚ್ಚೆದೆಯ ರಣವಿಕ್ರಮವನ್ನು ನೋಡಿ ಮೈ ಜುಮ್ಮೆನ್ನುತ್ತಿತ್ತು...ನಿನ್ನ ಧೈರ್ಯ ನಿನ್ನ ದೇಶಭಕ್ತಿ, ಸಿಕಂದರನಿಗೂ ಪಾಠ ಹಾಕಿ ಕೊಡುವಂತಹುದು ಪೌರಸ್.

(ಆ ಎಡೆಯಿಂದ ಈ ಎಡೆಗೆ ಗಂಭೀರವಾಗಿ ನಡೆಯುತ್ತಾನೆ.)

ಅಂತಹ ಘಾಸಿ ಚಕ್ರವರ್ತಿಯೂ ಅರ್ಬಲಾ ಅಪಜಯವಾದ ಮೇಲೆ ನಸುಗತ್ತಲಲ್ಲೇ ತಲೆತಪ್ಪಿಸಿಕೊಂಡು ಕಾಲಿಗೆ ಬುದ್ಧಿ ಹೇಳಿದ. ಆದರೆ ನೀನು !! ಸೋತರೂ, ದಿಟ್ಟನಾಗಿ, ನನ್ನೊಂದಿಗೆ ಕತ್ತಿಕಾಳಗ ಬಯಸಿ, ನನ್ನ ತಾಣ್ಯದ ಕಾವಲು ಯೋಧನ್ನು ತರಿದೊಟ್ಟಿ, ನನ್ನ ಮುಂದೆ ನಿಂತಿದ್ದೀಯೇ....ಆದರೆ ಹಹ....ಮರೆಯಬೇಡ ಪೋರಸ್, —ನೀನೀಗ ನನ್ನ ಬಂದಿ. ನಿನ್ನನ್ನು ಹೇಗೆ ನಡೆಸಿಕೊಳ್ಳಲಿ ಹೇಳು—

ಪೋರಸ್ :

(ಗಂಭೀರನಾಗಿ) ಒಬ್ಬ ಸಾಮ್ರಾಟ್ ಮತ್ತೊಬ್ಬ ಸಮ್ರಾಟನನ್ನು ನಡೆಸಿ ಕೊಳ್ಳುವಂತೆ.

ಅಂಭಿ :

ಅಬ್ಬ !....ನಾನಾಗಿದ್ದರೆ—(ಹಲ್ಲು ಕಡಿಯುತ್ತಾನೆ)

ಅಲೆಕ್ಸಾಂಡರ್ :

ನಿನ್ನ ವೀರಕ್ಕೆ ಬೆರಗಾಗಿದ್ದೇನೆ ಪೋರಸ್ ! ಹ ! ನಿನ್ನೊಂದಿಗೆ ಕತ್ತಿ ಕಾಳಗವಾಡುವುದಿಲ್ಲ ನಾನು ! ಬೇಕೆನಿಸಿದರೆ ನಾನು ನಿನ್ನೆದುರು

CC-O. In Public Domain. Digitized by eGangotri

ಸೋತೆನೆಂದು ಭಾವಿಸು....ನನಗೆ ಕಾಣುವಂತೆ, (ನಿಟ್ಟುಸುತ್ತಾ) ನನ್ನ ದೇಹದ ಮೇಲೆ ಒಂಭತ್ತು ಗಾಯಗಳಿವೆ. ರಕ್ತ ಒಸರುತ್ತಿರುವ ಅವುಗಳನ್ನು ಒರೆಸಿ, ನಿನ್ನ ಶುಶ್ರೂಷೆ ಮಾಡುವ ಆಸೆ ನನಗೆ ! ಇಂತಹ ವೀರ ಪ್ರಶಸ್ತಿಗಳನ್ನು ಗಳಿಸಿದ ನಿನಗೆ ಇದೋ ಈ ಅಲೆಕ್ಸಾಂಡರ್ ತಲೆ ಬಾಗುತ್ತಾನೆ ! (ಎದೆಯ ಮೇಲೆ ಕೈ ಇಟ್ಟು ಮುಂದಿಯೂರುತ್ತಾನೆ)

ಪೋರಸ್ ;

ಓಹ್....! ಇದೀಗ ನನ್ನನ್ನು ನಿಜವಾಗಿ ಸೋಲಿಸುತ್ತಿದ್ದೀಯೆ ಸಿಕಂದರ್.

ಅಲೆಕ್ಸಾಂಡರ್ :

ಇಲ್ಲ ! ನಿನ್ನ ಧೃತಿಗೆ, ಕೆಚ್ಚಿಗೆ ಮಾರುಹೋಗಿದ್ದೇನೆ ಪೋರಸ್ ! ನಿನ್ನಿಂದ ಪ್ರೇಮಬಂಧ ಬಯಸುತ್ತೇನೆ....ಬಾ ಪೋರಸ್. ಒಬ್ಬ ವೀರ ಇನ್ನೊಬ್ಬ ವೀರನನ್ನು ಅಪ್ಪಿಕೊಳ್ಳಲಿ.

ಪೋರಸ್ :

ಸಿಕಂದರ್ !! (ತೊಳತಿಕ್ಕಿಯೊಳಗಾಗುತ್ತಾರೆ)

ಅಲೆಕ್ಸಾಂಡರ್ :

(ಅಪ್ಪಿಕೊಂಡಂತೆಯೇ ಪೋರಸನ ಬೆನ್ನು ತಟ್ಟುತ್ತ) ವೀರರ ಈ ಪ್ರೇಮ ಬಂಧ ನಿತ್ಯ ಬಂಧವಾಗಲಿ—ಈ ಬಂಧ ಎಂದೂ ಬಿಚ್ಚದಿರಲಿ.... ಇನ್ನು ನಾವು ವೀರಸೋದರರು ಪೋರಸ್. ಭಾರತದಲ್ಲಿ ನಾನು ಜಯಿಸಿದ ಸಾಮ್ರಾಜ್ಯವನ್ನೆಲ್ಲ ನನಗಾಗಿ ನೀನು ಆಳಬೇಕು—ಇಲ್ಲ ಎನ್ನಕೂಡದು—

ಅಂಭಿ :

(ತಿರುಗುತ್ತ-ಮುನಿಸಿನಿಂದ) ಓಹ್ ! ನನಗಿನ್ನು ಇಲ್ಲಿ ಕೆಲಸವಿಲ್ಲ.

ಪೋರಸ್ :

ನಿಲ್ಲು ಅಂಭಿರಾಜ. ನಿನ್ನೆದುರಿನಲ್ಲಿ ವೀರ ಸಿಕಂದರನಿಗೆ ಒಂದು ಮಾತು ಹೇಳಬೇಕಾಗಿದೆ.

CC-O. In Public Domain. Digitized by eGangotri
ಜಾಗೃತ-ಭಾರತೀ

ಅಂಭಿ :

ಏನದು—?

ಪೋರಸ್ :

ಕೇಳು ಸಿಕಂದರ್, ಒಂದೆ ನೆಲದ ಮಕ್ಕಳಾದ ನಮ್ಮಿಬ್ಬರಲ್ಲಿ, ಈಗ ನೀನು ನನ್ನೊಡನೆ ಬೆಸೆದಂತಹ ಪ್ರೇಮಬಂಧವಿದ್ದಿದ್ದರೆ, ನೀನೆಂದೂ ಭಾರತದ ಹೊಸ್ತಿಲನ್ನು ದಾಟಿ ಒಳಬರಲು ಸಾಧ್ಯವಾಗುತ್ತಿರಲಿಲ್ಲ.... ದೇಶದ ದುರದೃಷ್ಟದಿಂದ ಅದು ಆಗದ ಮಾತಾಯಿತು....ಆದರೆ ನನ್ನ ಅದೃಷ್ಟದಿಂದ ಲೋಕೈಕ ವೀರನಾದ ನಿನ್ನನ್ನು ಕಾಣುವಂತಾಯಿತು.

ಅಲೆಕ್ಸಾಂಡರ್ :

ಒಪ್ಪಿಕೊಳ್ಳುತ್ತೇನೆ ಪೋರಸ್. ನಿನ್ನ ಮಾತು ಸತ್ಯವಿರಬೇಕು. (ಭಾವಿಸುತ್ತ) ತಕ್ಷಶಿಲೆಯ ಬಾಗಿಲನ್ನು ನನಗಾಗಿ ತೆರೆದಿಡದೆ, ಅಂಭಿ ರಾಜನು ನಿನ್ನೊಡನೆ ಕೂಡಿ ನನ್ನನ್ನು ಎದುರಿಸಿ ನಿಂತುಬಿಟ್ಟಿದ್ದರೆ !? ಓಹ್! ಪರ್ಷಿಯಾವನ್ನು ಮಣ್ಣು ಮುಕ್ಕಿಸಿದ ಸಿಕಂದರ್, ಭಾರತದಲ್ಲಿ ಸೋತು ಹಿಂತಿರುಗಬೇಕಾಗಿತ್ತೋ ಏನೋ !

ಅಂಭಿ :

ಆಂ....?...ಓ—ಏನು ಹೇಳಲಿ ಸಮ್ರಾಟ್ ! ತನ್ನ ನೆಲದ ಇತರ ಮಕ್ಕಳೊಡನೆ ಪೌರವ ದೊರೆಗೆ ಇಂತಹ ಅಭಿಮಾನ ಇದ್ದೀತೆಂದು ನನಗೆಂದೂ ಹೊಳೆದಿರಲಿಲ್ಲ.

ಅಲೆಕ್ಸಾಂಡರ್ :

ವೀರ ಪೋರಸನ ಮಾತು, ಇಂದಿನ, ಮುಂದಿನ ಭಾರತಕ್ಕೆ ಅರಿವಾಗಲಿ ; ಎಚ್ಚರಿಕೆಯಾಗಲಿ—ಅಂಭಿರಾಜರೆ ! ಸಣ್ಣ ವಿಷಯಗಳಲ್ಲಿ ಒಡಕು ಹುಟ್ಟಿ, ದ್ವೇಷ ಬೆಳೆದು, ಜನತೆಯು ಒಕ್ಕುಟ್ಟು ಮುರಿಯಿತೆಂದರೆ, ಎಂತಹ ಮಹಾನ್ ರಾಷ್ಟ್ರವಾದರೂ ಮೂರನೆಯವರಿಗೆ ಮಣಿದು ಮಣ್ಣುಗೂಡಿಹೋಗುತ್ತದೆ....ಒಂದು ದೇಶದ ಜನ, ನಾನು, ನೀನು, ಅವನು ಎನ್ನದೆ 'ನಾವು' ಎಂದಾಗಲೇ ಮೂರನೆಯವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದೆ ಬರಲು ಅಂಜುತ್ತಾನೆ....ಹಂ ! ಬಾ ಪೋರಸ್, ದಣಿದ ನೀನು ಇಂದು ನನ್ನ ಡೇರೆಯಲ್ಲಿಯೇ ವಿಶ್ರಮಿಸಿಕೊಳ್ಳಬೇಕು.... ಅನ್ನಿ ಅಂಭಿರಾಜ—

(ಎಂದು ನಡೆಯುತ್ತಿರುವಂತೆ, ಮತ್ತೊಮ್ಮೆ ತುತೂರಿ ಮೊಳಗುತ್ತದೆ. ಹಿನ್ನೆಲೆಯ ಪರದೆ ಮುಚ್ಚಿಕೊಳ್ಳುತ್ತದೆ. ಮುನ್ನೆಲೆಯಲ್ಲಿ ಬೆಳಕು ಮೂಡುತ್ತದೆ. ರಂಗದ ಅಂಚಿನಲ್ಲಿ ನಿಂತು ಒಳರಂಗವನ್ನು ವೀಕ್ಷಿಸುತ್ತಿದ್ದ ಪಾತ್ರಗಳು ಮತ್ತೆ ಕುರ್ಚಿಗಳೊಡನೆ ಮುಂದೆ ಬಂದು ಅಳವಡಿಸಿಕೊಂಡು ಕೂಡುತ್ತಾರೆ.)

ಭಟ್ಟರು :

ಹಂ ! ನಿಜ, ನಮ್ಮ ಮಾಸ್ತರು ಹೇಳಿದಹಾಗೆ, ಜಾತಿ ವ್ಯಾಮೋಹ, ಭಾಷಾ ವ್ಯಾಮೋಹ, ನೆಲದ ವ್ಯಾಮೋಹ, ಎಲ್ಲಿ ಬಲವಾಯಿತೋ ಅಲ್ಲಿಯೇ ಕೆತ್ತಾಟ ! ಗಳಿಸಿದ್ದೆಲ್ಲ ಮೂರಾಬಟ್ಟೆ. ಮೂರನೆಯವನಿಗೆ ಮುಕ್ಕಾಲು ಮೀಸಲು !

ಮಾಸ್ತರು :

ಹ ! ಇಂತಹ ವ್ಯಾಮೋಹಗಳು ಇರಕೂಡದು ಅಂತ ಹೇಳೋದು ಸಾಧ್ಯವಿಲ್ಲ. ಯಾಕೆ ಅಂದರೆ, ಆಯಾ ವ್ಯಾಮೋಹಗಳೇ ಜನವನ್ನು ಒಂದಾಗಿ ಬಂಧಿಸಿರುತ್ತವೆ. ಆದರೆ ಆ ವ್ಯಾಮೋಹ ಇನ್ನೊಂದು ಜಾತಿಯನ್ನು, ಭಾಷೆಯನ್ನು, ನಡೆಯನ್ನು ತೆಗಳುವಷ್ಟು ಬಲಿತು ಕೊಳ್ಳಕೂಡದು.

ಭಟ್ಟರು :

ಅಲ್ವೇ ಮತ್ತೆ !

ಮಾಸ್ತರು :

ಈ ವ್ಯಾಮೋಹ ಅತಿಯಾಗಿ ಬೆಳೆದು ದೇಶದಲ್ಲಿ ಒಡಕು ಹುಟ್ಟಿಬಿಟ್ಟರೆ, ಒಡಕು ಹುಟ್ಟಿಸಿದವರಷ್ಟೇ ನಾಶವಾಗುವುದಿಲ್ಲ—ರಾಷ್ಟ್ರವೇ ಅದಕ್ಕೆ ತರ್ಪಣವಾಗಿ ಹೋಗುತ್ತದೆ.

ಚಿಕ್ಕತ್ತೆ :

ಹೂಂ ಮತ್ತೆ ! ಅದೇ ಏನೋ ಹೇಳ್ತಿರಲ್ಲಾ—

CC-O. In Public Domain. Digitized by eGangotri

ಭಟ್ಟರು :

(ತಟಕ್ಕನೆ) ಕುಂಬಾರನಿಗೊಂದು ವರುಷ, ದೊಣ್ಣೇಗೆ ಒಂದು ನಿಮಿಷ ಅಂತತಾನೇ ?

ಚಿಕ್ಕತ್ತೆ :

ಹೂಂ.....ಹಾಗೂ ಅನ್ನಬಹುದು ಅನ್ನಿ. ಹಳೇ ಗಾದೆ ! ಹೊಸ ವೈದ್ಯನಿಗಿಂತ ಹಳೇ ರೋಗಿ ವಾಸಿ ಅನ್ನೋಹಾಗೆ, ಪರವಾಯಿಲ್ಲ.... ಹಳೇದಾದರೇನು ಹುಳಿ ಕಡಿಮೆಯೆ ?

ರಾಯರು :

ಅದು ಸರೀ— ಇನ್ನೇನೋ ಹೇಳ್ತಿದ್ದಿರಿ ನೀವು–ಇವರ ಈ ಸಿಕಂದರ್ —ಪೋರಸ್ ದೃಶ್ಯ ಬರೋಕೆ ಮುಂಚೆ !

ಮಾಸ್ತರು :

ಏನಂತ....?

ರಾಯರು :

ಅದೇ ಏನೋ ಇಸ್ವಿ ಹೇಳಿದಿರಿ ಅಶೋಕನ ಕಾಲಕ್ಕೆಂತ ಹಿಂದೆ— ಕ್ರಿಸ್ತ ಪೂರ್ವ ೩೨೭ ಅಂತ.

ಮಾಸ್ತರು :

ಹಯ್ಯ ! ಇದೇ ಸಿಕಂದರನ ಕಥೇನೇ ಹೇಳೋದಕ್ಕೆ ಹೊರಟದ್ದು ನಾನು ! ಸಮಯಕ್ಕೆ ಸರಿಯಾಗಿ ನಿಮ್ಮ ಮೋಹನ ಅದೇ ದೃಶ್ಯದ ರಿಹರ್ಸಲ್ ಹೊಡೆಸಿದ ! ಕಾಕತಾಳನ್ಯಾಯ !

ಚಿಕ್ಕತ್ತೆ :

ಹರೇ ಅನ್ನೋ ಹೊತ್ತಿಗೆ ಸರಿಯಾಗಿ ಬರೇಬಿತ್ತು ಅಂತಾರಲ್ಲ ಹಾಗೆ.

ಭಟ್ಟರು :

ಶಿವಶಂಕರ !

CC-O. In Public Domain. Digitized by eGangotri

ರಾಯರು :

ಅದು ಸರೀ—ಮಕ್ಕಳಿಗೆ ಹೇಳೋ ಹಾಗೆ ಆ ಅಲೆಕ್ಸಾಂಡರ್, ಅವರಿಬ್ಬರಿಗೆ ಹೇಳಿದನಲ್ಲಾ—ಶಾಂತಿ ಪಾಠ, ಒಕ್ಕಟ್ಟಿನ ಪಾಠ, ಅದನ —

ಮಾಸ್ತರು :

ಭಾರತದ ಜನ ಕಿವೀಮೇಲೆ ಹಾಕಿಕೊಳ್ಳದೆ ಇನ್ನೂ ತಮ್ಮುದನ್ನೆಲ್ಲ ಮುಂದೆಯೂ ಕಳೆದುಕೊಂಡರು !

ಭಟ್ಟರು :

ಛೆ ! ಛೆ ! ಛೆ ! ಛೆ !

ಮಾಸ್ತರು :

ಅಷ್ಟೆಲ್ಲ ಹೇಳಿ, ಆ ಸಿಂಕದರ್....ಮುಂದೆ ರಾವೀನದಿಯನ್ನು ದಾಟಿ ಬೀಯಾಸ್ ತೀರಕ್ಕೆ ಬರೋದೇ ತಡ, ಚಂದ್ರಗುಪ್ತ—ಮೌರ್ಯ ಅಂತ, ಅವನೊಬ್ಬ, ಮಗಧವನ್ನಾಳ್ತಾ ಇದ್ದ ತನ್ನ ದಾಯಾದಿ ನಂದರ ಮೇಲೆ ಚಾಡಿಚುಚ್ಚೋದಕ್ಕೆ ಕಾದುನಿಂತಿದ್ದ. ಮಗಧದ ಪುಣ್ಯಕ್ಕೆ, ಅಷ್ಟರಲ್ಲೇ ಯವನ ಸೈನ್ಯದಲ್ಲಿ ಮುಷ್ಕರ ಗಲಾಟೆ ಆಗಿ, ಸಿಕಂದರ್ ಹಿಂದಿರುಗಿ ಹೋಗಬೇಕಾಯಿತು.

ಪಾತಮ್ಮ :

ಅಯ್ಯಯ್ಯೋ ! ಇಲ್ಲದೇ ಇದ್ದರೆ ಆ ಸಿಕಂದರ್ ನಮ್ಮೂರವರೆಗೂ ಬಂದೇ ಬಿಡ್ತಿದ್ದನೋ—ಏನೋ !

ರಾಯರು :

ಏನೂ ಹೆದರಬೇಡ ! ಬಂದಿದ್ದರೂ ಇಷ್ಟು ಹೊತ್ತಿಗೆ ಹೆದರಿಕೊಂಡು ಹೊರಟುಹೋಗ್ತಿದ್ದ—ನಮ್ಮ ಭಟ್ಟರನ್ನ ನಮ್ಮ ಚಿಕ್ಕತ್ತೀನ ನೋಡಿದ ತಕ್ಷಣ !

ಭಟ್ಟರು :

ಶಿವಶಂಕರ !!

CC-O. In Public Domain. Digitized by eGangotri

ಚಿಕ್ಕತ್ತೆ :

ಆ್ಹಂ ? ಏನೂ ಶಾಮೀ ಅದೂ ? ಹುಚ್ಚನ್ನ ಕಡಂರೆ ಪೆಚ್ಚನಿಗೆ ಹಾಸ್ಯ — ಅಂತ !!

ಮಾಸ್ತರು :

(ತಡೆದು) ಸಿಕಂದರ್ ಬರದೇ ಇದ್ದರೆ ಏನು ! ಮುಂದೆ ಬೇಕಾದ ಹಾಗೆ ಹೊರಗಿನ ಜನ ಇಲ್ಲೀವರೆಗೂ ನುಗ್ಗಿ ಸೂರೆ ಹೊಡೆದರಲ್ಲ.

ಚಿಕ್ಕತ್ತೆ :

ಬಿರುಕು ಇದ್ದ ಕಡೆ ನೀರು ನುಗ್ಗೇನುಗ್ಗುತ್ತೆ.

ಮಾಸ್ತರು :

ಬಿಟ್ಟೀತೆ ! ಮಿಲಿಂದರು, ಪಹ್ಲವರು, ಆಮೇಲೆ ಕುಶಾನರು, ಆಫ್ಘಾನಿಸ್ಥಾನದ ಘಜ್ನಿ, ಘೋರಿಗಳು ಎಲ್ಲ ನುಗ್ಗಿ ಬಂದರು, ಇಲ್ಲೇ ನೆಲಸಿದರು

ಭಟ್ಟರು :

ಯಾರೂ ತಡೀಲೇ ಇಲ್ಲವೆ ಆ ಘೋರಪಿಡುಗುಗಳನ್ನ ?

ರಾಯರು :

ಯಾಕೆ—ರಾಜಪೂತರು ಇದ್ದರಲ್ಲ !

ಮಾಸ್ತರು :

ಹಯ್ಯೋ ! ನಿಜವಾಗಿ, ರಜಪೂತ ಜನಾಂಗ ಅಂದರೆ, ಭಾರತದ ವೀರ ತೇಜಸ್ಸಿಗೆ ತಿಲಕವಿಡುವಂತಹ ಜನಾಂಗ ! ಆದರೆ ಅವರಲ್ಲೇ ತಿಸ್ರ — ತಿಕ್ಕಾಟ ! ಎಲ್ಲರೂ ವೀರರು, ಮಹಾ ದೇಶಾಭಿಮಾನಿಗಳು ಆದರೂ ಅವರಲ್ಲಿನ ಅನೈಕಮತ್ಯದಿಂದ ದೇಶ ಹೋಳು ಹೋಳಾಗಿ ಹೊರಗಿನವರಿಗೆ ಹಂಚಿಹೋಯಿತು !—ಎಲ್ಲರೂ ವೀರರು—ಆದರೆ ಇಬ್ಬರು ವೀರರು ಒಟ್ಟಾಗಿ ನಿಲ್ಲಲಿಲ್ಲ ! ಯಾಕೆ—ಸಂಯುಕ್ತಾ ಕತೆ ಕೇಳಿರಬೇಕಲ್ಲ !

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಪಾತಮ್ಮ :

ಹಂ ! ಅದೇ ಯಾವನೋ ರಾಜನ ಮಗಳನ್ನ ಇನ್ಯಾರೋ ಎತ್ತಿ ಕೊಂಡು ಬಂದುಬಿಟ್ಟ—ಅಂತ—ಆಕೆ ತಾನೇ !

ರಾಯರು :

ಈಗ ಬರೋ ನಿನ್ನ ಸೊಸೆ ಹೆಸರೂ—ಸಂಯುಕ್ತ ಅಂತ ಇಲ್ಲದೆ ಇದ್ದರೆ ಸಾಕಾಗಿದೆ.

ಪಾತಮ್ಮ :

ಸರಿ—ನೀವು ಬಿಡಿ !

ಮಾಸ್ತರು :

ಅನ್ಯಾಯದ ಕತೆ ಅದು !....ಕನೂಜನಲ್ಲಿ ಜಯಚಂದ್ರ–ಅಜ್ಮೀರದಲ್ಲಿ ಪೃಥ್ವಿರಾಜ ! ಮಹಾ ಶೂರರಾದ ಈ ರಾಜಪುತ್ರ ದೊರೆಗಳಲ್ಲಿ ನೀಗದ ಬದ್ಧದ್ವೇಷ ! ಜಯಚಂದ್ರನ ಮಗಳೇ ತ್ರಿಲೋಕಸುಂದರಿ ಎನ್ನಿಸಿಕೊಂಡಿದ್ದ ಸಂಯುಕ್ತಾ ! ತನ್ನ ತಂದೆ, ಪೃಥ್ವಿರಾಜನ ವಿಷಯವನ್ನು ಕೆರಳೀ ಕೆರಳೀ ಹಲ್ಲು ಕಚ್ಚಿ ಹೇಳುತ್ತಿದ್ದ ವಿವರಗಳನ್ನ ಕೇಳೀ ಕೇಳೀ ಆಕೆ ಪೃಥ್ವಿರಾಜನಲ್ಲೇ ಅನುರಕ್ತಳಾಗಿಬಿಟ್ಟಳು. ಆದನ್ನು ತಿಳಿದ ಪೃಥ್ವಿರಾಜ, ಆಕೆಯನ್ನ ಎತ್ತಿಕೊಂಡು ಓಡಿ ಬಂದ ಮೇಲೆ ಮೊದಲೇ ಮಸೆಯುತ್ತಿದ್ದ ವೈರ ಈಗ ಭುಗಿಲೆದ್ದಿತು ! ಇದೇ ಸಮಯ ಕಾಯುತ್ತಿದ್ದ ಮಹಮ್ಮದ್ ಘೋರಿ—ಅಂತ, ಅವನು ಸೈನ್ಯ ತಂದು ಮೊದಲು ಪೃಥ್ವಿರಾಜನ್ನು, ಆಮೇಲೆ ಮೂರು ವರ್ಷ ಬಿಟ್ಟು ಜಯಚಂದ್ರನ್ನ ಬೇರೆ ಬೇರೆಯಾಗಿ ಕಬಳಿಸಿ ನೀರು ಕುಡಿದು ಬಿಟ್ಟ.

ಪಾತಮ್ಮ :

ಸಂಯುಕ್ತೆ—?

ಮಾಸ್ತರು :

ಬೆಂಕೀಪಾಲು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಶಿವಶಂಕರ !

ಚಿಕ್ಕತ್ತೆ :

ಮತ್ತಿನ್ನೇನು ಮಾಡಬೇಕು ಅವಳು ! ತಂದೆ ಅಂದರೆ ಕೊಂದೇ ಅಂತಾನೆ ಅವರಪ್ಪ !

ಮಾಸ್ತರು :

ಇಂತಹ ನೂರು ಕತೆಗಳು ನಮ್ಮ ಎರಡು ಸಾವಿರ ವರ್ಷದ ಇತಿಹಾಸದಲ್ಲಿ ಸಿಕ್ಕುತ್ತವೆ. ಅವರು ಹೇಳಿದರಲ್ಲ—ಬಿರುಕು—ಬಿಟ್ಟಕಡೆ ನೀರು ನುಗ್ಗುತ್ತೇ ಅಂತ, ಹಾಗೇ, ಬೇಕೂ ಅಂತಲೆ ದೇಶದಲ್ಲಿ ಬಿರುಕು ಬಿಡಿಸುವಂತಹ ರಾಷ್ಟ್ರಘಾತಕರಿಗೂ ಏನೂ ಕಡಿಮೆ ಇಲ್ಲ ನಮ್ಮ ದೇಶದಲ್ಲಿ. ಅದೂ ದಕ್ಷಿಣ ಭಾರತ ಅಂತೂ—ಅನೈಕ್ಯತೆಯ ಕೇಂದ್ರಸ್ಥಾನ ! ಅದಕ್ಕೇ ಮಾಲಿಕ್‌ಕಾಫರ್, ಅಲ್ಲಾಉದ್ದೀನ್ ಖಿಲ್ಜಿ ಬಂದು ಲೂಟಿ ಹೊಡೆದುಬಿಟ್ಟರು. ಆಮೇಲೆ ತೊಗೊಳ್ಳಿ—ಪೋರ್ಚುಗೀಸರು, ಫ್ರೆಂಚರು, ಇಂಗ್ಲೀಷರು—

ರಾಯರು :

ಈಗ, ತಲೆತಲಾಂತರದಿಂದ ನಮ್ಮ ಗೆಳೆಯರು—ಎಂದುಕೊಳ್ಳುತ್ತಿದ್ದ ಚೀನಿಯರು !

ಭಟ್ಟರು :

ಅದೇೀ—ಪಾಪ, ಪಕ್ಕದ ಮನೆಯವರು—ಹತ್ತಿರದವರೂ ಅಂತ ನಾವೂ ಅವರನ್ನ ಅದೇನೋ ಬೈ—ಬೈ—ಅಂತ ತಂದು ಕೂರಿಸಿ ಕೊಂಡರೇೀ—

ರಾಯರು :

ಛೆ ಛೆ ! ಭಾಯೀ....ಭಾಯೀ ಅಂತ ನಾವು ಅಂದದ್ದು. ನಂಬಿಕೆ ದ್ರೋಹ ಮಾಡೀೀ—ಬೈ ಬೈ ಅಂದವರು ಅವರು.

ಭಟ್ಟರು :

ಹಂ ! ಅದೇ—ಅದೇ ! ನೋಡಿ ಎಂತಹ ಅನ್ಯಾಯವಾಯಿತು. ನೆರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯವರು-..ಎಂದಿದ್ದರೂ ನಮ್ಮ ನೆರವಿಗೆ ಬರ್ತಾರೆ ಅಂತ ನಾವು ನಂಬಿ ಕೊಂಡಿದ್ದರೇ—

ಚಿಕ್ಕತ್ತೆ :

ನೆರೆಯವರೇ ಹೊರೆಯಾಗಿ ಹೇರಿಕೊಂಡರಲ್ಲ-ನಮ್ಮ ಮೇಲೆ ! ಹೇಳ್ತಿರ್ತಾನೆ ನಮ್ಮ ಮೋಹನ—ನಾವು ಹಾವಿಗೆ ಹಾಲೆರದ ಕತೇನ !

ಮಾಸ್ತರು :

ನಿಜವಾದ ಮಾತು ! ಆದರೆ—ಅನುಮಾನ ಬರೋವರೆಗೂ ಮಾನಾ ಕೊಟ್ಟು ನಡೆಸಿಕೊಳ್ಳೊದೇ ರೀತಿ ಅಂತ ನಂಬಿ ನಡೀತಿರೋ ನಮ್ಮ ರಾಷ್ಟ್ರಕ್ಕೆ ಇಂತಹ ಪೆಟ್ಟು ಆಗಾಗ ಬಡಿದಿದೆ. ಆಗ ಮಾತ್ರ—ನಮ್ಮ ಸೌಜನ್ಯ—ಹೇಡಿತನವಲ್ಲ ಅನ್ನೋ ಪಾಠಾನ ಕಲಿಸಿಕೊಡಲೇ ಬೇಕಾಯಿತು. ಈಗಲೂ ಅಷ್ಟೇ ! ಚೀನಿದ್ರೋಹದ ಅರಿವಾದ ತಕ್ಷಣ ರಾಷ್ಟ್ರ ಪುರುಷ ಮೈ ಕೊಡವಿ—ಸಹಸ್ರಾಕ್ಷನಾಗಿ, ಸಹಸ್ರ ಬಾಹುವಾಗಿ, ಮೇಲೆದ್ದು ನಿಂತ. ದೊಡ್ಡದಾಗಿ ತೋರುತಾ ಇದ್ದ ನಮ್ಮಲ್ಲಿನ ಸಣ್ಣಪುಟ್ಟ ವ್ಯತ್ಯಾಸ, ವಿರಸ, ತಿಕ್ಕಾಟವೆಲ್ಲ ಇದ್ದಲ್ಲಿಯೇ ಅಡಗಿಹೋದವು. ದೇಶದ ಯೋಧರು—ಭುಜಕ್ಕೆ ಭುಜ ಕೊಟ್ಟು ವೈರಿಯ ಎದುರು ವೀರಾಟ್ಟಹಾಸ ಮಾಡಿದರು. ಕಲಿಗಳಾಗಿ ಹೋರಾಡಿದರು. ಅನೇಕರು ರಕ್ತದಲ್ಲಿ ಮೈಯನ್ನು ಈಡಾಡಿದರು—ಕಡೆಯ ಉಸಿರಿರುವವರೆಗೂ ಜೈಹಿಂದ್ ಅಂದರು ಇಂದೂ ವಜ್ರಕಾಯರಾಗಿ ಗಡಿ ಕಾಯ್ತಾ ರೆಪ್ಪೆ ಇಕ್ಕದೆ ನಿಂತಿದ್ದಾರೆ. ಅವರ ನಾಡಿಗಳಲ್ಲಿ ನಾನು ಭಾರತೀಯ-ನಾನು ಭಾರತೀಯ ಅನ್ನೋ ಒಂದೇ ತಾನ ಮಿಡೀತಿದೆ —ಹಾಗಿಲ್ಲವೆ, ನಾನು ಬಂಗಾಲಿ, ನೀನು ಪಂಜಾಬೀ ಅವನು ಮರಾಠೀ—ತಮಿಳ, ತೆಲುಗ, ಕನ್ನಡಿಗ ಅನ್ನೊ ಭೇದ ಅಲ್ಲಿ ಬರೋದಕ್ಕೆ ಸಾಧ್ಯವೆ—?

ಭಟ್ಟರು :

ಛೆ ! ಛೆ ! ಎಲ್ಲಾದರೂ ಉಂಟೆ ! ಆಗ ಮುಳುಗಿಹೋಗ್ತೇವೆ ಅಷ್ಟೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಅದಕ್ಕೇ! ಇಂದು ನಾವು ಒಂದು ಆಗದಿದ್ದರೆ ಉಳಿಗಾಲ ಇಲ್ಲ ಅನ್ನೋದು! ನಮ್ಮ ದೇಶದ ಮಹಾ ಇತಿಹಾಸದಿಂದ ಕಲೀಬೇಕಾ ದಷ್ಟು ಪಾಠಗಳನ್ನ ಇನ್ನೂ ನಾವು ಕಲೀಲಿಲ್ಲವೇನೋ ಅನ್ನಿಸುತ್ತೆ!

ರಾಯರು :

ನಿಜವೇ—?

ಮಾಸ್ತರು :

ಏನೋ! ಅನಿವಾರ್ಯವಾದ ಒತ್ತಡದಿಂದ ಭಾರತ, ತನ್ನ ಈಚಿನ ಇತಿಹಾಸದಲ್ಲಿ ಬೇರೆ ಬೇರೆ ತಿರುವಿನಲ್ಲಿ ಸಿಕ್ಕಿ, ತಿರುಗಿ, ಇದೀಗ ಒಂದು ನೆಲೆಗೆ ಬಂದು ಹತ್ತಿದೆ ಅನ್ನಿಸುತ್ತೆ. ಆದರೂ, ಈ ಮಹಾ ಉದ್ದಳತೆಯ ಬೃಹದ್ದೇಶ ಒಟ್ಟಾರೆ ನನ್ನದು—ಇಲ್ಲಿನ ಜನರೆಲ್ಲ ನನ್ನವರು ಎನ್ನುವ ತಿಳಿವಳಿಕೆ ಬಾರದ ಹಾಗೆ ಕಣ್ಣು ಮನಸ್ಸುಗಳನ್ನು ಕಟ್ಟಿಕೊಂಡು ಬಿಟ್ಟಿದೇವೇನೋ!

ರಾಯರು :

ಹಾಂ! ಪರಮಹಂಸರು ಹೇಳಿದ ಕತೆ—ಒಂದ್ಸಲ ಕೆಲಮಂದಿ ಕುರುಡರು—

ಭಟ್ಟರು :

ಹಾಂ! ಒಂದು ಆನೆಯನ್ನು ಮುಟ್ಟಿ—ಅದರ ಚಿತ್ರ ಕಲ್ಪಿಸಿ ಕೊಂಡರಂತೆ!

ಚಿಕ್ಕತ್ತೆ :

ಹಾಂ! ಗೊತ್ತು, ಅದರ ಕಾಲು ಮುಟ್ಟಿದವನು—"ಆನೆ ಕಂಬದ—ಹಾಗಿದೆ" ಅಂದನಂತೆ—ಹೊಟ್ಟೆ ಮುಟ್ಟಿದವನು—"ಅಲ್ಲ ಅದು ಗುಡಾಣ ಇದ್ದ ಹಾಗಿದೆ" ಅಂದ!

ಪಾತಮ್ಮ :

ಬಾಲ ಮುಟ್ಟಿದವನು ಪೊರಕೆ ಇದ್ದ ಹಾಗಿದೆ ಅಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಕಿವಿ ಮುಟ್ಟಿದವನು—'ಆನೆ, ಮೊರ ಇದ್ದ ಹಾಗಿದೆ' ಅಂದ.

ಮಾ'ತ್ರರು :

ಅರೆ ! ಹ್ಯಾಗೆ—ಈ ಕತೆ ಎಲ್ಲರಿಗೂ ತಿಳಿದಿದೆಯಲ್ಲ !

ಪಾತಮ್ಮ :

ಈ ಕತೇನ ದಿನಕ್ಕೆ ಎರಡು ಸರ್ತಿ ಆದರೂ ಹೇಳ್ತಾರಲ್ಲ ಇವರು—ಒಂದಲ್ಲ ಒಂದಕ್ಕೆ ಹೊಂದಿಸಿ.

ಚಿಕ್ಕತ್ತೆ :

ನಂ ಶಾಮಿ ! ಹೂಂ ! ಬಾಯಿ ಬಿಡಿಸಿದರೆ ಭುಸ್ ಅಂತೂ ಅಂತಾರಲ್ಲ ಹಾಗೆ ಈ ಕತೇನೇ ಯಾವಾಗಲೂ ಹೇಳ್ತಾನೇ ಇರ್ತಾನೆ ! ಇದೊಂದೇ ಕತೆ ಅವನಿಗೆ ಬರೋದು—(ಸುಸ್ತಾಗಿ ನಿಂತ ರಾಯರನ್ನು ನೋಡಿ ನಗುತ್ತಾರೆ)

ಮಾಸ್ತರು :

ಮತ್ತೆ ! ಈ ಕತೆಯ ಅರ್ಥ ತಿಳಿದುಬಿಟ್ಟಮೇಲೆ ತಾಪತ್ರಯ ಏನಿದೆ ? ನಮ್ಮ ಜೀವನದ ಅಂಕುಡೊಂಕೆಲ್ಲ ಸರಿಹೋಗಬೇಕಲ್ಲ !

ಭಟ್ಟರು :

ಅಂದರೆ ! ಪ್ರಕೃತ ಸಂದರ್ಭದಲ್ಲಿ— ?

ಮಾಸ್ತರು :

ಇಷ್ಟೆ ! ತಾಯಿ ಭಾರತಿ, ಅಂದರೆ ರಾಷ್ಟ್ರದೇವಿಯನ್ನು ಭಾವಿಸಿಕೊಳ್ಳುವ ಪೂರ್ಣದೃಷ್ಟಿಯನ್ನು ನಮ್ಮ ಯೋಧರಷ್ಟೇ ಅಲ್ಲ—ನಾವೂ—ಜನ ಸಾಮಾನ್ಯರೂ—ಬೆಳೆಸಿಕೊಳ್ಳಬೇಕೂ—ಅಂತ ಈಗ ನೋಡಿ, ದಕ್ಷಿಣದೋನೇ ದೊಡ್ಡವನು—ಉತ್ತರದೋನದ್ದೇ ಕಿತಾಪತಿ ಅಂತೀವಿ ! ಭಾಷೆಗಳನ್ನ ಆಧರಿಸಿ ರಾಜ್ಯಗಳ ನಿರ್ಮಾಣ ಆದ ಮೇಲಂತೂ, ನಮ್ಮ ಭಾಷೆಯೇ ಸರಿ, ಅದೇ ದೊಡ್ಡದು, ನಮ್ಮದೆಲ್ಲಾ ನಮಗೇ ಇರಲಿ—ಉಳಿದದ್ದೆಲ್ಲಾ ಹೇಗಾದರೂ ಹೋಗಲಿ ಅಂತ ಅನ್ನೊ ಕುರುಡು ಭಾವನೆಗಳೂ ಕೂಡ ಮೊಳಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಏಳ್ತಿವೆಯೇನೋ ಅಂತ ಭೀತಿ ಆವರಿಸುತ್ತೆ! ಅಂತಹ ಭಾವನೆಗಳನ್ನ ತೊಡೆದುಹಾಕವೆ ಇದ್ದರೆ, ಕಲಿತ ಇತಿಹಾಸದ ಪಾಠಕ್ಕೆ ಬೆಲೆ ಕೊಡಲಿಲ್ಲ; ನಡೆದು ಬಂದ ದಾರಿಯ ನಿಗಾ ಇಲ್ಲ ನಮಗೆ—ಅಂತ ಹೇಳಬೇಕಾಗುತ್ತೆ!

ರಾಯರು :

ಅಲ್ಲಸ್ಸ! ಸ್ಪಷ್ಟವಾಗಿ ಕೇಳಬೇಕೂ ಅಂದರೆ, ನಮ್ಮ ಭಾಷೆ ಆಡೋರ ಸಲುವಾಗಿ ನಮ್ಮ ರಾಜ್ಯ ಕಟ್ಟಿಕೊಂಡ ಮೇಲೆ 'ನಮ್ಮ ಪಾಡಿಗೆ ನಾವು' ಅಂತ ಯಾಕೆ ಇರಬಾರದು? ಇನ್ನೊಬ್ಬರ ಉಸಾಬರಿ ನಮಗೆ ಯಾಕೆ ಬೇಕೂ ಅಂತ!

ಮಾಸ್ತರು :

ಬೀಜ ಪ್ರಶ್ನೆ ಕೇಳಿದಿರಿ.....ಒಂದೇ ಮಾತಿನಲ್ಲಿ ಹೇಳಬೇಕಾದರೆ, 'ನಮ್ಮ ಪಾಡಿಗೆ ನಾವು' ಅನ್ನೋದು ಹಳೆಯ ಕಾಲದ ಕಂದಾಚಾರದ ಮಾತು. ಈ ಅಟಾಮಿಕ್ ಯುಗದಲ್ಲಿ ಅಂತ ಮಾತು ಗಾಳಿಯ ಗುಳ್ಳೆ! ಅನುದಿನದ ಜೀವನ ನಿರ್ವಹಣೆಗೆ ಕೂಡ ಒಬ್ಬರ ಜೊತೆ ಒಬ್ಬರು, ಒಂದು ರಾಜ್ಯದ ಜೊತೆ ಇನ್ನೊಂದು ರಾಜ್ಯ, ಒಂದು ರಾಷ್ಟ್ರದ ಜೊತೆ ಇನ್ನೊಂದು ರಾಷ್ಟ್ರ, ಕೈಕೈ ಹಿಡಿದು ನಡೀಬೇಕಾಗಿದೇ! ಇದು ಯುಗ ಧರ್ಮ, ಸ್ವಾಮೀ—ಬೇರೆ ಇರ್ತೀನಿ ಅಂತ ಉಳಿದವರಿಂದ ಸಿಡಿದು ನಿಲ್ಲೋದಕ್ಕೆ ಸಾಧ್ಯವೇ ಇಲ್ಲ!

ಭಟ್ಟರು :

ಶಿವಶಂಕರ!

ಮಾಸ್ತರು :

'ಭಾರತೀಯ' ಅನ್ನೋ ಕಾರಣದಿಂದ ನನಗೆ, ನಿಮಗೆ ಮೊದಲು ಗೌರವ ಇದೆ ಶಾಮರಾವ್! ನಾವೆಲ್ಲ ಮೊದಲು ಭಾರತೀಯರು. ಆಮೇಲೆ ನಾನು ಕನ್ನಡಿಗ, ಇವನು ತಮಿಳ, ಅವನು ಪಂಜಾಬೀ, ಮೂರನೆಯವನು ಮಹಾರಾಷ್ಟ್ರೀಯ, ಅಂತ! ಈ ಭಾಷಾ ರಾಜ್ಯಗಳೆಲ್ಲ ರಾಷ್ಟ್ರದೇವಿಯ ಅಂಗಾಂಗಗಳು! ಒಂದು ಇನ್ನೊಂದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರಕವಾಗಿ ನಿಂತಾಗಲೇ ದೇಹಕ್ಕೆ ದಾರ್ಢ್ಯ ! ಜೆಲುವು !! ಅದುಬಿಟ್ಟು ಒಂದು ಅಂಗ, ದೇಹದಿಂದ ಸಿಡಿದು ನಿಲ್ಲುತ್ತೇನೆ ಅಂದರೆ! ಎಂದಾದರೂ ಸಾಧ್ಯವೆ!

ರಾಯರು :

ಅದೇನೋ ಸರಿ—!

ಮಾಸ್ತರು :

ಆದರಿಂದ, 'ನಮ್ಮ ಪಾಡಿಗೆ ನಾವು' ಅನ್ನೋದು ಸಾಧ್ಯವೂ ಅಲ್ಲ ! ಸರಿಯೂ ಅಲ್ಲ ! ಹನ್ನೆರಡು ಲಕ್ಷ ವಿಸ್ತೀರ್ಣದ ನಮ್ಮ ಮಬಾಸ್ ರಾಷ್ಟ್ರದಲ್ಲಿನ ಐವತ್ತು ಮೂರು ಕೋಟಿ ಜನ ತಮ್ಮದೇ ವೈವಿಧ್ಯವನ್ನು ಪೋಷಿಸಿಕೊಂಡು ಬರುತ್ತಿದ್ದರೂ ಅಂತರಂಗದಲ್ಲಿ ಒಂದೇ ರೀತಿ, ಒಂದೇ ನೀತಿಯಿಂದ ಬಂಧನಗೊಂಡಿದ್ದಾರೆ. ರಾಷ್ಟ್ರದೇವಿಯ ಸಮಗ್ರ ನೋಟವನ್ನು ಪಡೆದುಕೊಳ್ಳಲಾರದ ಭಾರತೀಯ ಬಡವನಾಗುತ್ತಾನೆ. ಭಾರತೀ ಸರ್ವಸಮೃದ್ಧೆ ! ಅನೇಕ ಧರ್ಮಗಳನ್ನೂ ದೇವರುಗಳನ್ನೂ ನಾಗರೀಕತೆಗಳನ್ನೂ ತೊಡೆಯ ಮೇಲೆ ಆಡಿಸಿದ ಪವಿತ್ರೆ ! ಭಾಷೆಗಳನ್ನ, ಕಾವ್ಯಗಳನ್ನ, ಕಲೆಗಳನ್ನ ಪರಿಪಾಕಮಾಡಿ ಅರಗಿಸಿಕೊಂಡ ಅಮೃತೆ! ಪವಿತ್ರನದಿಗಳಿಂದ, ಹಿಮಾಚ್ಛಾದಿತ ಗಿರಿಶಿಖರಗಳಿಂದ, ಹಸಿರು ನೆಲದಿಂದ, ಬೆರಗುಗೊಳಿಸುವಂತಹ ಶಿಲ್ಪದಿಂದ—ಭವ್ಯಗಾನದಿಂದ, ದಿವ್ಯಾಲಂಕೃತೆ ! ಭಾರತದಲ್ಲಿನಂತಹ ಬಾಹ್ಯವೈವಿಧ್ಯವಾಗಲೀ ಆಂತರಿಕ ಏಕ ಸೂತ್ರತೆಯಾಗಲೀ ಪ್ರಪಂಚದ ಇನ್ನೆಲ್ಲೂ ಎಂದೂ ಕಾಣದು ! ಇದೇ ಭಾರತೀಯನ ಹಿರಿಮೆ ! ನಮ್ಮ ನಮ್ಮಲ್ಲಿ ಆರು, ಹದಿನಾರು, ನೂರಾರು ಬಗೆ—ಎನಿಸಿದರೂ, ಏಳು ಬಣ್ಣಗಳನ್ನು ಕಡೆದು ಮಾಡಿದ ಕಾಮನ ಬಿಲ್ಲಿನಂತೆ ನಾವೆಲ್ಲ ಒಂದು ! ಒಂದೇ ಒಂದು ! ಇದರ ಅರಿವೇ ನಮ್ಮ ಶಕ್ತಿ !

ಪಾತಮ್ಮ :

ಎಷ್ಟು ಚೆನ್ನಾಗಿ ಹೇಳಿದರು !

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಆದರೆ—ಈ ಹಳಮೇ—ಅಂತ

ರಾಯರು :

ತಾಳಿ ಭಟ್ಟರೆ, ಕಿಟ್ಟಣ್ಣ ಮಾಸ್ತರು ಒಳ್ಳೆ ಲಹರಿಯಲ್ಲಿ ಇದಾರೆ!

ಮಾಸ್ತರು :

ಆ್ಹಾ! 'ಹಳಮೆ' ಅಂದಿರಿ! ಹೌದು ಆದರೆ ನಮ್ಮ ದೇಶದ ಅದ್ಭುತವಾದ ಆ ಹಳಮೆಯ ಇತಿಹಾಸದ ಅಡಿಯಲ್ಲಿ ನಾವು ಹೂತು ಹೋಗಬಾರದು! ಆ—ಇತಿಹಾಸ ಕೊಟ್ಟ ಸಂಸ್ಕೃತಿಗೆ ತಕ್ಕ ಹಾಗೆ ಬಾಳಿ 'ನಾಳೆ'ಗಾಗಿ ಇಂದಿನ ನೆಲವನ್ನು ಹದಮಾಡಬೇಕು!

ಭಟ್ಟರು :

ಅದೇನೋ ಸರಿ—ಆದರೆ—!

ಮಾಸ್ತರು :

ಇನ್ನೂ ಒಂದು ಮಾತಿದೆ! ಮಲಗಿದ್ದ ಭಾರತಿ, ಸ್ವಾತಂತ್ರ್ಯ ಬಂದ ಮೇಲೆ ಮೈ ಕೊಡವಿ ಮೇಲೆದ್ದು ನಿಂತಿದಾಳೆ! ಅತಿ ಪ್ರಾಚೀನೆಯಾದ ಆಕೆ ಇಂದು ಚಿರನೂತನೆಯು ಆಗಿದಾಳೆ! ಸತ್ಯ ಅಹಿಂಸೆಯ ಮಂತ್ರ ಶಕ್ತಿಯಿಂದ ಇನ್ನು ಮುಂದೆಯೂ 'ಜಗತ್ತಿನ ಗುರು'ವಾಗಿ ಆ ಮಹತ್ ಸ್ಥಾನದಲ್ಲಿಯೇ ಉಳಿದು, ತನ್ನ ಅಹಿಂಸೆ—ಅಶಕ್ತನ ಅಹಿಂಸೆಯಲ್ಲ—ಬಲಾಢ್ಯನ ಸಹನ ಶಕ್ತಿ—ಎಂದು ತೋರಿಕೊಡಬೇಕಾಗಿದೆ! ಭಾರತದ ಜನತೆ ಇನ್ನು ಹಸಿವನ್ನು ಕಾಣಬಾರದು, ವಿದ್ಯಾ ವಿತರಣದಲ್ಲಿ ಕೊರತೆ ಬರಬಾರದು, ಮೂಢ ನಂಬಿಕೆ ಕಂದಾಚಾರಗಳು ಮೆಟ್ಟಲಳಿಯಬೇಕು ಎಂಬಂಥ ಕನಸು ಕೈಗೂಡಬೇಕಾದರೆ, ಭಾರತೀಯರು ತಮ್ಮಲ್ಲಿನ ಹುಲು ಭೇದಗಳನ್ನು ಕುದಿಕುಲುಮೆಗೆ—ಎಸೆದು ಪುಟಗೊಂಡು, ವಜ್ರಕಾಯರಾಗಿ ಏಕತೆಯಿಂದ, ಏಕಾಗ್ರತೆಯಿಂದ ನಿಲ್ಲಲೇಬೇಕು! ಹಾಗೆ ಒಂದು ತನದಿಂದ ಬೆಸಗೊಂಡ—ರಾಷ್ಟ್ರದೇವಿ, ವಿರಾಟೆಯಾಗಿ, ಮಹಾಕಾಳಿಯಾಗಿ, ರಕ್ತನೇತ್ರೆಯಾಗಿ, ಒಮ್ಮೆ 'ಹೂಂ' ಕರಿಸಿದರೆ, ಪಾಪ

Sri Vidyabharathi Book Centre, Sringeri

CC-O. In Public Domain. Digitized by eGangotri
ಜಾಗೃತ-ಭಾರತೀ

ಹುಲು ಚೀಣಿಯರಿರಲಿ ಜಗತ್ತಿನ ಯಾವ ಶಕ್ತಿಯೂ ಆಕೆಯ ಅಂತಃ ತೇಜವನ್ನು ಕಂಡು ಕುರುಡಾಗಿ ಹಿಮ್ಮೆಟ್ಟಿ ನಿಲ್ಲಬೇಕು ! ಇನ್ನೊಬ್ಬ ನಮ್ಮನ್ನು ಕೆಣಕಿದಾಗಷ್ಟೆ 'ನಾವೆಲ್ಲ ಒಂದು' 'ಒಬ್ಬತಾಯ ಮಕ್ಕಳು' ಅಂತ ಅನ್ನಿಸಿದರೆ ಸಾಲದು. ಆ ಭಾವನೆ ನಮ್ಮ ಉಸಿರಿನ ಗಾಳಿ ಯಾಗಬೇಕು ! ನಮ್ಮ ನಾಡಿಯ ಮಿಡಿತವಾಗಬೇಕು !

ರಾಯರು :

(ತಡೆದು) ಹಂ ! ಸೊಗಸಾದ ಭಾಷಣ ಕೊಟ್ಟಿರಿ !

ಭಟ್ಟರು :

ನಿಜವಾಗಿ, ನೀನಿಷ್ಟು ಹೇಳಿದ ಮೇಲೆಯೇ ನಮ್ಮ ದೇಶದ—ಮಹಾ ಸಂಪತ್ತನ್ನು, ಶಕ್ತಿಯನ್ನು, ಕಂಡಹಾಗಾಯಿತು ಸ್ವಾಮೀ !

ಪಾತಮ್ಮ :

ನಿಜವಾಗಿ !

ಚಿಕ್ಕತ್ತೆ :

ಇವರ ಲೆಕ್ಚರ್‌ನಲ್ಲಿ ಪುಟ್ಟರಾಮೂ ಮಾತೂ ಮರೆತು ಹೋಗಿತ್ತಲ್ಲೆ—ಪಾತಮ್ಮ ! ಕೊಚ್ಚಿಕೊಂಡು ಹೋಗೋ ಹೊಳೇ ಎದುರಿಸಿ ಬಿಚ್ಚೋಲೆ ನಿಂತೀತೇ ಅಂತಾರಲ್ಲ.—

ಭಟ್ಟರು :

ಶಿವಶಂಕರ ! ಹಂ ಅಂತೂ ಭಾರತೀಯ—ಅಂದರೆ–ಕನ್ನಡಿಗನಿಗಿಂತ ದೊಡ್ಡವನು !

ಮಾಸ್ತರು :

ನಿಜವಾದ ಮಾತು ಭಟ್ಟರೆ! ನನಗೂ ಆದರ ಅರಿವು ಹಿಂದೆ—ಇರಲಿಲ್ಲ ! ಕಾಲೇಜಿನಲ್ಲಿದ್ದಾಗ "ಇಂಡಿಯಾ ಅಂದರೆ ನಾನಾಬಗೆಯ ಸರಕುಗಳ ಮೂಟೆ ! ಬ್ರಿಟಿಷರು ಕಟ್ಟಿದ ಬಂಧನದಿಂದಾಗಿ—ಅದು ಒಡೆಯದೇ ಉಳಿದಿದೆ" ಅಂದುಕೊಂಡಿದ್ದೆ ! ಆದರೆ ಆರು ವರ್ಷಗಳ ಹಿಂದೆ ಪ್ರವಾಸಿ ಬಸ್ಸಿನಲ್ಲಿ ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ನಾಲ್ಕು ತಿಂಗಳ ಪ್ರವಾಸ ಮಾಡಿ ಬಂದೆನಲ್ಲ

CC-O. In Public Domain. Digitized by eGangotri

—ಆಗಲೇ ನನ್ನ ಕಣ್ಣು ತೆರೆದಿದ್ದು ! ನಿಜ ! ಒಂದು ಕಡೆಯಿಂದ ಇನ್ನೊಂದು ಕಡೆಗೆ ಭಾರತೀಯರ ಉಡ ಗೆ ತೊಡುಗೆ, ನಡೆನುಡಿ, ಊಟ ಉಪಚಾರಗಳಲ್ಲಿ ವ್ಯತ್ಯಾಸವೇನೋ ಇದೆ ! ಆದರೆ ಆಂತರಿಕವಾಗಿ, ಹುಟ್ಟಿನಿಂದ, ಅರಿವಿನಿಂದ, ಸಂಸ್ಕೃತಿಯಿಂದ, ಆಚಾರ ವ್ಯವಹಾರಗಳಿಂದ ಪ್ರತಿಯೊಬ್ಬ ಭಾರತೀಯನೂ ಒಂದೇ ಅಚ್ಚಿನವನು ಎನ್ನಿಸಿಬಿಟ್ಟಿತು. ಬೇರೆಯವರು ಎಂದು ಬಗೆದಿದ್ದವರೆಲ್ಲ ಬಂಧುಗಳೇ ಆಗಿದ್ದರು. ಪರಸ್ಥಳ ಎಂದು ತಿಳಿದಿದ್ದುದು—ನಮ್ಮ ಊರೆ ಆಗಿತ್ತು. ನಮ್ಮ ದೇವರೇ ಅವರ ದೇವರು, ನಮ್ಮ ಹಬ್ಬಗಳೇ ಅವರ ಹಬ್ಬ, ಅವರ ಪುಣ್ಯಸ್ಥಳಗಳೇ ನಮ್ಮ ಯಾತ್ರಾಕ್ಷೇತ್ರಗಳು—ಶ್ರುತಿ, ಸ್ಮೃತಿ, ಗುರು ಪರಂಪರೆ, ಜೀವನ ಕರ್ಮಗಳೆಲ್ಲ ಒಂದೇ !! ಆಗ ನನಗೆ ಅನ್ನಿಸಿದ್ದು—ಕಾಶ್ಮೀರದಿಂದ ರಾಮೇಶ್ವರ ಪರ್ಯಂತ, ಪಂಜಾಬಿನಿಂದ ಬಂಗಾಳದವರೆಗೆ ಇರುವ ದೇಶವೆಲ್ಲ ನನ್ನ ಮನೆ, ಇದರಲ್ಲಿ ವಾಸವಾಗಿರುವವರೆಲ್ಲ ನನ್ನ ಬಂಧುಗಳು—ಅಂತ ! ನಾವೆಲ್ಲ ಒಂದೇ ಜನಾಂಗ ! ನಾವೆಲ್ಲ ಒಂದೇ—ದೇಶ ! ನಮ್ಮದು ಒಂದೇ ಸಂಸ್ಕೃತಿ—ನಮ್ಮ ತಾಯಿ ಸನಾತನೆಯಾದರೂ ನಿತ್ಯನೂತನೆ ! ಆಕೆ ಚಿರಂಜೀವಿ, ಚಿರಯುವ್ವನೆ—ಆಕೆ ಭುವನ ಮನಮೋಹಿನಿ—

(ಥಣಾರ್ ಎಂಬ ಗಾಂಗ್ ನಿನಾದದೊಂದಿಗೆ ಇದ್ದಕ್ಕಿದ್ದಂತೆ—ತೆರೆ ಸೀಳಿ ಸರಿಯುತ್ತದೆ. ಭಾರತ ಭೂಪಟದ ಹಿನ್ನೆಲೆಯ ಮುಂದೆ, ಸಾಂಕೇತಿಕವಾಗಿ ಸಿಂಗರಗೊಂಡ ಹೆಣ್ಣು—'ಭಾರತೀದೇವಿ'ಯಾಗಿ ನಿಂತಿದ್ದಾಳೆ, ಒಳಗಿನಿಂದ ಮೇಳಗಾನ ವೃದ್ಧಿಸಿ—ಆವರಣವನ್ನು ತುಂಬಿ ಪ್ರತಿಧ್ವನಿಸುತ್ತದೆ.)
(ಸಾಧ್ಯವಾದರೆ ಹದಿನಾಲ್ಕು ಭಾಷಾ ರಾಜ್ಯಗಳನ್ನು ಪ್ರತಿನಿಧಿಸುವಂತೆ ಮಕ್ಕಳು ವೈವಿಧ್ಯ ಪೂರ್ಣವಾಗಿ ಉಡುಪುಕೊಟ್ಟು ಆಕೆಯ ಸುತ್ತ ಆರತಿ ಹಿಡಿದು ನರ್ತಿಸಬಹುದು)

ಮೇಳಗಾನ :

ದೇವಿ ಭುವನ ಮನಮೋಹಿನೀ ।
ನಿರ್ಮಲ ಸೂರ್ಯಕರೋಜ್ವಲ ಧರಣೀ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಜನಕ ಜನನಿ ಜನನೀ ।
ನೀಲ ಸಿಂಧುಜಲ ದೌತ ಚರಣ ತಲ ।
ಅನಿಲ ವಿಕಂಪಿತ ಶಾಮಲ ಅಂಚಲ ।
ಅಂಬರ ಚುಂಬಿತ ಫಾಲ ಹಿಮಾಚಲ ।
ಶುಭ್ರ ತುಷಾರ ಕಿರೀಟಿನೀ ॥

ಪ್ರಥಮ ಪ್ರಭಾತ ಉದಿತ ತವಗಗನೆ ।
ಪ್ರಥಮ ಸಾಮರವ ತವ ತಪೋವನೆ ।
ಪ್ರಥಮ ಪ್ರಸಾರಿತ ತವ ವನ ಪವನೆ ।
ಜ್ಞಾನ ಧರ್ಮ ಹಿತ ಕಾವ್ಯಕಾರಿಣೀ ॥

ಚಿರ ಕಲ್ಯಾಣ ಮಯೀ ತುಮಿಧನ್ಯೆ ।
ದೇಶವಿದೇಶ ವಿಕಲಿತ ಅನ್ಯೆ ।
ಜಾಹ್ನವಿ ಜಮುನಾ ವಿಗಲಿತ ಕರುಣಾ ।
ಪುಣ್ಯ ಪೀಯೂಷಸ್ತನ್ಯವಾಹಿನಿ ॥

(ಪರದೆ ಮುಚ್ಚಿಕೊಳ್ಳುತ್ತಿರುವಂತೆ....ಮುನ್ನೆಲೆಯಲ್ಲಿ ಬೆಳಕು ಮೂಡಿ ಬಂದಾಗ—ಪಾತ್ರಗಳೆಲ್ಲ ಮತ್ತೆ ಪ್ರೇಕ್ಷಕರ ಕಡೆಗೆ—ತಿರುಗಿದೊಡನೆ ..... ಬಾಗಿಲಲ್ಲಿ ಪುಟ್ಟರಾಮೂ ನಿಂತುದನ್ನು ಕಾಣುತ್ತಾರೆ....ಬಿಳಿ ಬಟ್ಟೆಯ ಸ್ಲಿಂಗ್ ನಲ್ಲಿ ಆತನ ಎಡಗೈ ತೂಗುತ್ತಿದೆ ..ಆತನನ್ನು ಮಾಸ್ತರ ಮಗ—ಆನಂದು ಹಿಡಿದು ನಿಂತಿದಾನೆ! ಬಳಿಯಲ್ಲಿಯೇ ಸಾಲಂಕೃತಳಾದ ಸುಂದರಿ, ವಧುವಾಗಿ ಮಹಾ ರಾಷ್ಟ್ರೀಯ ರೀತಿಯಲ್ಲಿ ಸೀರೆ ಉಟ್ಟು ನಸುನಾಚಿ ನಿಂತಿದಾಳೆ—ಇವರನ್ನು ನೋಡಿದೊಡನೆ ಪಾತ್ರಗಳೆಲ್ಲ ಮಂತ್ರಮುಗ್ಧರಾದಂತೆ ನಿಂತು—ಓ!! ಎನ್ನುತ್ತಾರೆ.)

ಪಾತಮ್ಮ :

ಪುಟ್ಟರಾಮು ! ಓ—ಪುಟ್ಟರಾಮು ಬಂದುಬಿಟ್ಟ ! ಪುಟ್ಟು !!

ರಾಯರು :

(ಅರಿವಿಲ್ಲದೆಯೆ) ಪುಟ್ಟರಾಮು !!.....

Sri Vidyabharathi Book Centre, Sringeri

CC-O. In Public Domain. Digitized by eGangotri

ಭಟ್ಟರು :

ಓ ! ಪುಟ್ಟರಾಮು ಬಂದಿದ್ದಾನೆ ! (ಅರಚುತ್ತಾರೆ) ಅಲ್ಲಿ ನೋಡಿ.... ಪುಟ್ಟರಾಮು ! ಒಲಿದು ಬಂದ ಸುಂದರೀ ಜೊತೆ—

ಚಿಕ್ಕತ್ತೆ :

ಜೊತೆಗೆ ಆನಂದೂ ! ಮಾಸ್ತರೆ, ನಿಮ್ಮ ಮಗ ಆನಂದೂ !

ಮಾಸ್ತರು :

ನೋಡ್ತಿದೇನೆ ! (ಬಂದವರನ್ನು ಕುರಿತು) ಹುಷಾರಾಗಿ ಬಂದಿರಾ ಎಲ್ಲರೂ

ಪಾತಮ್ಮ :

ಕೈ !? ಪುಟ್ಟೂ....ಕೈ ಏನಾಗಿದೆಯೋ ?

ಭಟ್ಟರು :

ಅಂದ ಹಾಗೆ ! ಹಯ್ಯಯ್ಯೊ ! ಕೈ ಏನಾಯಿತು ? ಏನಾಗಿದೆ ಕೈ ಪುಟ್ಟರಾಮಯ್ಯನೋರೆ ?

ರಾಮು :

(ಮೆಲುನಗೆ) ಏ....ನಿಲ್ಲ !

ಚಿಕ್ಕತ್ತೆ :

ಹಯ್ಯೋ ! ಹ್ಯಾಗಾಗಿ ಹೋಗಿದಾನೆಯೇ !! ನನ್ನಪ್ಪಾ—ನನ್ನ ರಾಮೂ

ಪಾತಮ್ಮ :

(ಅವನೆಡೆಗೆ ಧಾವಿಸಿ ಮುಟ್ಟುತ್ತಾ ಕಣ್ದುಂಬಿ) ನಿಜವಾಗಿ ಅದೆಷ್ಟು ಬಡವಾಗಿ—ಹೋಗಿದ್ದೀಯೋ—ಪುಟ್ಟು....!

ರಾಯರು :

(ಅನುಮಾನಿಸುತ್ತ)....ಕೈಗೆ....ಏ–ನಾ–ಗಿದೆ–?

ಚಿಕ್ಕತ್ತೆ :

ಹಯ್ಯೋ....ನೀನಾದರೂ ಹೇಳೋ....ಆನಂದೂ ? ನಮ್ಮ ಪುಟ್ಟೂಗೆ —ಏನಾಯಿತು—!

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದು :

(ನಗುತ್ತಾ) ಯಾಕೆ ?....ಮದುವೆ ಆಯಿತು ಅಜ್ಜೀ....ನೋಡಿ ನಿಮ್ಮ —ಪುಟ್ಟರಾಮೂ ಮಾಡಿಕೊಂಡ ಹೆಂಡತಿ...ನಿಮ್ಮ ಪುಟ್ಟಸೊಸೆ ಕಾಣ್ತಾಳಲ್ಲ—ಎದುರಿಗೇನೇ !

ಚಿಕ್ಕತ್ತೆ :

ಹಯ್ಯೋ ! ಮದುವೆ ಮಾಡಿಕೊಂಡರೆ....ಬಂಗಾರವಾಗಿದ್ದೋನು ಹೀಗೆ—ಅಂಗಾರವಾಗಿ ಹೋಗ್ತಾನೇನೋ ! ವೇಸ್ವರನ್ನು ಕಂಡಾಕ್ಷಣ ಮೇಧಾವಿಯಾಗಿದ್ದೋನು ಮೂದೇವಿಯಾದ—ಅಂದ ಹಾಗೇ !!

ಪಾತಮ್ಮ :

(ಪುಟ್ಟರಾಮುವಿನ ಕೈ ಸವರುತ್ತ) ಹಯ್ಯೋ—ಕೈ ಮುರಿದು ಹೋಗಿದೆಯೇನೋ—ಪುಟ್ಟೂ....!

ರಾಮು :

ಈಗ ಸ್ವಲ್ಪ ಉತ್ತಮ—ಅಮ್ಮಾ !

ರಾಯರು :

ಉತ್ತಮ !?

ಭಟ್ಟರು :

ಅಂದರೆ—? ಏನಾಗಿತ್ತು ಸ್ವಾಮೀ—?

ಆನಂದು :

(ನಗುತ್ತಾ) ಮದುವೆ ಆದಮೇಲೆ ಎಲ್ಲ ವಾಸಿ ಆಯಿತು—ಭಟ್ಟರೆ....

ಚಿಕ್ಕತ್ತೆ :

ಹಯ್ಯೋ ! ತಂದೆ ಹ್ಹಾಗೇ ಮಗ ! ಹಾವು ಸುತ್ತಿಕೊಂಡರೂ ಹಾಸ್ಯ ತಪ್ಪಲಿಲ್ಲ ಅಂತ !

ಮಾಸ್ತರು :

ಇನ್ನಾದರೂ ಹೇಳೋ ಆನಂದೂ....ಇದೇನು ನಾಟಕವೆ. ಇಂತಹ—Suspense ನಲ್ಲಿ ಇಡೋಕೆ !

CC-O. In Public Domain. Digitized by eGangotri

ಭಟ್ಟರು :

ಅದೇ ಅಂತೀನಿ—ಅವೇನು—ಮದುವೆ—ಆದಮೇಲೆ—ಕೈ—ಮುರಿ—ಅ—ಹೀಗೇ ಆಯ್ತೋ—ಅಥವಾ !

ಚಿಕ್ಕತ್ತೆ :

ಕೈ ಮುರಿದ ಮೇಲೆ ಮದುವೆ ಆಯ್ತೋ—ಅಂತ ತಾನೇ ನೀವು ತೊದಲೀ ತೊದಲೀ ಕೇಳ್ತಿರೋದು ?

ಆನಂದು :

ನಿಜ—ಅಜ್ಜಿ ! ಕೈ ಹೀಗಾಗಿದ್ದಕ್ಕೂ—ಮದುವೆಗೂ—ನಿಜವಾಗಿ—ತುಂಬ ನಿಕಟವಾದ ಸಂಬಂಧ ಇದೆ !

ಪಾತಮ್ಮ :

(ಹಸಿಗಣ್ಣು ಮಾಡಿಕೊಂಡು) ಹೀಗೆ ಮದುವೆ ಮಾಡಿಕೊಳ್ಳಬಹುದೇನೋ—ಪುಟ್ಟು—ಮನೆಯವರ—ಮನಸ್ಸನ್ನೆಲ್ಲ—ಮುರಿದು— !

ಆನಂದು :

ಇನ್ನು, ನಡೆದದ್ದನ್ನೆಲ್ಲ ನಾನು ಹೇಳ್ತೀನಿ ಪಾತಮ್ಮನವರೇ—ಯಾಕೆ ಅಂದರೆ—ಪೂರ್ತಿಕತೆ ಪುಟ್ಟೂಗೂ ಗೊತ್ತಿದೆಯೋ ಇಲ್ಲವೋ ! ಆಗ ಮೂರು ದಿನ—ಎಚ್ಚರವೇ ಇರಲಿಲ್ಲ ಅವನಿಗೆ !

ಪಾತಮ್ಮ
ಚಿಕ್ಕತ್ತೆ } ಹಯ್ಯೋ !!

ಆನಂದು :

ನೋಡಿ ತಿಂಗಳಾಗ್ತ ಬಂತು—ಕಳೆದ ತಿಂಗಳು ಹದಿನಾರನೆಯ ತಾರೀಖು ನಿಮ್ಮ ಇಂಜಿನೀಯರ್ ಮಗನ ಜೀವು-Work-Spotಗೆ ಹೋಗ್ತಾ ಇದ್ದಾಗ ವರಕ್ಕೆ ಡಿಕ್ಕಿ ಹೊಡೆದು—ಉರುಳಿ ಬಿತ್ತು ! ಡ್ರೈವರ್ ಅಲ್ಲಯೇ ಹೋಗಿಬಿಟ್ಟ—

ಪಾತಮ್ಮ
ಚಿಕ್ಕತ್ತೆ } ಹಯ್ಯೋ !

CC-O. In Public Domain. Digitized by eGangotri
ಜಾಗೃತ-ಭಾರತೀ

ಆನಂದು :

ನಿಮ್ಮ ಮಗನ ಅದೃಷ್ಟ ಗಟ್ಟಿ ಅಂತ ಬದುಕಿಕೊಂಡ....

ಭಟ್ಟರು :

ಅಥವಾ ಕೈಹಿಡಿದವಳ ಮಾಂಗಲ್ಯದ ಬಲ ಅನ್ನು

ಆನಂದು :

ಈಗ ಆ ಬಲ ! ಆಗಿನ್ನೂ ಕೈ ಹಿಡಿದಿರಲಿಲ್ಲವಲ್ಲ !! ಹ...ಹ—ಸುದ್ದಿ ತಿಳಿದ ತಕ್ಷಣ ಇವನ Executive Engineer, ಬಂಗಾಳದೋರು—ಧಾವಿಸಿ ಬಂದು ನೋಡಿ ಆರು ಮೈಲು ದೂರದ ಆಸ್ಪತ್ರೆಗೆ ತೊಡೇ ಮೇಲಿಟ್ಟುಕೊಂಡು ಸಾಗಿಸಿದರು—ನನ್ನ ಪರಿಚಯ ಇತ್ತಲ್ಲ ಅವರಿಗೆ—ಅರ್ಜೆಂಟ್ ಮೆಸೇಜ್ ಕಳಿಸಿದರು ಬೊಂಬಾಯಿಗೆ ! ಟ್ಯಾಕ್ಸಿ ಮಾಡಿಕೊಂಡು ನಾನು ಬಂದು ಇವನನ್ನ ನೋಡಿ—ನಿಜವಾಗಿ ಗಾಬರಿಯಾಗಿ ಹೋದೆ.

ರಾಯರು :

ಇಷ್ಟಾದರೂ—ನಮಗೊಂದು ಸುದ್ದಿ—ಸಮಾಚಾರ ಇಲ್ಲವಲ್ಲೊ !

ಆನಂದು :

ನನ್ನ ಗುರುತು ಹಿಡಿದ ತಕ್ಷಣ ಅದೇ ಮಾತು ಇವಂದು—ನಿಮಗೆ—ತಿಳಿಸಕೂಡದು—ಗಾಬರಿ ಆಗ್ತೀರೀ—ಮೊದಲೇ ಹೈ ಬ್ಲಡ್ ಪ್ರಷರ್ರು—ಅಂತ—! ಅದಕ್ಕೇ ನಮ್ಮ ತಂದೇಗೆ ಬರೆದೇ !

ಭಟ್ಟರು :

ಶಿವಶಂಕರ !

ಆನಂದು :

ಯಾವುದೋ ಒಂದು ಆರ್ಟರಿ ಕತ್ತರಿಸಿ ವಿಪರೀತ ರಕ್ತ ಕಳೆದುಕೊಂಡು ಬಿಟ್ಟಿದ್ದನಂತೆ ! ಅದೋ ಸಣ್ಣ ಆಸ್ಪತ್ರೆ—ಒಬ್ಬರೆ ಡಾಕ್ಟರು! ನಾಲಕ್ಕು ನರ್ಸುಗಳು—ಮೂವತ್ತು ಪೇಷಂಟು !

ಪಾತಮ್ಮ :

ಹಯ್ಯೋ ! ಅಲ್ಲೀಗೆ ಸೇರಿಸಿದರೆ ನಂ ಪುಟ್ಟೂನ !?

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದು ;

ಹೌದು—ಸ್ವಲ್ಪ ಶಕ್ತಿ ಬಂದರೆ ಪೂನಾದ ದೊಡ್ಡ ಆಸ್ಪತ್ರೆಗೆ ಸಾಗಿಸ ಬಹುದು—ಅಂತ ! ಆದರೆ—ಆ ಡಾಕ್ಟ್ರು—ಆ ಪುಟ್ಟ ಆಸ್ಪತ್ರೆಯ ಆ ಗೊಡ್ಡ ಡಾಕ್ಟ್ರರು ಎಂತಹ ದಯಾವಂತಾ ! ನಿಜವಾಗಿ ನಿಮ್ಮ ಮಗನಿಗೆ ಜೀವ ಕೊಟ್ಟ ಪುಣ್ಯಾತ್ಮ ಆತ ! ನಾನು ನೋಡಿದ ಹಾಗೇ ಎರಡು ರಾತ್ರಿ—ಸಂಜೆಯಿಂದ ಬೆಳಗಿನವರೆಗೆ—ಇವನ ಹಾಸಿಗೆಯ ಹತ್ತಿರವೇ ಕಣ್ಣು ಮುಚ್ಚದೆಯೇ ಕೂತು—ಕೈಲಾದದ್ದೆಲ್ಲಾ ಮಾಡಿದರು.

ಭಟ್ಟರು :

ಯಾವ ಜಾತೀನೋ ಆತ !

ಆನಂದು :

ದೇವತೆಯ ಜಾತಿ !

ಭಟ್ಟರು :

ಅಲ್ಲ—ಯಾವ ಭಾಷೆ—ಅಂತ !

ಆನಂದು :

ಮರಾಠೀ ಮಾತಾಡ್ತಿದ್ದರು—ಅದೂ ಒಂದೆರಡು ಮಾತು ! ತನ್ನ ಮಗನನ್ನು ಹೇಗೆ ನೋಡಿಕೊಳ್ಳಬಹುದೋ ಹಾಗೇ ನೋಡಿಕೊಂಡರು ಆತ ನಿಮ್ಮ ಮಗನ್ನ ಕಣ್ಣಲ್ಲಿ ಕಣ್ಣಿಟ್ಟು !

ಜೆಕ್ಕತ್ತೆ :

ನೂರು ಕಾಲ ಬಾಳಬೇಕು ಅಂತಹ ಜನ—ಯಾವ ಊರಾದರೇನು—ಯಾವ ಭಾಷೆಯಾದರೇನು—

ಪಾತಮ್ಮ :

(ಅಳುತ್ತಾ) ಹೋಗುತ್ತಿದ್ದ ಜೀವಾನಾ ಉಳಿಸಿಕೊಟ್ಟ—ಆ ನನ್ನ ತಂದೆ !—ಪುಟ್ಟೂ, ಆನಂದೂ ಹೇಳೋದು ಕೇಳಿದರೆ ನೀನು ಮತ್ತೆ ಹುಟ್ಟಬಂದೆ ಅನ್ನೊ— ಹಾಗೆ ಆಯ್ತೇಲ್ಲೊ !

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದು :

ತಪ್ಪಲ್ಲ ಆ ಮಾತು! ಆ ತಂದೆಗಿಂತ ಹೆಚ್ಚಾಗಿ—(ವಧುವಿನ ಕಡೆಗೆ ತೋರಿಸಿ) ಈ ತಾಯಿ—ನಿಮ್ಮ ಮಗನ್ನ ಬದುಕಿಸಿ ಕೊಂಡಳು!

ಪಾತಮ್ಮ :

(ಎಲ್ಲರಂತೆ ತಾನೂ-ನಾಚಿ ನಿಂತ ವಧುವನ್ನು ನಿಟ್ಟಿಸುತ್ತಾರೆ-ಮೊದಲಬಾರಿಗೆ) ಆಂ ?!

ಆನಂದು :

ಈಕೆ ಆ ಆಸ್ಪತ್ರೆಯಲ್ಲಿ ನರ್ಸು! ಇಂತಹ ಚಿಕ್ಕ ವಯಸ್ಸಿನಲ್ಲಿಯೇ—ತನ್ನ ಕೆಲಸದಲ್ಲಿ ಮಹಾ ಕುಶಲತೆ! ನಿಮ್ಮ ಮಗ ಕಳಕೊಂಡ ರಕ್ತವನ್ನ ತನ್ನ ರಕ್ತದಿಂದ ತುಂಬಿಕೊಟ್ಟಳು! ಅವನನ್ನ ಬದುಕಿಸಿ ಕೊಳ್ಳೋಕೆ ತನ್ನ ಜೀವರಸವನ್ನೆಲ್ಲಾ ಧಾರೆ ಎರೆದಳು!

ಪಾತಮ್ಮ :

ಓ....ನನ್ನ....ತಾಯೀ....

ಆನಂದು :

ತಾನು ಅನ್ನ ಬಿಟ್ಟು—ನಿದ್ರೆಕೆಟ್ಟು—ಮತ್ತೆ ಮತ್ತೆ ರಕ್ತಕೊಟ್ಟು, ಇವನು—ಎಚ್ಚರಗೊಂಡು ಓಡಿಯಾಡುವ ಹಾಗೆ ಆಗುವವರೆಗೂ ಬಳಿಯಿಂದ ಅಗಲದೆ—ನೋಡಿಕೊಂಡಳು—ಆಮೇಲೆ—ಪತ್ತೇ ಇಲ್ಲ! ಮೂರು ನಾಲ್ಕು ದಿನ ಆಸ್ಪತ್ರೆಗೇ ಬರಲಿಲ್ಲ!

ರಾಯುರು :

ಅಯ್ಯೋ!

ಪಾತಮ್ಮ :

ಆಮೇಲೆ!

ಆನಂದು :

ಆಮೇಲೇನು—ನಿಮ್ಮ ಹುಡುಗ ಬಿಡದೆ ಹುಡುಕಿ, ಆಕೆ—ಬೇಡಾ—ಬೇಡಾ—ಅಂದರೂ ಹಟ ಹಿಡಿದು ಮದುವೆ ಮಾಡಿಕೊಂಡನಲ್ಲ

CC-O. In Public Domain. Digitized by eGangotri

ಮೊನ್ನೆ ! ನೀವೆಲ್ಲ ಒಪ್ಪೇ ಒಪ್ತೀರಿ ಅಂತ ಅಂತಹ ನಂಬಿಕೆ ಇವನಿಗೆ !

ಚಿಕ್ಕತ್ತೆ :

ಏನು ತಪ್ಪಾಯಿತು–ಬಿಡೋ ಅನಂದೂ–! ಚೊಕ್ಕ ಬಂಗಾರ ಅವಳು.

ಸಾತಮ್ಮ :

ಬಾ.... ಬಾ.... ನನ್ನ ತಾಯಿ—(ಮುಂದೆ ಕೈಮಾಡಿ ಆಕೆಯ ಭುಜವನ್ನು ಹಿಡಿಯುವುದರಲ್ಲಿ, ಆಕೆ ಕುಸಿದು ಅತ್ತೆಯ ಕಾಲು ಮುಟ್ಟಿ – ನಮಿಸುತ್ತಾಳೆ, ಪುಟ್ಟರಾಮು ತಂದೆಯ ಕಾಲಬಳಿ ಬಾಗಿ, ಬಲಗೈಯಿಂದ – ಪಾದವನ್ನು ಹಿಡಿಯುತ್ತಾನೆ !– ಕಣ್ತುಂಬಿ ಇಬ್ಬರನ್ನೂ ಹಿಡಿದು ನೇವರಿಸಿ – ಎಬ್ಬಿಸುತ್ತಾರೆ– ಅನಂತರ ವಧು, ಚಿಕ್ಕತ್ತೆಗೂ, ಮಾವನವರಿಗೂ ನೆಲ ಮುಟ್ಟಿ ನಮಿಸುತ್ತಾಳೆ– ಆ ಬಳಿಕ ಗಂಡನಂತೆಯೇ ಭಟ್ಟರಿಗೂ, ಮಾಸ್ತರಿಗೂ– ಬಾಗಿ ನೆಲಮುಟ್ಟಿ ನಮಸ್ಕರಿಸುತ್ತಾಳೆ)

ಭಟ್ಟರು :

ಧನಂ ಧಾನ್ಯಂ ಬಹುಪುತ್ರಲಾಭಂ
ದಂಪತಿ ದೀರ್ಘಮಾಯುರಾರೋಗ್ಯಮಸ್ತು....

ಚಿಕ್ಕತ್ತೆ :

(ಮಧ್ಯೆ ಪ್ರವೇಶಿಸಿ) ತಾಳಿ....ತಾಳಿ....'ಬಹುಪುತ್ರ ಲಾಭ' ಅಂತ ಬೇಡಿ, 'ಮಿತಪುತ್ರ ಲಾಭ' ಅಂತ ಅನ್ನಿ....ಇನ್ನಿಮುಂದೆ. ಏಳು ಮಕ್ಕಳು, ಹದಿನಾಲ್ಕು ಮಕ್ಕಳಾ...ಗಲಿಅಂತ ಆಶೀರ್ವಾದ ಮಾಡೋ ಕಾಲ ಆಗೋಯ್ತು.

ಭಟ್ಟರು :

ಮತ್ತೆ ?

ಚಿಕ್ಕತ್ತೆ :

ಆರತಿ ಎತ್ತೋಕ್ಕೆ ಒಬ್ಬ ಮಗಳು....ಕೀರ್ತಿ ತೋರಿಕೆ ಒಬ್ಬ ಮಗ, ಅಂತ....ಇಬ್ಬರೇ ಇಬ್ಬರು ಸಾಕು, ಈ ಮುತ್ತಿನಂತಹ ಮನೆಗೇ....

ಮಾಸ್ತರು :

ಹೌದಮ್ಮ, ನೀವು ಹೇಳೋದೂ ನಿಜ ! ಇದು, ಮುಂಚಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲವಲ್ಲಮ್ಮ, ಯೋಜನಾಯುಗ .... ಕುಟುಂಬಯೋಜನಾಯುಗ (ಎಲ್ಲರೂ ಹೃತ್ಪೂರ್ವಕವಾಗಿ ನಗುವರು)

ಆನಂದು :

ಇನ್ನು ಮಗನಿಗೇ — ಸೊಸೆಗೇ — ನೀವು ಒಂದು ಆರತಿ ಮಾಡಿಬಿಟ್ಟರೆ — ಪುಟ್ಟರಾಮುವಿನ ಪರಿಣಯದ ಕತೆ ಮುಗಿದ ಹಾಗೆ—! ಕೈ ಏನು — ಇನ್ನೊಂದು ವಾರದಲ್ಲಿ ವಾಸಿಯಾಗಿ ಹೋಗುತ್ತೆ ! ಅವನಿಗೇನು ಇನ್ನೂ ಒಂದೂವರೇ ತಿಂಗಳು ರಜಾ ! ನಾನು ನಾಡಿದ್ದೇ ಹೋಗಬೇಕಲ್ಲಾ ಅವನೇನೋ—ಇಲ್ಲಿಗೆ ಜೊತೆ ಅಂತ ಬರಬೇಡಾ ಅಂದ— ಆದರೆ ನಿಂತು ನೋಡಿದವನು— ನಾನ ! ನಾನು ತಾನೆ ನಿಮಗೆ ಎಲ್ಲ ಹೇಳಬೇಕಾದ್ದು !

ಮಾಸ್ತರು :

ನಾಡಿದ್ದೇ ಯಾಕೆ ಹೋಗಬೇಕೋ ?....ಹ್ಯಾಗಿದ್ರೂ ಬಂದಿದೀಯಾ !

ರಾಯರು :

ಮಗನ ಮಾತಿಗೆ ಅಡ್ಡ ಬರಬೇಡೀ....ಅವನಿನ್ನೇನು ಇಟ್ಟಿದಾನೋ ಪ್ಲಾನೂ !

ಆನಂದು :

ಅಂಥಾದ್ದೇನೂ ಇಲ್ಲ ಸಧ್ಯಕ್ಕಂತೂ....(ತಂದೆಗೆ) ಅಲ್ವೇನಣ್ಣಾ ! (ಇಬ್ಬರೂ ನಗುತ್ತಾರೆ)

ಭಟ್ಟರು :

ಅದು ನೋಡಿ—ಅಂತೂ—ತಂದೆ ಮಗ ಅಂದರೆ ಸ್ನೇಹಿತರಿದ್ದ ಹಾಗೆ ಇದ್ದಾರೆ !

ರಾಮು :

ಅಂದ ಹಾಗೆ—ಮೋಹನ ಎಲ್ಲಮ್ಮಾ ?

Sri Vidyabharathi Book Centre, Sringeri

ಜಾಗೃತ-ಭಾರತೀ
CC-O. In Public Domain. Digitized by eGangotri

ಪಾತವ್ಮ :

ಅವನೇ ನಾಟಕದ ಪ್ರಾಕ್ಟೀಸು ಮಾಡ್ತಿದ್ದನಲ್ಲ ನೀ ಬಂದಾಗ! ಒಳಗಿದ್ದಾನೆ ಒಂದು ಸಂತೆ ಇಟ್ಟುಕೊಂಡು—!

ರಾಮು :

ಓ! ಅದೇ—ಇದೇನು ನಾಟಕರಂಗಕ್ಕೆ—ಬಂದೆನೋ—ನಮ್ಮ ಮನೆಗೆ ಬಂದೆನೋ ಅನ್ನಿಸಿಬಿಡ್ತು ಆಗ! ಬಾ— ಶೋಭಾ—ನನ್ನ ತಮ್ಮ ಅಲ್ಲಿದಾನೆ! You must meet that scoundral! ಎಲ್ಲಿ ನಿನ್ನ ತಿಂಡಿ ಬ್ಯಾಗು?

[ಒಳಗೆ ಕರೆದುಕೊಂಡು ಹೋಗುತ್ತಾನೆ. ರಂಗದಲ್ಲಿ ಎಲ್ಲರೂ ಹಾಗೆಯೇ—ಸಂತು ಕ್ಷಣಕಾಲ ಅವರು ಹೋದ ಹಾದಿಯನ್ನೇ ಮಿಕ ಮಿಕ ಮಾಡಿ ನೋಡುತ್ತಾರೆ— ಕಡೆಗೆ]

ಪಾತವ್ಮ :

"ಬಾ ಶೋಭಾ" ಅಂದ—ಅಂದರೆ, ಕನ್ನಡಾನೂ ಬರುತ್ತೆ ಅಂತ ಕಾಣುತ್ತೆ—ಈ ಪುಟ್ಟ ಸುಂದರೀಗೆ!

ಆನಂದು :

ಕನ್ನಡ ಪಾಠ ಬಲವಾಗಿ ನಡೀತಿದೆ ಹೆಂಡತೀಗೆ!

ಚಿಕ್ಕತ್ತೆ :

ಕನ್ನಡ ಬರದೇ ಇದ್ರೂ ಏನಂತೆ? ಹ್ಯಾಗಿದಾಳೆಯೇ ನಿನ್ನ ಸೊಸೆ—ಮಂಗಳಗೌರಿ ಹಾಗೆ! ಹಾಗೆ ನೋಡಿದರೆ ನಾವೇ ಕೊಳಕು! ಅವಳು ಬೆಳಕು; ಬರೀ ಬೆಳಕು!

ಭಟ್ಟರು :

ನೀವೇನೇ ಹೇಳೀ ತಾಯೀ—(ತಲೆ ಅಲ್ಲಾಡಿಸುತ್ತ) ಊ ಹೂಂ! ಉಗ್ರನರಸಿಂಹಯ್ಯನವರ ಮಗಳು ಶಾಂತಲಕ್ಷ್ಮೀಗೆ ಕೂಡ—ಈ ಲಕ್ಷಣ—ಈ ತೇಜಸ್ಸು—! ಉಹೂಂ! ಕಾಣಲಿಲ್ಲ!

ಚಿಕ್ಕತ್ತೆ :

ಮತ್ತೆ! ಈ ವರಸಾಮ್ಯ ನೋಡು—ರತೀ ಮನ್ಮಥ!

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಸ್ತರು :

ಯಾಕೆ ರಾಯರೇ—ಮಾತೇ ಆಡ್ತಿಲ್ಲ !

ರಾಯರು :

ಹಂ ! ಏನಾಡಲಿ ಮಾಸ್ತರೇ ! ಭ್ರಮೆ ಹಿಡಿದುಬಿಟ್ಟಿದೆ.

ಭಟ್ಟರು :

ಯಾವ ಮಾತೂ ಆಡೋ ಕಾರಣವಿಲ್ಲ ಸ್ವಾಮೀ ! ನಾನು ಹೇಳ್ತೇನೆ ಕೇಳಿ—ನಿಮ್ಮ ಪುಟ್ಟರಾಮೂ ಪುಣ್ಯವಂತ ! ನಿಮ್ಮ ಮನೆಯ ನಿತ್ಯ ಮಂಗಳೆ, ನಿಮ್ಮ—ಸೊಸೆ !! ಮುಖಲಕ್ಷಣ ನೋಡಿಯೇ ಹೇಳಿ ಬಿಡ್ತೇನೆ !

ಚಿಕ್ಕತ್ತೆ :

ಹಯ್ಯ ! ಅದನ್ನ ನೀವು ಹೇಳಬೇಕೆ ಹೇಳಿ ! ನಮ್ಮ ಪುಟ್ಟರಾಮೂ ಮುಟ್ಟಿದ್ದೆಲ್ಲಾ ಹೀಗೇ ಮೊದಲಿಂದ—ಅಪರಂಜಿ ಚಿನ್ನ !

ಪಾತಮ್ಮ :

ನಿಜ, ಅಪರಂಜಿ ಚಿನ್ನ !

ಮಾಸ್ತರು :

ಯಾಕೆ ರಾಯರೇ ಏನೂ ಮಾತೇ ಆಡೊಲ್ಲರಿ !

ರಾಯರು :

ಏನಾಡಲಿ ಮಾಸ್ತರೇ ?—ಭ್ರಮೆ ಹಿಡಿದುಬಿಟ್ಟಿದೆ !

ಆನಂದು :

ಆ ಬ್ಲಡ್ ಪ್ರಶರ್ ಅಲ್ಲಾ ತಾನೆ ?

ಮಾಸ್ತರು :

ಛೇ—ಛೇ—ಅದರ ಲಕ್ಷಣಾನೇ ಬೇರೆ ಕಣೋ....!

[ಇದ್ದಕ್ಕಿದ್ದಂತೆ ಹಿಂದಿನ ಪರದೆಯನ್ನು ಸೀಳಿ ಸರಿಸಿಕೊಂಡು ಒಳಗಿನ ಪಾತ್ರ—ಧಾರಿಗಳೆಲ್ಲ ಗುಲ್ಲೋಗುಲ್ಲು ಮಾಡುತ್ತಾ ಹೊರರಂಗಕ್ಕೆ ಬರುತ್ತಾರೆ. ಶೋಭಾನ ಕೈ ಚೀಲದಿಂದ ಸಿಹಿ ತಿಂಡಿಯನ್ನು ತೆಗೆ ತೆಗೆದು ಸಿಕ್ಕಿದವರ ಬಾಯಿಗೆ ಗಿಡಿಯುತ್ತಿದ್ದಾನೆ ಪುಟ್ಟರಾಮು ! ಮೋಹನ, ಮಂದಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಟ್ಟಿಸಿಕೊಂಡು ಹೋಗಿ– ಬಾಯಿಗೆ ತಿಂಡಿ ತುರುಕುತ್ತಿದಾನೆ. ಶೋಭಾ ಹೆಣ್ಣುಮಕ್ಕಳ ಬಾಯಲ್ಲಿ ಸಿಹಿ ಹಾಕುತ್ತಾಳೆ. ಈ ತಿರುಗು ಚಕ್ರದಲ್ಲಿ ಸಿಕ್ಕಿದ ಮುನ್ನೆಲೆಯ ಪಾತ್ರಗಳೂ ಓಡಿಯಾಡುತ್ತಾರೆ. ಒಬ್ಬರು ಇನ್ನೊಬ ರನ್ನು ಹಿಡಿದು ಬಾಯಿಗೆ ಸಿಹಿ ತುಂಬುತ್ತಾರೆ. ಮೊದಲು ಮೆಟ್ಟಿನಿಂತು– "ಹಯ್ಯೋ ದೂರ-ದೂರ ಮಡಿ! ಮುಟ್ಟಬೇಡಿರೋ" ಎಂದು ಹರಿದಾಡು ತ್ತಿದ್ದ ಚಿಕ್ಕತ್ತೆ ಕಡೆಗೆ ಸೋತು ಮೋಹನ ಹಟ ಮಾಡಿ ನೀಡಿದ ಸಿಹಿಗೆ ಬಾಯಿ ತೆರೆಯುತ್ತಾಳೆ. ಭಟ್ಟರನ್ನು ಹಿಡಿದು ರಾಯರು ಬಾಯಿಗೆ ಸಿಹಿ ತುಂಬುತ್ತಾರೆ! ಮಾಸ್ತರನ್ನು ಹಿಡಿದು ಆನಂದು ತಿನ್ನಿಸುತ್ತಾನೆ. ಹೋಳಿಯ ಓಕುಳಿಯಾಟದಂತೆ ರಂಗದ ಮೇಲೆ, ನಗೆ, ಕೇಕೆ, ಸ್ನೇಹ ಸಲುಗೆಯ ಬಡಿದಾಟ ಅಪ್ಪುಗೆಗಳಿಂದ ಅಲ್ಲೋಲ ಕಲ್ಲೋಲವಾಗುತ್ತದೆ. ಎಲ್ಲ– ತಹಬಂದಿಗೆ ಬರುವಷ್ಟರಲ್ಲಿ– ಒಳಗಿನಿಂದ ಹೊರಗೆ ಇಣುಕಿದ ಒಂದು ಹೆಣ್ಣು ಪಾತ್ರ– (ಹಿಂದೆ ಮ್ಲಾನಮುಖಿಯಾಗಿದ್ದವಳು) ಸರಕ್ಕನೆ ಹಿಂದೆ ಬಂದು ಹೇಳುತ್ತಾಳೆ.]

ಪಾತ್ರ :

(ಮೊದಲು ಮ್ಲಾನಮುಖಿ, ಅನಂತರ ಭಾರತಮಾತೆಯ ಪಾತ್ರವಹಿಸಿದ್ದವಳು. ಆ ಪಾತ್ರದ ಕಳೆದುಳಿದ ಉಡುಪು––ಆಭರಣಗಳೊಂದಿಗೆ ಇಪ್ಪಾಳೆ) ಅಲ್ಲಾ —ಬಾಗಿಲಲ್ಲಿ ಯಾರೋ ಕಾಯ್ತಾ ನಿಂತಿದಾರೆ—!

ರಾಯರು :

ಆ್ಞಂ!? ಯಾರು—ಇನ್ಯಾರು ಬರ್ತಾರೆ ಈಗ!

ಚಿಕ್ಕತ್ತೆ :

ಏ! ತಾಳ್ಕೋ—ನಿಲ್ಲಿಸಿರೋ ನಿಮ್ಮ ಗಲಾಟೆ—! ಮರ ಹತ್ತಿದ ಮಂಗಗಳ ಹಾಗೇ—

ಪಾತಮ್ಮ :

ನೋಡಿ—ಪುಟ್ಟರಾಮು ಬಂದ ಒಂದು ನಿಮಿಷದೊಳಗೆ—ಮನೇನ, ಮನಸನ್ನ ಆವರಿಸಿದ್ದ ಕತ್ತಲೇನೆಲ್ಲ ತೊಳೆದು ನಗೆ ಬೆಳಕು ತುಂಬಿ ಬಿಟ್ಟ! ಏ–ಈಗ ಸುಮ್ಮನಿರಿ ಎಲ್ಲ–ಯಾರೋ ಬಂದಿದಾರಂತೆ ಹೊರಗೆ —ಇಲ್ಲಿ ಎಲ್ಲರಿಗೂ ಹುಚ್ಚು ಹಿಡಿದಿದೆ ಅಂತಾ ತಿಳಕೊಂಡಾರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರ :

ಸಮ್ಮನೆ ನಿಂತಿದಾರೆ ಕಾಯ್ತಾ !

ರಾಯರು :

ಯಾರು ! — ಅದು !

ರಾಮು :

ಓ !! ಮರತೇ ಬಿಟ್ಟೆ....! ನನ್ನ....ನನ್ನ....

ಆನಂದ :

ಪುಟ್ಟರಾಮು ಮಾವನವರು !

ರಾಮು :

ಶೋಭಾನ ಇಲ್ಲ ಬಿಟ್ಟು ತೀರ್ಥಯಾತ್ರೆ ಹೊರಡುತ್ತೀನಿ ಅಂತ ನಿಂತಿದಾರೆ !

ಎಲ್ಲರೂ :

ಮಾವನವರು !! ಪುಟ್ಟರಾಮು ಮಾವನವರು !!

ರಾಮು :

ಹೌದು ! "ಹೊರಗೆ ಇರ್ತೀನಿ — ಒಳಗೆ ಬಂದರೆ ಹೇಗೋ ಏನೋ" — ಅಂತ ಸ್ವಲ್ಪ ಸಂಕೋಚ ಪಟ್ಟುಕೊಂಡು ಅಲ್ಲೇ ನಿಂತರು — ನಾವು — ಒಳಗೆ ಬಂದೆವು.

ಚಿಕ್ಕತ್ತೆ :

ಹಯ್ಯೋ ಎಲ್ಲಾದರೂ ಉಂಟೇನೋ ಪುಟ್ಟ !

ಪಾತಮ್ಮ :

ಯಾರಾದರೂ ಹೀಗೆ ಮಾಡ್ತಾರೇನೋ ಪುಟ್ಟ, ಪಾಪ — ಅವರನ್ನ — ಹೊರಗೆ ನಿಲ್ಲಿಸೀ....ಇಷ್ಟು ಹೊತ್ತೂ !!

ರಾಯರು :

ಕರಕೊಂಡು ಬಾರೋ — ಕರ್ಕೊಂಡು ಬಾ ಒಳಗೆ ! (ಪುಟ್ಟರಾಮು ಹೊರಡುತ್ತಾನೆ) ಅಲ್ಲ — ನೀನು ಪ್ರಪಂಚ ತಿಳಿದೋನು ಆನಂದು ! — ನೀನು ಕೂಡಾ ಅವರನ್ನ ಹಾಗೆ ಅಲ್ಲಿ ನಿಂತಿರೋದಕ್ಕೆ ಬಿಟ್ಟು — ಹೀಗೇ —

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂದು :

ಅಲ್ಲ—ಅವರ ಸಂಕೋಚ – ಸಹಜ ಅನ್ನಿಸ್ತು ನನಗೆ—'ಕರೀದೆ—ಒಳಗೆ ಬರಬಹುದೇ' ಅಂತ ಸ್ವಲ್ಪ ಅಳುಕು ಅವರಿಗೆ. ನಮ್ಮ ಮಾತೂ ಪೂರಾ ಬರೋದಿಲ್ಲ— ಅದಕ್ಕೇ. ಈಗ-ನೀವೇ ಒಳಗೆ—ಕರೆಸಿಕೊಂಡಿರಲ್ಲ! ಆದರೆ ಬಹಳ ದೊಡ್ಡ ಮನುಷ್ಯ ಆತ!

[ರಂಗದ ಪಾತ್ರಗಳೆಲ್ಲಾ ಬಾಗಿಲ ಕಡೆಗೆ ನೋಡುತ್ತಾ ಪ್ರತೀಕ್ಷಿಸಿ ನಿಂತಂತೆ ಪುಟ್ಟರಾಮುವಿನ ಹಿಂದೆ, ತಲೆಪಾಗನ್ನು ಧರಿಸಿ—ತಿಲಕಪುಂಡ್ರಗಳನ್ನು ಇಟ್ಟುಕೊಂಡು ಶುಭ್ರವಸ್ತ್ರಧಾರಿಗಳಾದ ಅರವತ್ತೈದರ ಆ ವೃದ್ಧರು ನಿಧಾನವಾಗಿ ನಡೆದು ಬಂದು, ರಂಗದ ಅಂಚಿನಲ್ಲಿ ನಿಂತು, ಗಂಭೀರವಾದ ನಗೆಮುಖದಿಂದ ಸುತ್ತಲೂ ಎಲ್ಲರನ್ನೂ ನಿಟ್ಟಿಸಿ ನೋಡುತ್ತಾರೆ. ಅರ್ಧಕ್ಷಣ ಮಹಾಮೌನ! ಇದ್ದಕ್ಕಿದ್ದಂತೆ ರಾಯರ ಕೈ, ಸಾವಕಾಶವಾಗಿ ಮುಂದಾಗುತ್ತದೆ. ಬಂದ ಆ ವೃದ್ಧರು ಉಕ್ಕಿಬರುತ್ತಿರುವ ಹರ್ಷದಿಂದ ಎರಡು ಹೆಜ್ಜೆ ಮುಂದೆ ಬಂದು ತಡವರಿಸಿ ನಿಲ್ಲುತ್ತಾರೆ—ಅನಂತರ, ಇದ್ದಕ್ಕಿದ್ದಂತೆ—ರಾಯರೂ, ವೃದ್ಧರೂ– ಒಬ್ಬರನ್ನೊಬ್ಬರು ಸಮೀಪಿಸಿ ಗಾಢವಾಗಿ ಆಲಂಗಿಸಿ ಹಾಗೆಯೇ ಪರಸ್ಪರವಾಗಿ ಬೆನ್ನುಗಳನ್ನು – ತಟ್ಟುತ್ತಾ ನಿಲ್ಲುತ್ತಾರೆ– ಕ್ಷಣಕಾಲ]

ಮಾಸ್ತರು :

ಹಾಂ! (ಗಟ್ಟಿಯಾಗಿ) ಇದು ಭಾರತೀಯ ಸಂಸ್ಕೃತಿ! 'ನಾನು – ನೀನು' ಅನ್ನೋದನ್ನು ತುಳಿದು—'ನಾವು—ನಾವೆಲ್ಲ—ಒಂದು' ಎನ್ನುವ ಹಿರಿಯ ಅರಿವಿನ ಹೊಳಹು ಇದು!

ಚಿಕ್ಕತ್ತೆ :

ಹೀಗೆ ಯಾರನ್ನೂ ಎಂದೂ ನಮ್ಮ ಶಾಮಿ ಅಪ್ಪಿ ಆದರಿಸಿದ್ದನ್ನು ನೋಡಿರಲಿಲ್ಲ ಕಣೆ ಪಾತೂ—ಅಬ್ಬ! ಇಕ್ಕಳ ಹಾಕಿ ಸಿಕ್ಕಿಸಿದ ಹಾಗಿದೆಯಲ್ಲೇ ಇಬ್ಬರನ್ನೂ!

[ಎಲ್ಲರೂ 'ಹೋ' ಎಂದು ನಗೆಯಾಡುತ್ತಾರೆ. ರಾಯರೂ ವೃದ್ಧರೂ ಹಸನ್ಮುಖದಿಂದ ಪರಸ್ಪರ ನಮಸ್ಕರಿಸುತ್ತಾರೆ. ರಾಯರೂ ಅತಿಥಿಗಳನ್ನು ಮರ್ಯಾದೆಯಿಂದ ಕೈ ಹಿಡಿದು—ಕುರ್ಚಿಗೆ ಕರೆತಂದು ಕುಳಿತುಕೊಳ್ಳುವಂತೆ ಸೂಚಿಸುತ್ತಾರೆ. ಆತ ಕೃತಜ್ಞತೆಯಿಂದ ವಂದಿಸುತ್ತಾನೆ—ಕುಳಿತುಕೊಳ್ಳುವುದಿಲ್ಲ]

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತಮ್ಮ :

(ಮೆಲ್ಲನೆ ಸೊಸೆಯ ಎಡೆಗೆ ಬಂದು ಆಕೆಯ ಗಲ್ಲ ಹಿಡಿದು—ಮುಖ ಎತ್ತಿ) ನಿಮ್ಮ ತಾಯಿ ಬರಲಿಲ್ಲವೆ—ಕಂದಾ !

ವಧು :

(ಮುಖ ಎತ್ತಿ ನೋಡುತ್ತಾ—ಅದರುವ ತುಟಿಗಳಿಂದ—ಭಾವದುಂಬಿ) ಹದಿನಾಲ್ಕು—ವರ್ಷ ಆಯ್ತು—ಆಯಿ ಹೋಗಿ .....

ಭಟ್ಟರು :

ಆಹಾ ! ಆಹಾ !! ಹೆಣ್ಣು ಮಗಳಿಲ್ಲಾ ಅಂತ ಪೇಚಾಡ್ತಿದ್ದರಲ್ಲ—ಅಂತೂ ಈ ವಯಸ್ಸಿನಲ್ಲೂ ಭಗವಂತ ಭಂಗಾರದಂತ ಹೆಣ್ಣುಮಗಳನ್ನ ಕರುಣಿಸಿದ ತಮಗೆ....ರಾಯರೇ !!

ವೃದ್ಧರು :

(ಮರಾಠೀ ಮಿಶ್ರಿತ ಕನ್ನಡದಲ್ಲಿ) ಶೋಭಾ....ಒಂದೇ ಮಗೂ....ನನಗೆ ! ಇವತ್ತು ಅವಳ—ಎದುರಿಗೇ ಹೇಳ್ತೀನಿ—ತುಂಬ ಒಳ್ಳೇ ಹುಡುಗೀ ....ಇವಳು ಇನ್ನ ನಿಮ್ಮ—ಮಗಳು ! ಇಂತಹ ಮನೆ—ಸೇರಿದ ಯಾವ ಮಗಳ ತಂದೆಗಾದರೂ ಇನ್ನೂ ಹೆಚ್ಚಿನ ಆನಂದ, ಸಂತೋಷ —ಎಲ್ಲಿದೆ ?

ಶೋಭಾ :

(ತಲೆ ತಗ್ಗಿಸಿ ನಿಧಾನವಾಗಿ ನಡೆದು ತಂದೆಯ ಬಳಿಗೆ ಬಂದು ಶೋಕಭರದಿಂದ) ಬಾಬಾ....ಬಾಬಾ !!

ವೃದ್ಧರು :

(ಆಕೆಯ ತಲೆ ಮುಖಗಳನ್ನು ಮೃದುವಾಗಿ ನೇವರಿಸುತ್ತಾ) ನನಗಿನ್ನೇನೂ ಭಯವಿಲ್ಲ ಕಂದಾ—ಸ್ವರ್ಗದಲ್ಲಿರೋ ನಿನ್ನ ತಾಯೀಗೂ ಈಗ—ತೃಪ್ತಿ ! ತೃಪ್ತಿ !

ಪಾತಮ್ಮ :

(ಬಳಿಗೆ ಹೋಗಿ ಅತ್ಯಂತ ಆಕ್ಕರೆಯಿಂದ ಸೊಸೆಯನ್ನು ಅಪ್ಪಿ ಆದರಿಸಿ ಕರೆತರುತ್ತಾ) ಬಾ—ನನ್ನ ಚಿನ್ನ—ಈ ಮನೆಯ ಬೆಳಕು ನೀನು ! ಕಣ್ಣೀರು ಹಾಕಬಾರದು ಕಂದಾ—

Sri Vidyabharathi Book Centre, Sringeri

CC-O. In Public Domain. Digitized by eGangotri

ವೃದ್ಧರು :

ಇನ್ನು—ತಾವೆಲ್ಲ ನನಗೆ—ಅಪ್ಪಣೆ ಕೊಟ್ಟರೆ—!

ರಾಯರು :

ಹ್ಹಾಂ! ಹಯ್ಯೋ—ಹೀಗಂದ್ರೇನು!

ರಾಮು :

ಹೊರಟು ನಿಂತಿದಾರಮ್ಮಾ ಅವರು! ಈ ಮನೇಗೇ ಮಗಳನ್ನ ಮುಟ್ಟಿಸಿ ನಿಮ್ಮನ್ನೆಲ್ಲ ನೋಡಿ ಹೊರಟುಬಿಡ್ತೀನಿ ಅಂತ ಅವರ ಕಂಡೀಷನ್!

ರಾಯರು
ಪಾತಮ್ಮ
ಚಿಕ್ಕತ್ತೆ } : ಸಾಧ್ಯವಿಲ್ಲ—ಸಾಧ್ಯವಿಲ್ಲ! ಎಲ್ಲಾದರೂ ಉಂಟೇ!

ಪಾತಮ್ಮ :

ನೀನಾದರೂ ಹೇಳು ನನ್ನ ತಾಯೀ—ನಿಮ್ಮ ತಂದೇಗೆ!

ವೃದ್ಧರು :

ಇಲ್ಲ—ತಾವು ನನಗೆ ಅಪ್ಪಣೆಕೊಡಲೇಬೇಕು—ಯಾತ್ರಾರ್ಥಿಯಾಗಿ ಹೊರಟಿದ್ದೇನೆ.

ಭಟ್ಟರು :

ಯಾತ್ರೆ!!

ಆನಂದು :

ಹುಂ! ಇಲ್ಲಿಂದ ಪೂನಾಕ್ಕೆ ಹೋಗಿ, ಮುಂದಿನ ವಾರ ಅಲ್ಲಿಂದ ಪ್ರವಾಸೀ ರೈಲಿನಲ್ಲಿ—ಭಾರತ ಯಾತ್ರೆಯಂತೆ ಅವರದ್ದು!

ರಾಯರು :

ಓ! ಹೋಗುವಿರಂತೆ! ಅ—ಅಂದಹಾಗೇ ನಾನೂ ಬರಬಹುದಲ್ಲ—ಯಾತ್ರೇಗೆ ತಮ್ಮ ಜೊತೆ!

ರಾಮು
ಪಾತಮ್ಮ } ಆ್ಹಂ!

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

(ಅವರನ್ನು ಗಮನಿಸದೆ) ನಮ್ಮ ನಾಡಿನಲ್ಲಿ ಬಿಡಿಬೀಸಾಗಿ ಓಡಾಡಿ ಬರೋಣಂತೆ—ಒಟ್ಟಿಗೆ! ನಮ್ಮ ಕಿಟ್ಟಣ್ಣ ಮಾಸ್ತರ ಲೆಕ್ಚರ್ ಕೇಳಿದ ಮೇಲೆ, ಜಾಗೃತ ಭಾರತಿಯ ದಿವ್ಯದರ್ಶನ ಮಾಡಬೇಕೂ ಅಂತ ನಿಶ್ಚಯಾ ಮಾಡಿಬಿಟ್ಟಿದೇನೆ!

ಪಾತವ್ಮ :

ನಾನೂ—?

ರಾಯರು :

ಹ—ಹೂಂ! ನೀನೂ!!

ಚಿಕ್ಕತ್ತೆ :

ಶಾಮೀೀೀ—?

ರಾಯರು :

ಹಂ!—ನೀನೂ ಚಿಕ್ಕತ್ತೇೀ!

ಭಟ್ಟರು :

ಅಂದರೇೀ—

ರಾಯರು :

ಓ—ನೀವೂ ಬನ್ನಿ ಭಟ್ಟರೆ—

ಮೋಹನ :

ಆಗಿದ್ದರೆ, ಕಿಟ್ಟಣ್ಣ ಮಾಸ್ತರನ್ನ ಕರೊಂಡು ನಾನೂ ಬರ್ತೀನಿ—ಅಣ್ಣಾ!

ಪಾತಮ್ಮ :

ಅವರ ಮಗಳು ಶಕುಂತಲಾ ಏನು ತಪ್ಪು ಮಾಡಿದ್ದಳೋ?

ಮಾಸ್ತರು :

ಸರಿ! ಅವಳೂ!

ರಾಯರು :

ಅಲ್ಲವೋ ನೀನ್ಯಾಕೆ ಬರಬೇಕೋ ಮೋಹನಾ?—ಇಲ್ಲೇ "ನಾವೆಲ್ಲರೂ ಒಂದೇ" ಅಂತ ನಾಟಕ ಮಾಡೋದನ್ನ ಬಿಟ್ಟು?

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಹನ :

ಹಾಗಲ್ಲಣ್ಣಾ ! ಜೀವನಾ ನೋಡಬೇಕಂತೆ ನಾಟಕಕ್ಕೆ ಬಲ ಬರಬೇಕಾದರೆ !

ರಾಯರು :

ಹಂ ! (ನಗುತ್ತ) ಸರಿ-ಹೊರಡು ಹಾಗಾದರೆ (ವೃದ್ಧರನ್ನು ಕುರಿತು) ಅಂತೂ ತಾವು ಇದಕ್ಕೆ ಒಪ್ಪಲೇಬೇಕು—ಒಂದು—ವಾರ, ಎಲ್ಲರೂ ಇಲ್ಲಿಯೇ ಇರೋಣ—ಒಟ್ಟಿಗೆ ಎಲ್ಲರ ಮನಸ್ಸು ಒಪ್ಪೋ ಹಾಗೆ ನನ್ನ ದೊಡ್ಡಮಗನ ಮದುವೆಯ ಆರತಿ-ಅಕ್ಷತೆ ಮಾಡಿ, ಊರಿಗೊಂದು ಊಟ ಹಾಕೋಣ. ಆಮೇಲೆ, ರೈಲಿನಲ್ಲಿ ಟಿಕಟ್ಟು ಸಿಕ್ಕದೆ ಇದ್ರೂ ಚಿಂತಿಲ್ಲ—ಒಂದು ವ್ಯಾನ್ ಮಾಡಿಕೊಂಡು ಎರಡು ತಿಂಗಳ ಪ್ರವಾಸ! ಇಲ್ಲ ಅನ್ನ ಬಾರದು ತಾವು ! ಒಪ್ಪಲೇಬೇಕ !

ವೃದ್ಧರು :

ಸರಿ—ಇನ್ನೇನು ಹೇಳಲಿ ತಮಗೆ—ಆಗಲಿ !

ಪಾತಮ್ಮ :

ಸಧ್ಯ ಒಪ್ಪಿದರಲ್ಲ—ಆಲ್ಲs ನನ್ನದೊಂದು ಮಾತಿದೆ ಅಂದರೆ ! ಪೂನಾಕ್ಕೆ ಹೋದ ಮೇಲೆ ಅಲ್ಲಿಂದ ಆ ಸಣ್ಣಹಳ್ಳೀ ಆಸ್ಪತ್ರೆಗೆ ಹೋಗಿ ನಮ್ಮ ಪುಟ್ಟೂನ ಉಳಿಸಿದ ಆ ದೊಡ್ಡ ಡಾಕ್ಟರನ್ನ ನೋಡಿ ಕೊಂಡು—

ರಾಯರು :

ಮತ್ತೆ ! ಅಂತೂ ಇದೊಂದು ಸಾರಿಯಾದರೂ ನೋಡು—ನಿಜವಾಗಿ ನನ್ನ ಮನಸ್ಸಿನಲ್ಲಿದ್ದ ಭಾವನೇಗೆ ಮಾತುಕೂಡಿಸಿದೆ.

ಭಟ್ಟರು :

ಹಹ....ಹಾಸ್ಯ ಪ್ರವೃತ್ತಿ ! ಹಾಸ್ಯ ಪ್ರವೃತ್ತಿ !

ಮಾಸ್ತರು :

ಅದೇ ಮತ್ತೆ ಜೀವನದ ಗಾಲೀಗೆ ಎಣ್ಣೆ ಇದ್ದಹಾಗೆ! ವಿನೋದ ಪ್ರವೃತ್ತಿ !!

ಭಟ್ಟರು :

ಅಂತು, ಇಷ್ಟೆಲ್ಲ ಅಂದಮೇಲೆ—ಮಾತೃದರ್ಶನಕ್ಕೆ—ನೂತನ ವಧೂ ವರರೂ—?

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಯರು :

ಈಗ ಬೇಡ ಅನ್ನು! ಇಲ್ಲಿಯೇ ಬಿಡಿಬೀಸಾಗಿ ನಾಲ್ಕು ದಿನ ವಿಶ್ರಮಿಸಿ ಕೊಳ್ಳಲೀ—ಪುಟ್ಟರಾವೂ ಹುಷಾರಾಗಿ, ಕೈನ ಸ್ಲಿಂಗ್‌ನಿಂದ ಕೆಳಗೆ ಬಿಟ್ಟ ಮೇಲೆ—ಬೇಕಾದ ಹಾಗೆ ಓಡಾಡಿಕೊಂಡು ಬರಲೀ ಇಬ್ಬರೂ—ಯಾರು ಬೇಡಾ ಅಂದರು!

ಆನಂದು :

ಆದರೆ—ಈಗಂತೂ—ಇಲ್ಲೇ ಇವರಿಗೆ ಬಲವಂತದ ಮಧುಚಂದ್ರ ಅಂದ ಹಾಗಾಯಿತು! (ಎಲ್ಲರ ನಗೆ)

ಮಾಸ್ತರು :

ಆದರೆ—ಪುಟ್ಟರಾವೂ ನೀನು ಪೇಷೆಂಟು—ಇನ್ನೂ! ನರ್ಸ್ ಜೊತೇಗೆ ಮಿಸ್ ಬಿಹೇವ್ ಮಾಡೀಯೆ—ಜೋಕೆ!! (ಎಲ್ಲರ ನಗೆ)

ರಾಯರು :

ಅಹ—ಹ—ಅಂತೂ, ಈಗ ಈ ಎರಡು ಗಂಟೆ ಕಾಲದಲ್ಲಿ ಎಲ್ಲಾನೂ, ನಾಟಕ ಅನ್ನೋ ಹಾಗೆ ನಡೆದುಹೋಯ್ತಲ್ಲ!!

ಪಾತಮ್ಮ :

ಏ ಮೋಹನಾ! ಅಂದಹಾಗೆ, ನಿನ್ನ ನಾಟಕಕ್ಕೆ ವಂಗಳ ಹಾಡಿದೆಯೇನೋ?

ಮೋಹನ :

(ಮತ್ತೆ ತಿಂಡಿ ತುಂಬಿಕೊಂಡು ಬಾಯಿ ಬಿಡುತ್ತ) ಇಲ್ಲಮ್ಮಾ—ಈಗ ಹಾಡ್ತೇವೆ ಎಲ್ಲಾರೂ ಸೇರಿ. (ತನ್ನ ನಟರಿಗೆ) ಬನ್ರೋ ಎಲ್ಲರೂ—ಸಾಲಾಗಿ ನಿಂತುಕೊಳ್ರೋ!! ಓ! (ತಂದೆ ಮತ್ತು ತರಿಗೆ) ಓ! ನೀವೂ join ಆಗ್ತೀರಾ! Very good, ಶುರುಮಾಡಿ ನಾಟಕ ಮುಕ್ತಾಯದ ಮಂಗಳ ಗೀತೇನ.

ಮಾಸ್ತರು :

ಹಾಡಿ ಜಾಗೃತ ಭಾರತಿಯ ಮಂಗಳ ಗಾನವನ್ನ!!

(ಜನಗಣಮನ ಹಾಡಿ ಮುಗಿಯುತ್ತಿದ್ದಂತೆ ಅಂಕದ ಪರದೆ ಮೆಲ್ಲ ಮೆಲ್ಲನೆ ರಂಗವನ್ನು ಮುಚ್ಚಿಕೊಳ್ಳುತ್ತದೆ)

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಡಾ॥ ಎಚ್. ಕೆ. ರಂಗನಾಥ್

Sri Vidyabharathi Book Centre, Sringeri